ಸಂಪುಟ: 14 Volume | ಸಂಚಿಕೆ: 49 Issue | ಪುಟಗಳು 08 Pages | ಮಂಗಳವಾರ 26 ಮೇ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಜಾತಿಯನ್ನು ಕೇಳಬೇಡಿ, ಹೇಳಬೇಡಿ ಮತ್ತು ಅದರ ಬಗ್ಗೆ ಚಿಂತಿಸಲೂಬೇಡಿ.

–ನಾರಾಯಣ ಗುರು

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ



ಕರ್ನಾಟಕ ಪ್ರವಾಸ ಯಶಸ್ವಿಯಾಗಿ ಪೂರ್ಣಗೊಳಿಸಿ ದೆಹಲಿಗೆ ತೆರಳುತ್ತಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ನಿತೀನ್ ನಬೀನ್ ಅವರನ್ನು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ. ಚವ್ಹಾಣ ಅವರು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆತ್ಮೀಯವಾಗಿ ಭೇಟಿ ಮಾಡಿ ಹೂಗುಚ್ಛ ನೀಡಿ ಗೌರವಪೂರ್ವಕವಾಗಿ ಬೀಳ್ಕೊಟ್ಟರು.

## ತೋಟಗಾರಿಕೆ ಬೆಳೆಗಳಿಂದ ಅಧಿಕ ಲಾಭ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಜಿಲ್ಲೆಯ ಚಟ್ನಳ್ಳಿ ಗ್ರಾಮದಲ್ಲಿ ತೋಟಗಾರಿಕೆ ಮಹಾವಿದ್ಯಾಲಯದಿಂದ 2026ರ ಮಾರ್ಚ್ 02 ರಿಂದ ಮೇ 24ರವರೆಗೆ ಹಮ್ಮಿಕೊಂಡ 84 ದಿನಗಳ ತೋಟಗಾರಿಕೆ ಗ್ರಾಮೀಣ ತೋಟಗಾರಿಕೆ ಕಾರ್ಯಾನುಭವ ಶಿಬಿರ ಭಾನುವಾರ ಮುಕ್ತಾಯಗೊಂಡಿತು.

ಈ ಸಂದರ್ಭದಲ್ಲಿ ತೋಟಗಾರಿಕೆ ವಸ್ತು ಪ್ರದರ್ಶನ ಉದ್ಘಾಟಿಸಿ, ಸಮಗ್ರ ಕೃಷಿ ಜೊತೆಗೆ ಹಣ್ಣು ತರಕಾರಿ ಹಾಗೂ ಪುಷ್ಪೋದ್ಯಮದಂತಹ ತೋಟಗಾರಿಕೆ ಬೆಳೆಗಳನ್ನು ಬೆಳೆದು ರೈತರು ಅಧಿಕ ಲಾಭವನ್ನು ಪಡೆಯಬೇಕೆಂದು ಕಲಬುರಗಿ ಕೃಷಿ ಕಾಲೇಜಿನ ನಿವೃತ್ತ ಡೀನ್ ಡಾ.ಸುರೇಶ್ ಪಾಟೀಲ್ ಹೇಳಿದರು. ಇತ್ತೀಚಿನ ದಿನಗಳಲ್ಲಿ ತೋಟಗಾರಿಕೆ ವಲಯವು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಕ್ಷೇತ್ರಗಳಲ್ಲೊಂದಾಗಿದೆ. ವಿದ್ಯಾರ್ಥಿಗಳು ಕಾರ್ಯಾನುಭವ ಶಿಬಿರದ ಅವಧಿಯಲ್ಲಿ



ಕಲಿತ ಪ್ರಾಯೋಗಿಕ ಕೌಶಲ್ಯವು ಮುಂದಿನ ದಿನಗಳಲ್ಲಿ ಆತ್ಮವಿಶ್ವಾಸ ಹಾಗೂ ವೃತ್ತಿಪರ ಸಾಮರ್ಥ್ಯವನ್ನು ಹೆಚ್ಚಿಸಲು ನೆರವಾಗುತ್ತದೆ ಎಂದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ತೋಟಗಾರಿಕೆ ಕಾಲೇಜಿನ ಡೀನ್ ಡಾ.ಎಸ್.ವಿ.ಪಾಟೀಲ್ ಮಾತನಾಡಿ, ರೈತರು ತಪ್ಪದೇ ತಮ್ಮ ತಾಕುಗಳ ಮಣ್ಣು ಪರೀಕ್ಷೆ ಮಾಡಿಸಿ, ಅದಕ್ಕನುಗುಣವಾಗಿ ಬೆಳೆಗಳ ಆಯ್ಕೆ ಮಾಡಿಕೊಂಡು ಅಧಿಕ ಇಳುವರಿ ಪಡೆಯಬಹುದೆಂದು ರೈತರಿಗೆ ಸಲಹೆ ನೀಡಿದರು.

## ಕೃಷಿ ಇಲಾಖೆ ಆವರಣದಲ್ಲಿ ಹೋರಾಟ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ತಾಲೂಕಿನಲ್ಲಿ ರೈತರ ಗುರುತಿನ ಚೀಟಿ (ಎಫ್ಐಡಿ) ನೋಂದಣಿ ಹಾಗೂ ರಸಗೊಬ್ಬರ ವಿತರಣೆಯಲ್ಲಿ ನಡೆಯುತ್ತಿರುವ ಅವ್ಯವಸ್ಥೆಗಳು ಕರ್ನಾಟಕ ಪ್ರಾಂತ ರೈತ ಸಂಘ (KPRS) ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಈ ಕುರಿತು ಗಂಗಾವತಿ ತಾಲೂಕು ಸಮಿತಿಯು ಮನವಿ ಸಲ್ಲಿಸಿ, ರೈತರಿಗೆ ಸರಿಯಾದ ರೀತಿಯಲ್ಲಿ ಸೇವೆ ದೊರಕುತ್ತಿಲ್ಲ ಎಂದು ಆರೋಪಿಸಿದೆ. ರೈತರು ಎಫ್.ಐ.ಡಿ (ಫಾರ್ಮರ್ ಐಡಿ) ಮಾಡಿಸಿಕೊಳ್ಳಲು ಹಲವು ದಿನಗಳಿಂದ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ದೂರಲಾಗಿದೆ. ರಸಗೊಬ್ಬರ ವಿತರಣೆಯಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ತಕ್ಷಣ ನಿಲ್ಲಿಸಿ, ರೈತರಿಗೆ ಬೇಕಾದ ಗೊಬ್ಬರವನ್ನು ಸಮರ್ಪಕವಾಗಿ




ವಿತರಿಸಬೇಕು ಈ ಸಮಸ್ಯೆಗಳನ್ನು ತಕ್ಷಣ ಪರಿಹರಿಸಿದ ರೈತರು ಹೋರಾಟದ ಹಾದಿ ಹಿಡಿಯುತ್ತಾರೆ ಎಂದು ಚೆಲುವರಾಯಸ್ವಾಮಿ ಅವರು ಮಾನ್ಯ ಕೃಷಿ ಸಚಿವರು ಕರ್ನಾಟಕ ಸರ್ಕಾರ ವಿಧಾನಸೌಧ ಬೆಂಗಳೂರು ಇವರಿಗೆ ಸಹಾಯಕ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಗಂಗಾವತಿ ಇವರ ಮುಖಾಂತರ ಮನವಿ ಸಲ್ಲಿಸಿ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಸಿ.ಎಚ್, ಬೀರಪ್ಪ, ಅನ್ನಪೂರ್ಣ ಶರಣಪ್ಪ, ಬೀರಪ್ಪ, ಓಂಕಾರಪ್ಪ, ರಾಮಪ್ಪ, ದಾಸಪ್ಪ, ಮುತ್ತಣ್ಣ, ದಾಸಪ್ಪ, ಬಸಪ್ಪ, ಉಪಸ್ಥಿತರಿದ್ದರು.

## ಅಗ್ನಿವೀರ್ ಆನ್‌ಲೈನ್ ಪರೀಕ್ಷೆ

**ಕಲಬುರಗಿ:** ಅಗ್ನಿಪಥ ಯೋಜನೆಯಡಿ ಸೇನಾ ನೇಮಕಾತಿಗಾಗಿ ಅಗ್ನಿವೀರ ಆನ್‌ಲೈನ್ ಸಾಮಾನ್ಯ ಪ್ರವೇಶ ಪರೀಕ್ಷೆ–2026ನ್ನು ಜೂನ್ 1 ರಿಂದ 12 ರವರೆಗೆ ಜರುಗಲಿದೆ ಎಂದು ಬೆಳಗಾವಿ ಆರ್ಮಿ ರಿಕ್ರೂಟಿಂಗ್ ಕಚೇರಿಯ ಡೈರೆಕ್ಟರ್ ರಿಕ್ರೂಟಿಂಗ್ ಕರ್ನಲ್ ಎ.ಕೆ ಉಪಾಧ್ಯಾಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಪ್ರವೇಶಪತ್ರವನ್ನು ಜಾಯಿನ್ ಇಂಡಿಯನ್ ಆರ್ಮಿ ವೆಬ್‌ಸೈಟ್‌ದಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಅಭ್ಯರ್ಥಿಗಳು ವೆಬ್‌ಸೈಟ್‌ದಿಂದ ಪ್ರವೇಶಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

## ಸಮರ್ಪಕ ಗೊಬ್ಬರ ವಿತರಣೆ ಮಾಡಿ

**ಹುಮನಾಬಾದ್:** ರಾಜಶೇಖರ ಬಿ. ಪಾಟೀಲ ಅವರು ರಾಜ್ಯ ಸರ್ಕಾರ ಹಾಗೂ ಕೃಷಿ ಇಲಾಖೆಗೆ ರೈತರಿಗೆ ಸಮರ್ಪಕವಾಗಿ ಬೀಜ ಮತ್ತು ಗೊಬ್ಬರ ವಿತರಣೆ ಮಾಡುವಂತೆ ತಾಕಿತು ಮಾಡಿದ್ದಾರೆ. ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ರೈತರು



ಕೃಷಿ ಚಟುವಟಿಕೆಗಳಿಗೆ ಸಜ್ಜಾಗಿದ್ದು, ಯಾವುದೇ ಕೊರತೆ ಉಂಟಾಗದಂತೆ ಸರ್ಕಾರ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ. ಕೃಷಿ ಕೇಂದ್ರಗಳಲ್ಲಿ ಉತ್ತಮ ಗುಣಮಟ್ಟದ ಬೀಜ ಹಾಗೂ ಗೊಬ್ಬರ ಲಭ್ಯವಾಗಬೇಕು. ಕೆಲವೆಡೆ ಕೃತಕ ಅಭಾವ ಸೃಷ್ಟಿಸಿ ರೈತರನ್ನು ಸಂಕಷ್ಟಕ್ಕೆ ತಳ್ಳುವ ಘಟನೆಗಳು ನಡೆಯಬಾರದು. ಅಧಿಕಾರಿಗಳು ನಿರಂತರ ಪರಿಶೀಲನೆ ನಡೆಸಿ ಕಾಳಬಜಾರ್ ಹಾಗೂ ಹೆಚ್ಚುವರಿ ದರ ವಸೂಲಿ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅವರು ತಾಕಿತು ಮಾಡಿದ್ದಾರೆ. ರೈತರು ದೇಶದ ಬೆನ್ನೆಲುಬಾಗಿದ್ದು, ಅವರಿಗೆ ಸಮಯಕ್ಕೆ ಸರಿಯಾಗಿ ಕೃಷಿ ಸಾಮಗ್ರಿಗಳು ದೊರಕಿದಾಗ ಮಾತ್ರ ಉತ್ತಮ ಬೆಳೆ ಸಾಧ್ಯವಾಗುತ್ತದೆ. ಸರ್ಕಾರ ರೈತರ ಹಿತದೃಷ್ಟಿಯಿಂದ ಅಗತ್ಯ ಕ್ರಮ ಕೈಗೊಂಡು ಪ್ರತಿಯೊಬ್ಬ ರೈತನಿಗೂ ಸುಗಮವಾಗಿ ಬೀಜ ಮತ್ತು ಗೊಬ್ಬರ ದೊರಕುವಂತೆ ನೋಡಿಕೊಳ್ಳಬೇಕು ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ ತಿಳಿಸಿದ್ದಾರೆ.

# ದಿಲ್ಲಿ ಕೈಯಲ್ಲೇ ಹೈವೋಲ್ಟೇಜ್

### ಸಿಎಂ ಹುದ್ದೆಯ ಹಂಚಿಕೆ | ನಾಯಕತ್ವ ಬದಲಾವಣೆಗೆ ಬಿರುಸು ಚಟುವಟಿಕೆ | ಗಣ್ಯರಿಗೆ ವರಿಷ್ಠರ ಬುಲಾವ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕರ್ನಾಟಕ ಕಾಂಗ್ರೆಸ್‌ನಲ್ಲಿ ಮತ್ತೊಂದು ಬದಲಾವಣೆಯ ಬಿರುಗಾಳಿ ಬೀಸ ತೊಡಗಿದೆ. ಮುಖ್ಯಮಂತ್ರಿ ಹುದ್ದೆಯ ಹಂಚಿಕೆ ಮತ್ತು ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ದಿಲ್ಲಿಯಲ್ಲಿ ಹೈವೋಲ್ಟೇಜ್ ಶುರುವಾಗಿದೆ.

ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಮೂರು ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ, ಹೈಕಮಾಂಡ್ ಮೇ 26 ರಂದು ನವದೆಹಲಿಗೆ ಬರುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತುರ್ತು ಕರೆ ನೀಡಿದೆ. ಈ ಸಭೆಯು ರಾಜ್ಯ ರಾಜಕಾರಣದಲ್ಲಿ ತೀವ್ರ ಕುತೂಹಲ ಮೂಡಿಸಿದೆ.

**ಗೊಂದಲಕ್ಕೆ ಶಾಶ್ವತ ಮುಕ್ತಾಯ:** ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವಿನ ಅಧಿಕಾರ ಹಂಚಿಕೆಯ ಒಪ್ಪಂದದ ಕುರಿತಾದ ಚರ್ಚೆಗಳು ಈ ಸಭೆಯ ಮುಖ್ಯ ಕಾರ್ಯಸೂಚಿಯಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

**ಭಿನ್ನಾಭಿಪ್ರಾಯಕ್ಕೆ ಮುಲಾಮು:** ಕಾಂಗ್ರೆಸ್ ಹೈಕಮಾಂಡ್ ಎರಡೂ ಬಣಗಳ ನಾಯಕರ ನಡುವಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿ, ರಾಜ್ಯದಲ್ಲಿ ಉದ್ಭವಿಸಿರುವ ನಾಯಕತ್ವದ ಗೊಂದಲಗಳಿಗೆ ಒಂದು ಶಾಶ್ವತ ಮುಕ್ತಾಯ ಹಾಡಲು ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

### ಹೈ ಆದೇಶಕ್ಕೆ ಸದಾ ಬದ್ಧ

ಹೈ ಕಮಾಂಡ್ ಬುಲಾವ್ ನೀಡಿದಾಗಲೆಲ್ಲಾ ದೆಹಲಿಗೆ ಹೋಗಲೇ ಬೇಕಲ್ಲ ಎಂದಿರುವ ಡಿಕೆ ಶಿವಕುಮಾರ್ ಅವರು, ಹೈಕಮಾಂಡ್ ನಿರ್ಧಾರಕ್ಕೆ ತಾವು ಬದ್ಧವಾಗಿರುವುದಾಗಿ ಸ್ಪಷ್ಟಪಡಿಸಿದ್ದಾರೆ. ಮತ್ತೊಂದೆಡೆ ಸಿದ್ದರಾಮಯ್ಯ ಅವರ ಬೆಂಬಲಿಗರು ಸಿದ್ದರಾಮಯ್ಯ ಅವರನ್ನೇ ಸಿಎಂ ಆಗಿ ಮುಂದುವರಿಸಬೇಕೆಂದು ಹೈಕಮಾಂಡ್ ಮೇಲೆ ಒತ್ತಡ ಹೇರಲು ದಿಲ್ಲಿಯಲ್ಲಿ ಬೀಡು ಬಿಟ್ಟಿದ್ದಾರೆ.



### ಸಂಪುಟ ಪುನಾರಚನೆಗೆ ಚರ್ಚೆ

ದೆಹಲಿ ಭೇಟಿಯ ವೇಳೆ ನಾಯಕತ್ವ ಬದಲಾವಣೆಯ ಜೊತೆಗೆ, ರಾಜ್ಯ ಸಚಿವ ಸಂಪುಟ ಪುನಾರಚನೆ, ರಾಜ್ಯಸಭಾ ಚುನಾವಣೆಗಳ ಕಾರ್ಯತಂತ್ರಗಳ ಕುರಿತಾಗಿಯೂ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಪಕ್ಷದ ಹಿರಿಯ ನಾಯಕರ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸವಿಸ್ತಾರವಾಗಿ ಚರ್ಚಿಸಲಿದ್ದಾರೆ ಎಂದು ತಿಳಿದು ಬಂದಿದೆ.

### ನಾಯಕತ್ವ ಬದಲಾವಣೆ?

2028ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರದ ಗದ್ದುಗೆ ಸಿಗಲಿದೆ ಎಂದಿರುವ ಡಿಕೆ ಶಿವಕುಮಾರ್, ನಾಯಕತ್ವ ಬದಲಾವಣೆ ಬಗ್ಗೆ ಏನನ್ನೂ ಹೇಳಿಲ್ಲ. ಇನ್ನು ಹೈಕಮಾಂಡ್ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ಮಾತ್ರವಲ್ಲದೇ, ರಾಜ್ಯದ ನಾಲ್ವರು ಹಿರಿಯ ಸಚಿವರಿಗೂ ದೆಹಲಿಗೆ ಬರುವಂತೆ ಸೂಚಿಸಿದೆ ಎಂದು ಮೂಲಗಳು ಖಚಿತ ಪಡಿಸಿವೆ.

### ದಿಲ್ಲಿಗೆ ಕರೆದಿರುವುದು ನಿಜ

ದೆಹಲಿ ಸಭೆ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನನ್ನನ್ನು ದೆಹಲಿಗೆ ಆಹ್ವಾನಿಸಲಾಗಿದೆ. ನಾಳೆ ಬೆಳಗ್ಗೆ 11 ಗಂಟೆಗೆ ಸಭೆ ಇದೆ. ಆದರೆ ಸಭೆಯ ಕಾರ್ಯಸೂಚಿ ನನಗೆ ತಿಳಿದಿಲ್ಲ. ಸಭೆಯ ದಿನಾಂಕ ಮತ್ತು ಸಮಯದ ಬಗ್ಗೆ ತಿಳಿಸಲು ವೇಣುಗೋಪಾಲ್ ನನಗೆ ಕರೆ ಮಾಡಿದ್ದಾರೆ" ಎಂದು ಹೇಳಿದ್ದಾರೆ.

## ಸೌಹಾರ್ದತೆಯಿಂದ ಬಕ್ರೀದ್ ಆಚರಣೆಗೆ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ತ್ಯಾಗ, ಬಲಿದಾನದ ಸಂಕೇತವಾಗಿರುವ ಬಕ್ರೀದ್ ಹಬ್ಬವನ್ನು ಸರ್ವರು ಶಾಂತಿ ಹಾಗೂ ಸೌಹಾರ್ದತೆ ಯಿಂದ ಆಚರಣೆ ಮಾಡುವುದರ ಜೊತೆಗೆ ಸರ್ಕಾರ ವಿಧಿಸಿರುವ ಮಾರ್ಗ ಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು ಎಂದು ಗ್ರಾಮೀಣ ಸಿಪಿಐ ಜಿ ಎಸ್ ಬಿರಾದಾರ ಹೇಳಿದರು.

ರವಿವಾರ ತಾಲೂಕಿನ ಮನ್ನಳ್ಳಿ ಪೊಲೀಸ್ ಠಾಣೆಯಲ್ಲಿ ಏರ್ಪಡಿಸಿದ ಬಕ್ರೀದ್ ಹಬ್ಬದ ಶಾಂತಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು ಅನೇಕತೆಯಲ್ಲಿ ಏಕತೆಯನ್ನು




ಹೊಂದಿರುವ ಭಾರತ ದೇಶದಲ್ಲಿ ಎಲ್ಲರೂ ಅಣ್ಣ ತಮ್ಮಂದಿರಂತೆ, ಯಾವುದೇ ಜಾತಿಗೆ ಸೀಮಿತವಾಗದೆ, ಎಲ್ಲರೂ ಪ್ರತಿಯೊಂದು ಹಬ್ಬಗಳಲ್ಲಿ ಭಾಗಿಯಾಗಿ ಉತ್ತಮ ಬಾಂಧವ್ಯದ ಜೊತೆಗೆ ಹಬ್ಬಗಳನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಬೇಕು ಎಂದರು.

## ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ದಾರಿ ಶಿಕ್ಷಣ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಶಿಕ್ಷಣವು ಕೇವಲ ಪಠ್ಯಪುಸ್ತಕಗಳಲ್ಲಿನ ಜ್ಞಾನಕ್ಕೆ ಸೀಮಿತವಾಗಿರದೆ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ದಾರಿಯಾಗಬೇಕೆಂದು ಚನ್ನಬಸವೇಶ್ವರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ವಿಜಯಕುಮಾರ್ ವಾರದ ಅಭಿಪ್ರಾಯಪಟ್ಟರು.

2026–27ನೇ ಶೈಕ್ಷಣಿಕ ವರ್ಷದ ಪ್ರಥಮ ಪಿಯುಸಿ ಕಾಲೇಜು ಪ್ರಾರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ, ವಿದ್ಯಾರ್ಥಿಗಳು ಶಿಸ್ತನ್ನು ಅಳವಡಿಸಿಕೊಂಡು ನಿರಂತರವಾಗಿ ಅಭ್ಯಾಸಿಸಬೇಕು. ನಮ್ಮ ಸಂಸ್ಥೆಯಲ್ಲಿ ಅಭ್ಯಾಸಿಸಿದ ಅನೇಕನು



ಉನ್ನತ ಹುದ್ದೆಗಳಲ್ಲಿ ಮಾತ್ರ ಇರದೇ ದೇಶ, ವಿದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸಂತೋಷದ ಸಂಗತಿ ಎಂದರು. ಉಪನ್ಯಾಸಕ ವಿಜಯಕುಮಾರ ಲಕ್ಕಾ ಮಾತನಾಡಿ ಸಮಯ ಅತ್ಯಂತ ಅಮೂಲ್ಯವಾದದ್ದು, ಅದನ್ನು ಸರಿಯಾಗಿ ಬಳಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

# ಇಸ್ಲಾಂಪುರ ಗ್ರಾಮಸ್ಥರ ಜೀವಭಯಕ್ಕೆ ಸಿಕ್ತು ಮುಕ್ತಿ..!

• ಮಲ್ಲಮ್ಮ ನುಡಿ ವಾರ್ತೆ ಬೀದರ್

ತಾಲೂಕಿನ ಇಸ್ಲಾಂಪುರ ಗ್ರಾಮದ ಬಸವೇಶ್ವರ ವೃತ್ತದ ಬಳಿ ಇದ್ದ ಶಿಥಿಲಗೊಂಡ ವಿದ್ಯುತ್ ಕಂಬದ ಕುರಿತು ದಿನಾಂಕ 23/05/2025 ರಂದು ಮಲ್ಲಮ್ಮ ನುಡಿ ಪತ್ರಿಕೆಯಲ್ಲಿ ವರದಿ ಪ್ರಕಟವಾದ ಕೇವಲ ಮೂರು ದಿವಸಗಳಲ್ಲಿ ಮಾಧ್ಯಮಗಳು ವ್ಯಕ್ತಪಡಿಸಿದ್ದ ಕಳಕಳಿಗೆ ಜೆಸ್ಕಾಂ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ರಮೇಶ್ ಪಾಟೀಲ್ ಅತ್ಯಂತ ಸಕಾರಾತ್ಮಕವಾಗಿ ಹಾಗೂ ಕ್ಷಿಪ್ರವಾಗಿ ಸ್ಪಂದಿಸಿದ್ದಾರೆ. ವರದಿ ಪ್ರಕಟವಾದ ಬೆನ್ನಲ್ಲೇ ಎಚ್ಚೆತ್ತ ಅಧಿಕಾರಿಗಳು, ತಮ್ಮ ಕೆಳ ಹಂತದ ಅಧಿಕಾರಿಗಳಿಗೆ ಸೂಚನೆ ನೀಡಿ ಕೇವಲ ಕೆಲವೇ ಗಂಟೆಗಳಲ್ಲಿ ಅಪಾಯಕಾರಿಯಾಗಿದ್ದ ಹಳೆಯ ಕಂಬವನ್ನು ತೆರವುಗೊಳಿಸಿ, ನೂತನ ವಿದ್ಯುತ್ ಕಂಬವನ್ನು ಅಳವಡಿಸುವ ಮೂಲಕ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.





ಮಲ್ಲಮ್ಮ ನುಡಿ
ವರದಿ ಫಲಶ್ರುತಿ
ದುರಂತಕ್ಕೆ ಆಹ್ವಾನ ತುಕ್ಕು ಹಿಡಿದ ವಿದ್ಯುತ್ ಕಂಬ

### ತುಕ್ಕು ಹಿಡಿದ ಕಂಬಕ್ಕೆ ಕಾಯಕಲ್ಪ

ಗ್ರಾಮದ ಪ್ರಮುಖ ರಸ್ತೆಯ ಬದಿಯಲ್ಲಿದ್ದ ಕಂಬವು ಸಂಪೂರ್ಣವಾಗಿ ತುಕ್ಕು ಹಿಡಿದು, ಕಾಂಕ್ರಿಟ್ ಉದುರಿ ಯಾವುದೇ ಕ್ಷಣದಲ್ಲಾದರೂ ಬೀಳುವ ಹಂತ ತಲುಪಿತ್ತು. ಇದರಿಂದಾಗಿ ಸ್ಥಳೀಯ ನಿವಾಸಿಗಳು ಹಾಗೂ ಹಾದಿಹೋಕರು ದಿನನಿತ್ಯ ತೀವ್ರ ಆತಂಕದಲ್ಲೇ ದಿನದೂಡುತ್ತಿದ್ದರು.

### ಅಧಿಕಾರಿಗಳ ಕರ್ತವ್ಯ ದಕ್ಷತೆಗೆ ಜನತೆ ಶ್ಲಾಘನೆ

ಸಮಸ್ಯೆಯ ಗಂಭೀರತೆಯನ್ನು ಅರಿತ ಜೆಸ್ಕಾಂ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ತಕ್ಷಣವೇ ಕಾರ್ಯಪ್ರವೃತ್ತರಾದರು. ಕೇವಲ ಭರವಸೆ ನೀಡದೇ, ಯುದ್ಧೋಪಾದಿಯಲ್ಲಿ ಸಿಬ್ಬಂದಿಯನ್ನು ಸ್ಥಳಕ್ಕೆ ರವಾನಿಸಿ, ಅತ್ಯಾಧುನಿಕ ಸುರಕ್ಷತಾ ಕ್ರಮಗಳೊಂದಿಗೆ ಹಳೆಯ ಕಂಬವನ್ನು ಯಶಸ್ವಿಯಾಗಿ ತೆರವುಗೊಳಿಸಿದ್ದಾರೆ. ಅದರ ಜಾಗದಲ್ಲಿ ಗಟ್ಟಿಯಾದ ಹೊಸ ಕಾಂಕ್ರಿಟ್ ಕಂಬವನ್ನು ನೆಟ್ಟು, ಹೈ–ವೋಲ್ಟೇಜ್ ವಿದ್ಯುತ್ ತಂತಿಗಳನ್ನು ಸರಿಪಡಿಸುವ ಮೂಲಕ ಸಂಭವನೀಯ ಮಹಾ ದುರಂತವನ್ನು ತಪ್ಪಿಸಿದ್ದಾರೆ. ಅಧಿಕಾರಿಗಳ ಈ ಸಮಯಪ್ರಜ್ಞೆ ಮತ್ತು ಕರ್ತವ್ಯನಿಷ್ಠೆಯು ಇಲಾಖೆಯ ಮೇಲಿರುವ ಸಾರ್ವಜನಿಕರ ವಿಶ್ವಾಸವನ್ನು ಮತ್ತಷ್ಟು ವೃದ್ಧಿಸುವಂತೆ ಮಾಡಿದೆ.

### ಅಧಿಕಾರಿಗಳ ಕಾರ್ಯವೈಖರಿ ಇತರರಿಗೆ ಮಾದರಿ

ಜೆಸ್ಕಾಂ ಅಧಿಕಾರಿಗಳ ಈ ಜನಪರ ಕಾಳಜಿ ಹಾಗೂ ಕೆಲಸದಿಂದಾಗಿ ಇಸ್ಲಾಂಪುರ ಗ್ರಾಮದ ಬಸವೇಶ್ವರ ವೃತ್ತದ ವ್ಯಾಪ್ತಿಯಲ್ಲಿ ಈಗ ನಿರಾಳ ವಾತಾವರಣ ನಿರ್ಮಾಣವಾಗಿದ್ದು, ಸಾರ್ವಜನಿಕರು ನಿರಾಳವಾಗಿ ಓಡಾಡುವಂತಾಗಿದೆ. ಇಲಾಖೆಯ ಈ ತ್ವರಿತ ಕಾರ್ಯವೈಖರಿ ಉಳಿದ ಅಧಿಕಾರಿಗಳಿಗೂ ಮಾದರಿಯಾಗಿದೆ.

ನಾವು ಸಾಕಷ್ಟು ಆತಂಕದಲ್ಲಿದ್ದೆವು. ಆದರೆ ಜೆಸ್ಕಾಂ ಅಧಿಕಾರಿಗಳು ತೋರಿದ ತಕ್ಷಣದ ಸ್ಪಂದನೆ ಮತ್ತು ಕಾಳಜಿ ನಿಜಕ್ಕೂ ಶ್ಲಾಘನೀಯ. ನಮ್ಮ ಮನವಿಗೆ ಗೌರವ ಕೊಟ್ಟು, ಯಾವುದೇ ಅನಾಹುತ ಸಂಭವಿಸುವ ಮುನ್ನವೇ ಅತ್ಯಂತ ವೇಗವಾಗಿ ಹೊಸ ಕಂಬ ಅಳವಡಿಸಿಕೊಟ್ಟಿದ್ದಾರೆ. ಗ್ರಾಮಸ್ಥರ ಜೀವ ರಕ್ಷಿಸಿದ ಅಧಿಕಾರಿಗಳ ತಂಡಕ್ಕೆ ಮತ್ತು ಇಡೀ ಜೆಸ್ಕಾಂ ಇಲಾಖೆಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

–ದತ್ತಾತ್ರೇಯ ವಾಗಮೋರೆ, ಚಂದ್ರಕಾಂತ್ ಮಡಿವಾಳ, ಇಸ್ಲಾಂಪುರ ಗ್ರಾಮಸ್ಥರು

## ಪೇಜಾವರ ಶ್ರೀಗಳು ತಮ್ಮ ಪ್ರಗತಿಪರ ಚಿಂತನೆಗಳಿಂದ ನಾಡಿನ ಜನರ ಮನಗೆದ್ದಿದ್ದರು: ಪರಿಸರ ಸಚಿವ, ಈಶ್ವರ ಬಿ. ಖಂಡ್ರೆ

## ವಿಲೇವಾರಿ ಆಗದ ಕಡತಗಳು: ಜನರ ಸಮಸ್ಯೆಗೆ ಶೀಘ್ರ ಪರಿಹಾರ ಅಗತ್ಯ

ಬೀದರ್ ಜಿಲ್ಲೆಯ ವಿವಿಧ ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅರ್ಜಿಗಳು, ಕಡತಗಳು ಹಾಗೂ ದೂರುಗಳು ತಿಂಗಳುಗಟ್ಟಲೆ ವಿಲೇವಾರಿಯಾಗದೇ ಬಾಕಿ ಉಳಿಯುತ್ತಿರುವುದು ಜನರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಜಮೀನು, ಪಿಂಚಣಿ, ವಿದ್ಯುತ್, ನೀರು, ಆದಾಯ, ಸಮಾಜ ಕಲ್ಯಾಣ ಸೇರಿದಂತೆ ಅನೇಕ ಇಲಾಖೆಗಳ ಕಡತಗಳು ಅಧಿಕಾರಿಗಳ ನಿರ್ಲಕ್ಷ್ಯದಿಂದ ಧೂಳು ತಿನ್ನುತ್ತಿರುವ ಪರಿಸ್ಥಿತಿ ಕಂಡುಬರುತ್ತಿದೆ.

## ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**

ಸಾಮಾನ್ಯ ಜನರು ಒಂದು ಕಡತ ವಿಲೇವಾರಿಗಾಗಿ ಕಚೇರಿಗಳಿಗೆ ಮತ್ತೆ ಮತ್ತೆ ಅಲೆದಾಡುವಂತಾಗಿದೆ. ಇದರಿಂದ ಜನರ ಸಮಯ, ಹಣ ಹಾಗೂ ಶ್ರಮ ವ್ಯರ್ಥವಾಗುತ್ತಿದೆ. ಕೆಲವರು ತುರ್ತು ಕೆಲಸಗಳಿಗಾಗಿ ಮಧ್ಯವರ್ತಿಗಳ ಸಹಾಯ ಪಡೆಯಬೇಕಾದ ಪರಿಸ್ಥಿತಿಯೂ ನಿರ್ಮಾಣವಾಗಿದೆ. ಸರ್ಕಾರ ಜನಸ್ನೇಹಿ ಆಡಳಿತದ ಮಾತು ಆಡುತ್ತಿದ್ದರೂ, ನೆಲಮಟ್ಟದಲ್ಲಿ ಅಧಿಕಾರಿಗಳ ಸ್ಪಂದನೆ ಕೊರತೆಯಾಗಿರುವುದು ಬೇಸರದ ಸಂಗತಿ.

ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆಗಳ ಹಿರಿಯ ಅಧಿಕಾರಿಗಳು ಬಾಕಿ ಇರುವ ಕಡತಗಳ ಬಗ್ಗೆ ವಿಶೇಷ ಪರಿಶೀಲನೆ ನಡೆಸಬೇಕು. ಪ್ರತಿಯೊಂದು ಇಲಾಖೆಯಲ್ಲಿ ಎಷ್ಟು ಕಡತಗಳು ಬಾಕಿ ಇವೆ ಎಂಬುದನ್ನು ಸಾರ್ವಜನಿಕವಾಗಿ ಪ್ರಕಟಿಸಿ, ನಿಗದಿತ ಅವಧಿಯಲ್ಲಿ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು. ಜನರ ಅರ್ಜಿಗಳಿಗೆ ತ್ವರಿತ ಸ್ಪಂದನೆ ನೀಡುವ ಅಧಿಕಾರಿಗಳನ್ನೂ ಪ್ರೋತ್ಸಾಹಿಸಬೇಕು.

ಸರ್ಕಾರಿ ಕಚೇರಿಗಳು ಜನಸೇವೆಗೆ ಇರುವುದೇ ಹೊರತು ಜನರನ್ನು ಅಲೆದಾಡಿಸಲು ಅಲ್ಲ ಎಂಬುದನ್ನು ಅಧಿಕಾರಿಗಳು ಮನಗಾಣಬೇಕು. ಆಡಳಿತ ವ್ಯವಸ್ಥೆ ಪಾರದರ್ಶಕ ಹಾಗೂ ವೇಗವಾಗಿದಾಗ ಮಾತ್ರ ಜನರಲ್ಲಿ ಸರ್ಕಾರದ ಮೇಲೆ ವಿಶ್ವಾಸ ಹೆಚ್ಚುತ್ತದೆ. ಆದ್ದರಿಂದ ಬೀದರ್ ಜಿಲ್ಲೆಯ ಎಲ್ಲಾ ಇಲಾಖೆಗಳು ಬಾಕಿ ಕಡತಗಳ ವಿಲೇವಾರಿಗೆ ತುರ್ತು ಕ್ರಮ ಕೈಗೊಂಡು ಜನರ ಸಮಸ್ಯೆಗಳಿಗೆ ಪರಿಹಾರ ನೀಡಬೇಕು.

## ವಿಶ್ವಜ್ಯೋತಿ ಬಸವಣ್ಣನವರ ವಿಚಾರಣ ಸಂಕಿರಣ ಹಾಗೂ ಸಂಗೀತ ಕಲಾಪ್ರತಿಭೋತ್ಸವ




**ಬೀದರ:** ಶ್ರೀ ಕವಿ ಸರ್ವಜ್ಞ ಸಂಘ ಹುಪಳಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಸಹಯೋಗದಲ್ಲಿ ವಿಶ್ವಜ್ಯೋತಿ ಬಸವಣ್ಣನವರ ಕುರಿತು ವಿಚಾರಣ ಸಂಕಿರಣ ಮತ್ತು ಸಂಗೀತ ಕಲಾಪ್ರತಿಭೋತ್ಸವ ಕಾರ್ಯಕ್ರಮವನ್ನು ರವಿವಾರ ಬಸವ ಭಜನ, ಗಾಂಧಿನಗರ ಮೈಲೂರ್‌ನಲ್ಲಿ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಸಾಹಿತಿ ಡಾ. ಎಂ.ಜಿ.ದೇಶಪಾಂಡೆ ಅವರು,ಸರ್ಕಾರವು ಸಂಘ ಸಂಸ್ಥೆಗಳಿಗೆ ವಿಶೇಷ ಸಹಾಯ ಹಾಗೂ ಪ್ರೋತ್ಸಾಹ ನೀಡಿದಾಗ ಮಾತ್ರ ಇಂತಹ ಕಲಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಮುಂದಿನ ದಿನಗಳಲ್ಲಿಯೂ ಇಂತಹ ಕಾರ್ಯಕ್ರಮಗಳ ಅಗತ್ಯತೆಯನ್ನು ಅವರು ಒತ್ತಿಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಸವೇಶ್ವರ ಮಂದಿರದ ಅಧ್ಯಕ್ಷ ಶ್ರೀ ನಾಗಭೂಷಣ ಮಡೆಪ್ಪಾ ಕಮಠಾಣೆ ಅವರು ಮಾತನಾಡಿ, ಹಳೆಯ ಜನಪದ ಕಲೆಗಳು ನಶಿಸುವ ಅಂಚಿನಲ್ಲಿದ್ದು, ಸರ್ವಜ್ಞ ಕಲಾ ಸಂಘವು ಗಾಂಧಿನಗರದಲ್ಲಿ ಬಸವಣ್ಣನವರ ವಿಚಾರಧಾರೆಗಳೊಂದಿಗೆ ಸಂಸ್ಕೃತಿ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಶ್ಲಾಘನೀಯ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ನಿವೃತ್ತ ಬಿಎಸ್‌ಎನ್‌ಎಲ್ ಅಧಿಕಾರಿ ಶ್ರೀ ಶಿವರಾಜ ಕಾಳಶೆಟ್ಟಿ ಅವರು ಬಸವಣ್ಣನವರ ಜೀವನ ಚರಿತ್ರೆ ಮತ್ತು ಅವರ ನಡೆದು ಬಂದ ದಾರಿಯ ಕುರಿತು ಸವಿವರವಾಗಿ ವಿವರಿಸಿದರು. ಕುಂಬಾರ ಸಮಾಜದ ಅಧ್ಯಕ್ಷ ಶ್ರೀ ವಿಠಲ ಕಾರಾಮುಂಗಿ ಸೇರಿದಂತೆ ಶ್ರೀ ನೂರಂದಪ್ಪ ಮೀನಕೇರಿ, ಶಾಮಣ್ಣಾ ನೇಳಗಿ ಹಾಗೂ ಶ್ರೀ ಮಲಶೆಟ್ಟಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಗೋಂದಳಿ ಪದ, ಗೀಗಿ ಪದ, ತತ್ವ ಪದ, ಭಜನೆ ಪದ, ಭಕ್ತಿಗೀತೆ, ಜಾನಪದ, ಮೊಹರಂ ಪದ, ಸಂಪ್ರದಾಯ ಪದ, ಮಹಿಳಾ ಡೊಳ್ಳು ಹಾಗೂ ಭುಲಾಯಿ ಪದ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಲಾ ಪ್ರದರ್ಶನಗಳು ನಡೆದವು. ಕಲಾವಿದರಾದ ಶಿವಾಜಿ ಗೋಂದಳಿ, ದೇವದಾಸ ಚಿಮಕೋಡ, ಮಲ್ಲಪ್ಪ ಯರನಳ್ಳಿ, ಸುಧಾಕರ ಹುಪಳಾ, ಸುನೀಲ ಹುಪಳಾ, ಸಂತೋಷ ಜೋಳದಾಬಾ, ಬೇಬಾವತಿ ಶಿವರಾಜ, ಶಂಕರ ಕಚೊಂಡಿ, ಚಿನ್ನಮ್ಮ ದೊಡ್ಡಮನಿ, ಶೋಭಾವತಿ ಹಾಗೂ ಶಾಂತಾಬಾಯಿ ಬಾಬುರಾವ್ ಮತ್ತು ತಂಡಗಳು ಪ್ರೇಕ್ಷಕರನ್ನು ಮನರಂಜಿಸಿದರು.

ಕಾರ್ಯಕ್ರಮದ ಸ್ವಾಗತವನ್ನು ಮನೋಹರ ಹುಪಳಾ ನೆರವೇರಿಸಿದ್ದು, ನಿರೂಪಣೆಯನ್ನು ಶ್ರೀಮತಿ ಸಿದ್ದಮ್ಮ ಬಸವಣ್ಣೋರ್ ನಡೆಸಿಕೊಟ್ಟರು.

# ಪಿಯುಸಿ: ಪ್ರಾರಂಭೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಸ್ವಾಗತ





• **ಮಲ್ಲಮ್ಮ ನುಡಿ ವಾರ್ತೆ ಕಲಬುರ್ಗಿ**

ಅನೇಕ ಶೈಕ್ಷಣಿಕ ಸಮಸ್ಯೆಗಳು,ಗೊಂದಲದ ಇಲಾಖೆಯ ಆದೇಶಗಳ ಒತ್ತಡಗಳ ಮಧ್ಯೆಯು ಈ ಬಾರಿಯ ಪಿಯುಸಿ ಫಲಿತಾಂಶ ಸುಧಾರಣೆಗೆ ಶ್ರಮಿಸಿದ ಉಪನ್ಯಾಸಕರು ನಿಜವಾಗಿಯು ಅಭಿನಂದನೆಗೆ ಅರ್ಹರು ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ ನಮೋಶಿ ಹೇಳಿದರು.

ಅವರು ಕಲಬುರ್ಗಿ ನಗರದ ಸರ್ಕಾರಿ ಬಾಲಿಕೆಯರ ಪದವಿಪೂರ್ವ ಕಾಲೇಜು ಹಾಗೂ ಆದರ್ಶನಗರ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಜರುಗಿದ 2026–27 ನೇ ಸಾಲಿನ ಕಾಲೇಜು ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ತಮ್ಮ ನಿರಂತರ ಪರಿಶ್ರಮ, ಬೋಧನಾ ಕೌಶಲ್ಯ ಹಾಗೂ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ನೀಡಿದ ಮಾರ್ಗದರ್ಶನವು ಅತ್ಯುತ್ತಮ ಫಲಿತಾಂಶಕ್ಕೆ ಕಾರಣವಾಗಿದೆ. ರಾಜ್ಯದಲ್ಲಿ ಸರ್ಕಾರಿ ಕಾಲೇಜುಗಳ ಸಾಧನೆ ಮತ್ತು ವಿದ್ಯಾರ್ಥಿಗಳ ಉತ್ತೀರ್ಣತೆಯ ಪ್ರಮಾಣದಲ್ಲಿ ದಾಖಲಾಗಿರುವ ಏರಿಕೆಯು ಶ್ಲಾಘನೀಯ ಎಂದು ಹೇಳಿದರು.ಕಲ್ಯಾಣ ಕರ್ನಾಟಕ ಭಾಗದಲ್ಲಿ ಉಪನ್ಯಾಸಕರ ಕೊರತೆಯಿದೆ ಹೀಗಾಗಿ ಫಲಿತಾಂಶದಲ್ಲಿ ಹೆಚ್ಚಿನ ಸ್ಥಾನಗಳನ್ನು ಗಳಿಸಿದೆ ಇರಬಹುದು ಆದರೆ ಶೇಕಡಾವಾರು ಫಲಿತಾಂಶದಲ್ಲಿ ಸುಧಾರಣೆಯಾಗಿದ್ದು ಇಡಿ ರಾಜ್ಯಕ್ಕೆ ಕಲಾ ವಿಭಾಗದಲ್ಲಿ ಪ್ರಥಮ, ಯಾರ್ಂಕ್ ವಿಜ್ಞಾನ , ವಾಣಿಜ್ಯ ವಿಭಾಗದಲ್ಲಿಯು ರಾಜ್ಯದ 10 ಯಾರ್ಂಕ್ ಗಳ ಪಟ್ಟಿಯಲ್ಲಿ ಗುರುತಿಸಿ ಕೊಂಡಿರುವದು ನಮ್ಮ ಜಿಲ್ಲೆಗೆ ಸಂತಸದ ವಿಷಯ, ಕಲ್ಯಾಣ ಕರ್ನಾಟಕದ ವಿದ್ಯಾರ್ಥಿಗಳು ತಮ್ಮ ಜಾಣ್ಮೆಯನ್ನು ಈ ಭಾರಿಯ ಫಲಿತಾಂಶದ ಸ್ಪಷ್ಟವಾಗಿ ನಿರೂಪಿಸಿದ್ದಾರೆ ಎಂದು ಹೇಳಿದರು.

ನಂತರ ವಿದ್ಯಾರ್ಥಿಗಳಿ ಪುಷ್ಪ ವಿತರಿಸುವ ಮೂಲಕ ಸ್ವಾಗತಿಸಿ ಪಿಯುಸಿ ವಿದ್ಯಾರ್ಥಿ ಜೀವನವು ಮಾನವನ ಜೀವನದ ಸುವರ್ಣ ಕಾಲ ಮತ್ತು ಭವಿಷ್ಯದ ಯಶಸ್ಸಿಗೆ ಭದ್ರ ಬುನಾದಿಯಾಗಿದೆ. ಈ ಹಂತದಲ್ಲಿ ಕಲಿಯುವ ಗುಣಗಳು, ಶಿಸ್ತು ಮತ್ತು ಮೌಲ್ಯಗಳು ವ್ಯಕ್ತಿಯ ಇಡೀ ಜೀವನದ ದಿಕ್ಕನ್ನು ನಿರ್ಧರಿಸುತ್ತವೆ. ಭವಿಷ್ಯದಲ್ಲಿ ಏನಾಗಬೇಕು ಎಂಬ ಸ್ಪಷ್ಟ ಗುರಿಯನ್ನು ರೂಪಿಸಿಕೊಳ್ಳಲು ಇದು ಸೂಕ್ತ ಸಮಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸರ್ಕಾರಿ ಬಾಲಿಕೆಯರ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ದೇವನಗೌಡ ಪಾಟೀಲ್, ಆದರ್ಶನಗರ ಕಾಲೇಜಿನ ಪ್ರಾಚಾರ್ಯರಾದ ರಾಜು ಗಂಗಾಧರ್ ಉಪನ್ಯಾಸಕರ ಸಂಘದ ಅಧ್ಯಕ್ಷರಾದ ಜೆ ಮಲ್ಲಪ್ಪ, ಪ್ರಧಾನ ಕಾರ್ಯದರ್ಶಿ ನರಸಪ್ಪ ರಂಗೋಲಿ ಹಾಗೂ ಎರಡು ಕಾಲೇಜಿನ ಎಲ್ಲ ಉಪನ್ಯಾಸಕರು ಬೋದಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

# ಗುರು ಕಾಲೋನಿಯಲ್ಲಿ ಸರಣಿ ಕಳ್ಳತನ! ಪೊಲೀಸರಿಂದ ವ್ಯಾಪಕ ತನಿಖೆ

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**



ಪಟ್ಟಣದ ಗುರು ಕಾಲೋನಿ ಬಡಾವಣೆಯಲ್ಲಿ ಭಾನುವಾರ ಮಧ್ಯ ರಾತ್ರಿ ಸರಣಿ ಮನೆ ಕಳವು ಪ್ರಕರಣ ಸಂಭವಿಸಿದ್ದು, ಲಕ್ಷಾಂತರ ಮೌಲ್ಯದ ಚಿನ್ನಾಭರಣ ಹಾಗೂ ನಗದು ಕಳ್ಳರ ಪಾಲಾಗಿದೆ. ಪ್ರಾರಂಭದಲ್ಲಿ ಸುನೀತಾ ಹನುಮಂತ ಅವರ ಮನೆಯಲ್ಲಿ ಕಳ್ಳರು ನುಗ್ಗಿ ಸುಮಾರು 6 ತೋಲೆ ಚಿನ್ನಾಭರಣ ಹಾಗೂ ₹1 ಲಕ್ಷ ನಗದು ಹಣ ಕಳವು ಮಾಡಿರುವುದಾಗಿ ತಿಳಿದುಬಂದಿದೆ. ಇದೇ ವೇಳೆ ಯೋಗೇಶ್ ಶಿವಕಾಂತ ಹಿರೇಮಠ ಅವರ ಮನೆಯಲ್ಲಿ ಕೂಡ ಕಳ್ಳತನ ನಡೆದಿದ್ದು, ಸುಮಾರು 5 ಗ್ರಾಂ ಚಿನ್ನಾಭರಣ ಮತ್ತು ₹8 ಸಾವಿರ ನಗದು ಕಳುವಾಗಿದೆ, ಹಾಗೆಯೇ ಪಕ್ಕದಲ್ಲಿರುವ ಕೆಲವು ಮನೆಗಳ ಬೀಗ ಮುರಿದು ಅಲ್ಲಿ ಏನು ಸಿಗದೇ ವಾಪಸಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಮನೆಯವರು ಹೊರಗಡೆ ತೆರಳಿದ್ದ ಸಮಯವನ್ನು ಗಮನಿಸಿ ಕಳ್ಳರು ಈ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ. ಘಟನೆ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

> ಮನೆಯ ಬಾಗಿಲುಗಳಿಗೆ ಗಟ್ಟಿ ಲಾಕ್ ಅಳವಡಿಸಿಕೊಳ್ಳುವುದು, ಸಿಸಿಟಿವಿ ಕ್ಯಾಮೆರಾ ವ್ಯವಸ್ಥೆ ಮಾಡುವುದು ಹಾಗೂ ರಾತ್ರಿ ವೇಳೆ ಮನೆಯ ಹೊರಭಾಗದಲ್ಲಿ ಬೆಳಕು ಇರುವಂತೆ ನೋಡಿಕೊಳ್ಳುವುದು ಅತ್ಯಂತ ಮುಖ್ಯವಾಗಿದೆ. ಅಪರಿಚಿತ ವ್ಯಕ್ತಿಗಳು ಮನೆ ಸುತ್ತಮುತ್ತ ತಿರುಗಾಡುತ್ತಿದ್ದರೆ ತಕ್ಷಣವೇ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. –ಬಿ.ಅಮರೇಶ್, ಸಿ.ಪಿ.ಐ, ಭಾಲ್ಕಿ

### ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ಹಂಚಿಕೊಳ್ಳಬಾರದು

ಕುಟುಂಬದವರು ಊರಿಗೆ ಹೊರಡುವ ಸಂದರ್ಭದಲ್ಲಿ ಮನೆ ಖಾಲಿಯಾಗಿದೆ ಎಂಬ ಮಾಹಿತಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬಾರದು. ಅಮೂಲ್ಯ ವಸ್ತುಗಳು, ನಗದು ಹಾಗೂ ಆಭರಣಗಳನ್ನು ಬ್ಯಾಂಕ್ ಲಾಕರ್‌ನಲ್ಲಿ ಇಡುವುದು ಸುರಕ್ಷಿತ ಕ್ರಮವಾಗಿದೆ. ನೆರೆಹೊರೆಯವರೊಂದಿಗೆ ಉತ್ತಮ ಸಂಪರ್ಕ ಇಟ್ಟುಕೊಂಡರೆ ಅನುಮಾನಾಸ್ಪದ ಚಟುವಟಿಕೆಗಳ ಬಗ್ಗೆ ತಕ್ಷಣ ಮಾಹಿತಿ ಪಡೆಯಲು ಸಹಾಯಕವಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶ್ವಾನದಳ ಹಾಗೂ ಬೆರಳಚ್ಚು ತಜ್ಞರನ್ನು ಕರೆಸಿ ತನಿಖೆ ಕೈಗೊಳ್ಳಲಾಗಿದೆ. ಈ ಕುರಿತು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಳ್ಳರ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ಬಡಾವಣೆಯ ಸಾರ್ವಜನಿಕರು ರಾತ್ರಿ ವೇಳೆ ಹೆಚ್ಚಿನ ಎಚ್ಚರಿಕೆ ವಹಿಸಬೇಕು ಹಾಗೂ ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದರೆ ತಕ್ಷಣ ಪೊಲೀಸರಿಗೆ ಮಾಹಿತಿ ನೀಡುವಂತೆ ಮನವಿ ಮಾಡಲಾಗಿದೆ.

# ಕೈಗಾರಿಕಾ ಪ್ರದರ್ಶನದ ಬಹುಮಾನ ವಿತರಣಾ ಸಮಾರಂಭ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**



ತಕ್ದುಸ್ ಮಾಬ್ ಹಜ್ರತ್ ಡಾಕ್ಟರ್ ಹಾಫಿಜ್ ಸಯ್ಯದ್ ಮೊಹಮ್ಮದ್ ಅಲಿ ಅಲ್–ಹುಸೈನಿ ಮೊಹಮ್ಮದ್ ಅಕ್ಬರ್ ಮೊಹಮ್ಮದ್ ಮೊಹಮ್ಮದ್ ಅಲ್–ಹುಸೈನಿ ಸಾಹೇಬ್ ಕಿಬ್ಲಾ, ಸಜ್ಜಾದಾ ನಶೀನ್ ದರ್ಗಾ ಹಜ್ರತ್ ಖ್ವಾಜಾ ಬಂದೇನವಾಜ್ ರಹ್ಮತುಲ್ಲಾಹಿ ಅಲೈಹಿ ಅವರು ಉರ್ಸ್ ಶರೀಫ್ ಸಂದರ್ಭದಲ್ಲಿ ಆಯೋಜಿಸಲಾದ ಅಖಿಲ ಭಾರತ ಕೈಗಾರಿಕಾ ಪ್ರದರ್ಶನವನ್ನು ಐತಿಹಾಸಿಕ ಹಾಗೂ ಪವಿತ್ರ ಪ್ರದರ್ಶನವೆಂದು ಬಣ್ಣಿಸಿದರು. ಈ ಕೈಗಾರಿಕಾ ಪ್ರದರ್ಶನದಲ್ಲಿ ವ್ಯಾಪಾರ ಮಾಡುವ ಅಂಗಡಿ ಮಾಲೀಕರಿಗೂ ಹಾಗೂ ಖರೀದಿದಾರರಿಗೂ ಹಜ್ರತ್ ಖ್ವಾಜಾ ಬಂದೇನವಾಜ್ ರಹ್ಮತುಲ್ಲಾಹಿ ಅಲೈಹಿಯವರ ಫಯೂಜ್ ಮತ್ತು ಬರಕತ್ ಲಭಿಸುತ್ತವೆ ಎಂದು ಹೇಳಿದರು.

ಹಜ್ರತ್ ಖ್ವಾಜಾ ಬಂದೇನವಾಜ್ ರಹ್ಮತುಲ್ಲಾಹಿ ಅಲೈಹಿಯವರ 622ನೇ ಉರ್ಸ್ ಶರೀಫ್ ಅಂಗವಾಗಿ ಆಯೋಜಿಸಲಾದ ಅಖಿಲ ಭಾರತ ಕೈಗಾರಿಕಾ ಪ್ರದರ್ಶನದ ಬಹುಮಾನ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು. ಸಂಪ್ರದಾಯದಂತೆ ಖ್ವಾಜಾ ಬಜಾರ್‌ನಲ್ಲಿ ಈ ಕಾರ್ಯಕ್ರಮ ನಡೆಯಿತು.

ಯಾದಗಿರಿ ಜಿಲ್ಲಾಧಿಕಾರಿ ರಾಹುಲ್ ಪಾಂಡ್ವೇ ತಕಾರಾಂ ಐಎಎಸ್ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಕೆಬಿಎನ್ ವಿಶ್ವವಿದ್ಯಾಲಯದ ನಿರ್ದೇಶಕ ಡಾ ಮುಸ್ತಫಾ ಅಲ್ ಹುಸ್ಸೇನಿ, ಉಪಕುಲಪತಿ ಪ್ರೊ. ಅಲಿ ರಝಾ ಮೂಸವಿ, ಪ್ರೋ ವೈಸ್ ಚಾನ್ಸಲರ್ ಪ್ರೊ. ಅಶ್ಫಾಕ್ ಅಹ್ಮದ, ರಿಜಿಸ್ಟ್ರಾರ್ ಮೀರ ವಿಲಾಯತ್ ಅಲಿ ಹಾಗೂ ಬಂದೇನವಾಜ್ ಕುಟುಂಬದ ಅನೇಕ ಶಹಜಾದಾಗಳು ಉಪಸ್ಥಿತರಿದ್ದರು. ಹಾಗೂ ಅಖಿಲ ಭಾರತ ಸಯ್ಯದ್ ಮೊಹಮ್ಮದ್ ಗೇಸುದರಾಜ್ ರಿಸರ್ಚ್ ಅಕಾಡೆಮಿಯ ನಿರ್ದೇಶಕ ಪ್ರೊ. ಮುಸ್ತಫಾ ಶರೀಫ್ ಗೌರವ ಅತಿಥಿಗಳಾಗಿ ಉಪಸ್ಥಿತರಿದ್ದರು.

ಈ ಕೈಗಾರಿಕಾ ಪ್ರದರ್ಶನದಲ್ಲಿ ವಿವಿಧ ವಿಭಾಗಗಳ ಅಂಗಡಿಗಳನ್ನು ಅವುಗಳ ಅಲಂಕಾರ, ಉತ್ಪನ್ನಗಳ ಗುಣಮಟ್ಟ ಹಾಗೂ ಗ್ರಾಹಕರೊಂದಿಗೆ ನಡೆಸಿದ ವರ್ತನೆ ಆಧರಿಸಿ ಬಹುಮಾನಗಳಿಗೆ ಆಯ್ಕೆ ಮಾಡಲಾಯಿತು. ಪ್ರತಿ ವಿಭಾಗದ ಅಂಗಡಿಗಳಿಗೆ ಪ್ರಥಮ ಹಾಗೂ ದ್ವಿತೀಯ ಬಹುಮಾನ ವಿತರಿಸಲಾಯಿತು. ಉರ್ಸ್ ವ್ಯವಸ್ಥಾಪನೆಗೆ ಸಹಕರಿಸಿದ ವಿವಿಧ ಸರ್ಕಾರಿ ಇಲಾಖೆಗಳ ಅಧಿಕಾರಿಗಳಿಗೆ ಸಹ ಅಭಿನಂದನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಅನೇಕ ವ್ಯಾಪಾರಿಗಳು ಸಜ್ಜಾದಾ ನಶೀನ್ ಸಾಹೇಬ್ ಕಿಬ್ಲಾ ಅವರಿಗೆ ಶಾಲು ಹೊದಿಸಿ, ಹಾರ ಹಾಕುವ ಗೌರವ ಪಡೆದರು. ಅತಿಥಿಗಳಿಗೂ ಸನ್ಮಾನ ಮಾಡಲಾಯಿತು.

# ಮನಃ ಪರಿವರ್ತನೆ, ಒಂದು ಕಿರು ನಾಟಕದ ವಿಸ್ತೃತ ವರದಿ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**





ಐ.ಎಲ್.ಎಂ.ಇ ಟ್ರಸ್ಟ್ ಪ್ರಿಸನ್ ಮಿನಿಸ್ಟರಿ ಟೀಂ ಬೆಂಗಳೂರು ಹಾಗೂ ಕೇಂದ್ರ ಕಾರಾಗೃಹ ಕಲಬುರಗಿಯ ಸಹಯೋಗದಲ್ಲಿ ಕೇಂದ್ರ ಕಾರಾಗೃಹ ಕಲಬುರಗಿಯಲ್ಲಿ, ಬಂದಿಗಳಿಗೆ ತಿದ್ದುಪಡಿ ಸೇವೆಗಳು ಮತ್ತು ಆಪ್ತ ಸಮಾಲೋಚನಾ ಅಡಿಯಲ್ಲಿ ಮನಃ ಪರಿವರ್ತನೆ ಹಾಗೂ ದುಶ್ಚಟಗಳಿಂದ ಆಗುವ ಪರಿಣಾಮ ಹಾಗೂ ಅದರಿಂದ ವ್ಯಸನ ಮುಕ್ತ ಕುರಿತು ಒಂದು ಕಿರು ನಾಟಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಜ್ಯೋತಿ ಬೆಳಗುವುದರ ಮೂಲಕ ಚಾಲನೆ ನೀಡಲಾಯಿತು. ಡಾ॥ ಡ್ಯಾನಿಯಲ್ ಮಂಚಾಲ್ ಸ್ಥಾಪಕರು ಮತ್ತು ಅಧ್ಯಕ್ಷಕರು ಐ.ಎಲ್.ಎಂ.ಇ ಟ್ರಸ್ಟ್ ಪ್ರಿಸನ್ ಮಿನಿಸ್ಟರಿ ಟೀಂ ಬೆಂಗಳೂರುರವರು ಈ ಕಾರ್ಯಕ್ರಮದ ಕುರಿತು ಮಾತನಾಡುತ್ತಾ, ಕಾರಾಗೃಹದಲ್ಲಿರುವ ಬಂದಿಗಳಗೋಸ್ಕರ ಮನಃ ಪರಿವರ್ತನೆಗಾಗಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ. ಅದರ ಲಾಭವನ್ನು ಎಲ್ಲಾ ಬಂದಿಗಳು ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಐ.ಎಲ್.ಎಂ.ಇ ಟ್ರಸ್ಟ್ ಪ್ರಿಸನ್ ಮಿನಿಸ್ಟರಿ ಟೀಂ ಬೆಂಗಳೂರಿನ ಸದಸ್ಯರಾದ ಶ್ರೀ ಮಧನ್ ಮಾತನಾಡುತ್ತಾ, ತನ್ನ ಜೀವನದ ನೈಜ ಕಥೆಯನ್ನು ಅಂದರೆ ಪೂರ್ವದಲ್ಲಿ ಕಾರಾಗೃಹದಲ್ಲಿ ಬಂದಿಯಾಗಿ ಅನುಭವಿಸಿದ ನೋವನ್ನು ಹಾಗೂ ಕಾರಾಗೃಹದಿಂದ ಪಡೆದ ಮನಃ ಪರಿವರ್ತನೆಯ ಹಲವಾರು ಕಾರ್ಯಕ್ರಮಗಳ ಅಡಿಯಿಂದ ನನ್ನ ಮನಸ್ಸನ್ನು ಪರಿವರ್ತಿಸಿಕೊಂಡು ಕಾರಾಗೃಹದಿಂದ ಉತ್ತಮ ನಡೆಯೊಂದಿಗೆ ಬಿಡುಗಡೆ ಹೊಂದಿ ಇವತ್ತು ಮನಃ ಪರಿವರ್ತನೆಯ ಸಲುವಾಗಿ ರಾಜ್ಯದ ಕಾರಾಗೃಹಗಳಿಗೆ ಭೇಟಿ ನೀಡಿ ತಮ್ಮ ಜೀವನದ ನೈಜ ಕಥೆಯನ್ನು ಬಂದಿಗಳಿಗೆ ತಿಳಿಸಿ ಹೇಳಿ ತಾವು ಬದಲಾದ ರೀತಿಯಲ್ಲಿ ನೀವು ಕೂಡ ಬದಲಾವಣೆ ಆಗಿ ಉತ್ತಮ ಜೀವನ್ನು ರೂಪಿಸಿಕೊಳ್ಳಬೇಕೆಂದು ತಿಳಿಸಿದೆ. ಇನ್ನೋರ್ವ ಸದಸ್ಯರಾದ ಶ್ರೀ ಹ್ಯಾರಿ ರಾಘವಸ್ ರವರು ಒಂದು ಗೀತೆಯೊಂದಿಗೆ ಓ ಮನುಜ ನಿನ್ನ ಗುರಿ ಏನು ನಿನ್ನ ನೆಲೆ ಏನು ಎಂದು ಹಾಡುವುದರೊಂದಿಗೆ ಬಂದಿಗಳಲ್ಲಿ ಆತ್ಮ ವಿಶ್ವಾಸವನ್ನು ತುಂಬುವಂತಹ ಮಾತುಗಳನ್ನು ಹಾಡಿದರು. ಈ ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದಕ್ಕಾಗಿ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ರಾಕೇಶ್ ಕಾಂಬಳೆರವರು ಡಾ॥ ಡ್ಯಾನಿಯಲ್ ಮಂಚಾಲ್ ಸ್ಥಾಪಕರು ಮತ್ತು ಅಧ್ಯಕ್ಷಕರು ಐ.ಎಲ್.ಎಂ.ಇ ಟ್ರಸ್ಟ್ ಪ್ರಿಸನ್ ಮಿನಿಸ್ಟರಿ ಟೀಂ ಬೆಂಗಳೂರು ಇವರಿಗೆ ಸನ್ಮಾನಿಸಿದರು. ಕೊನೆಯಲ್ಲಿ ಬಾಳೆ ಹಣ್ಣು ಹಾಗೂ ದೇವೆ ನಾಮಗಳ ಪುಸ್ತಕಗಳನ್ನು ಬಂದಿಗಳಿಗೆ ನೀಡಲಾಯಿತು.

ಈ ಸಂಸ್ಥೆಯ ಅಧೀಕ್ಷಕರಾದ ಶ್ರೀ ರಾಕೇಶ್ ಕಾಂಬಳೆರವರು ಮಾತನಾಡುತ್ತಾ ಈ ಸಂಸ್ಥೆಯಲ್ಲಿ ದಾಖಲಾಗಿರುವ ಬಂದಿಗಳಿಗೋಸ್ಕರ ನಿರಂತರವಾಗಿ ಮನಃ ಪರಿವರ್ತನೆಯ ಹಾಗೂ ಅರೋಗ್ಯದ ದೃಷ್ಟಿಯಿಂದ ನಿರಂತರವಾಗಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ತಾವುಗಳು ನಾವು ನೀಡುವ ಕಾರ್ಯಕ್ರಮಗಳು ಅಂದರೆ ಕೌಶಲ್ಯಾಧಾರಿತ ತರಬೇತಿಗಳು, ಆರೋಗ್ಯ ತಪಾಸಣೆ, ಸತ್ಸಂಗ, ಆಪ್ತ ಸಮಾಲೋಚನೆ ಇವುಗಳ ಲಾಭವನ್ನು ಪಡೆದುಕೊಂಡು ಸನ್ನಡೆ ಆಧಾರ ಮೇಲೆ ಬಿಡುಗಡೆ ಹೊಂದಬೇಕೆಂದು ಹೇಳಿದರು.

ಶ್ರೀ ಶ್ಯಾಮಿವೆಲ್ ಶದ್ರಕ್ ಬಾಲೇಕರ್‌ರವರು ಎಲ್ಲರಿಗೂ ದೇವರ ನಾಮವನ್ನು ಸ್ಮರಿಸಿದರು. ಈ ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ ಬಿ. ಸುರೇಶ್, ಸಹಾಯಕ ಅಧೀಕ್ಷಕರುರವರು ನಡೆಸಿಕೊಟ್ಟರು. ಸ್ವಾಗತ & ನಿರೂಪಣೆಯನ್ನು ಈ ಸಂಸ್ಥೆಯ ಶಿಕ್ಷಕರಾದ ನಾಗರಾಜ ಮೂಲಗೆರವರು ನಡೆಸಿಕೊಟ್ಟರು ಈ ಸಂಧರ್ಭದಲ್ಲಿ ಈ ಸಂಸ್ಥೆಯ ಜೈಲರ್‌ಗಳಾದ ಶ್ರೀಮಂತಗೌಡ ಪಾಟೀಲ್, ಶ್ರೀ ಪುಂಡಲಿಕ ಟಿ.ಕೆ. ಹಾಗೂ ಐ.ಎಲ್.ಎಂ.ಇ ಟ್ರಸ್ಟ್ ಪ್ರಿಸನ್ ಮಿನಿಸ್ಟರಿ ಟೀಂ ಬೆಂಗಳೂರಿನ ಸದಸ್ಯರು ಮತ್ತು ಕಾರಾಗೃಹದ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ವಿದ್ಯಾರ್ಥಿಗಳು ತಾವು ನಡೆದುಬಂದ ದಾರಿ ಮರೆಯಬಾರದು : ಡಾ. ಕರುಣಾಕರ ನಾಯ್ಕ

• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ಪ್ರತಿಯೊಬ್ಬ ವಿದ್ಯಾರ್ಥಿಯು ತಂದೆ ತಾಯಿ, ಗುರುಗಳು ಹಾಗೂ ತನಗೆ ಸಹಕಾರ ನೀಡಿದವರ ಯಾವುದೇ ಕಾರಣಕ್ಕೂ ಮರೆಯಬಾರದು. ನಾವು ಮರೆತರೆ ಮುಂದೆ ಜಗತ್ತು ನಮ್ಮನ್ನು ಮರೆಯುತ್ತದೆ. ಪ್ರತಿಭಾ ಪುರಸ್ಕಾರ ಪಡೆದ ಎಲ್ಲ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಉನ್ನತ ಹುದ್ದೆಗಳಿಗೆ ಸೇರುವಂತಾಗಬೇಕು ಎಂದು ವೈದ್ಯ ಡಾ. ಕರುಣಾಕರ ಎಂ. ನಾಯ್ಕ ಹೇಳಿದರು. ಪಟ್ಟಣದ ಪಿ.ಎಂ.ಹೈಸ್ಕೂಲ್ ರೈತಭವನದಲ್ಲಿ ರಾಷ್ಟ್ರೀಯ ಈಡಿಗ ಮಹಾಮಂಡಳಿ ಅವರು ಭಾನುವಾರ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಪ್ರತಿಭಾ ಪುರಸ್ಕಾರ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ರಾಜೇಂದ್ರ ವಿ. ನಾಯ್ಕ ಮಾತನಾಡಿ, ಶಿಕ್ಷಣ ಅತಿಮುಖ್ಯವಾದದ್ದು. ತಂದೆ ತಾಯಿಯರ ಬಳಿ ಎಷ್ಟೇ ಹಣವಿದ್ದರೂ ಕೂಡ ಮಕ್ಕಳು ಶಿಕ್ಷಣವನ್ನು ಪಡೆಯಲೇ ಬೇಕು. ಇಲ್ಲದಿದ್ದರೆ ಪ್ರಸ್ತುತ ದಿನಮಾನಗಳಲ್ಲಿ ಅಧಪತನಕ್ಕೆ ಕಾರಣವಾಗಲಿದೆ ಎಂದರು. ಅಧ್ಯಕ್ಷತೆ ವಹಿಸಿದ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ತಾಲೂಕು ಅಧ್ಯಕ್ಷ ದಾಮೋದರ ಜಿ. ನಾಯ್ಕ



ಮಾತನಾಡಿ, ಪ್ರತಿಭಾ ಪುರಸ್ಕಾರ ಎನ್ನುವುದು ಮಕ್ಕಳಿಗೆ ಉತ್ತೇಜನ ನೀಡುವಂತದ್ದು. ಹೀಗಾಗಿ ಪ್ರತಿವರ್ಷ ಸರಿಯಾದ ಸಮಯಕ್ಕೆ ನಾವು ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಲೇ ಬಂದಿದ್ದೇವೆ. ಮಕ್ಕಳು ಕೂಡ ಉತ್ತಮ ಶಿಕ್ಷಣವನ್ನು ಉಜ್ವಲ ಭವಿಷ್ಯ ರೂಪಿಸಿಕೊಳ್ಳಲಿ ಎಂದರು.

ಇದೇ ಸಂದರ್ಭದಲ್ಲಿ ವಲಯ ಅರಣ್ಯಾಧಿಕಾರಿಯಾಗಿ ಪದೋನ್ನತಿ ಹೊಂದಿದ ಆರ್.ಎಚ್.ನಾಯ್ಕ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ನಂತರ ಅವರು ಮಾತನಾಡಿ, ಸನ್ಮಾನ ಹಾಗೂ ವಿದ್ಯಾರ್ಥಿಗಳಿಗೆ ಪುರಸ್ಕಾರ ಮಾಡಿರುವುದು ಹೆಮ್ಮೆಯ ಸಂಗತಿ ಎಂದರು.

ಪ್ರತಿಭಾ ಪುರಸ್ಕಾರ: ಎಸ್‌ಎಸ್‌ಎಲ್‌ಸಿಯಲ್ಲಿ ಅತಿಹೆಚ್ಚು ಅಂಕಪಡೆದ ನೇಸರ ರಾಜೇಶ ನಾಯ್ಕ, ಸ್ವೀಕಾರ ಅರುಣ ನಾಯ್ಕ, ಭೂಮಿಕಾ ನಿರಂಜನ ನಾಯ್ಕ, ಪ್ರೀತಿ ಮಾರುತಿ ನಾಯ್ಕ, ಸಿಂಚನಾ ಸತೀಶ ನಾಯ್ಕ, ಸ್ವಾತಿ ಈಶ್ವರ ನಾಯ್ಕ, ನಿಹಾರ ರಾಜೇಶ ನಾಯ್ಕ, ತನಯ ರವೀಂದ್ರ ನಾಯ್ಕ, ರಾಘವಿ ರಾಘವೇಂದ್ರ ನಾಯ್ಕ, ಶ್ರೇಯಾ ಮನೋಜ ನಾಯ್ಕ, ಮಾನ್ಸಿ ರಾಮಚಂದ್ರ ನಾಯ್ಕ, ಶಿವಾನಿ ರವಿ ನಾಯ್ಕ, ಅಥರ್ವ ಹರೀಶ ನಾಯ್ಕ

ಪಿಯುಸಿ ಅತಿಹೆಚ್ಚು ಅಂಕಪಡೆದ ಅಮೂಲ್ಯ ಉದಯ ನಾಯ್ಕ, ಸಿಂಚನಾ ಪ್ರಕಾಶ ನಾಯ್ಕ, ಸ್ಮಿತಾ ಉದಯ ನಾಯ್ಕ, ಐಶ್ವರ್ಯ ಪ್ರಕಾಶ ನಾಯ್ಕ, ರಜತ ಗೋವಿಂದ ನಾಯ್ಕ, ಎ.ಜೆ.ಸ್ಪಂದನಾ, ನಂದನ ಉದಯ ನಾಯ್ಕ, ಸರ್ವೇಶ ಮಹಾಬಲೇಶ್ವರ ನಾಯ್ಕ, ಕವನ ಮಹಾಬಲೇಶ್ವರ ನಾಯ್ಕ, ಆದಿತ್ಯ ಮಂಜುನಾಥ ನಾಯ್ಕ ಇವರನ್ನು ಪುರಸ್ಕರಿಸಲಾಯಿತು.

ಸಮಿತಿಯ ಉಪಾಧ್ಯಕ್ಷರಾದ ರಮೇಶ ಎಸ್. ನಾಯ್ಕ ತೆಂಕಣ-ಕೇರಿ ಸ್ವಾತಿಸಿದರು. ಸಂಜಯ ಆರ್. ನಾಯ್ಕ ಪರಿಚಯಿಸಿದರು. ಮಂಜುನಾಥ ಕೆ. ನಾಯ್ಕ, ರಮೇಶ ನಾಯ್ಕ ಬೊಬ್ರುವಾಡ, ವಸಂತ ವಿ. ನಾಯ್ಕ, ನಾಗರಾಜ ಮಂಜಗುಣಿ ಇತರರಿದ್ದರು.

## ರಾಜ್ಯ ಮಟ್ಟದ ಚೆಸ್ನಲ್ಲಿ ಮಿಂಚಿದ ಶಿಕ್ಷಕಿ ಸುಜಾತಾ

# ರಾಷ್ಟ್ರಮಟ್ಟದ ಸ್ಪರ್ಧೆಗೆ ಐದನೇ ಬಾರಿ ಆಯ್ಕೆ; ಬಳ್ಳಾರಿಗೆ ಕೀರ್ತಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯ ಹೊಸಮೋಕಾ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ವೈ. ಸುಜಾತಾ ಅವರು ರಾಜ್ಯ ಮಟ್ಟದ ಸರ್ಕಾರಿ ನೌಕರರ ಚೆಸ್ ಸ್ಪರ್ಧೆಯಲ್ಲಿ ಅತ್ಯುತ್ತಮ ಸಾಧನೆ ತೋರಿ ರಾಷ್ಟಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಅವರ ಸಾಧನೆಗೆ ಶಿಕ್ಷಣ ವಲಯ ಹಾಗೂ ಸಾರ್ವಜನಿಕರಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಮೇ 23ರಿಂದ 25ರವರೆಗೆ ರಾಜ್ಯ ಮಟ್ಟದ ಸರ್ಕಾರಿ ನೌಕರರ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಿತ್ತು. ರಾಜ್ಯಾಧ್ಯಕ್ಷ ಷಡಕ್ಷರಿ ಅವರ ನೇತೃತ್ವದಲ್ಲಿ ನಡೆದ ಈ ಸ್ಪರ್ಧೆಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಸಾವಿರಾರು ಸರ್ಕಾರಿ ನೌಕರರು ಭಾಗವಹಿಸಿದ್ದರು.



ಮಹಿಳಾ ವಿಭಾಗದ ಚೆಸ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವೈ. ಸುಜಾತಾ ಅವರು ಆರಂಭದಿಂದಲೇ ಆತ್ಮವಿಶ್ವಾಸಭರಿತ ಆಟ ಪ್ರದರ್ಶಿಸಿದರು. ಹಲವು ಸುತ್ತುಗಳಲ್ಲಿ ಅನುಭವಿಗಳ ವಿರುದ್ಧ ಸಮರ್ಥ ಹೋರಾಟ ನೀಡಿದ ಅವರು ತಮ್ಮ ಚಾಣಾಕ್ಷ ನಡೆಗಳು ಹಾಗೂ ತಾಳ್ಮೆಯ ಆಟದ ಮೂಲಕ ತೀರ್ಪುಗಾರರು ಮತ್ತು ಪ್ರೇಕ್ಷಕರ ಗಮನ ಸೆಳೆದರು. ಅಂತಿಮವಾಗಿ ಉತ್ತಮ ಅಂಕಗಳೊಂದಿಗೆ ರಾಷ್ಟ್ರಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆದುಕೊಂಡಿದ್ದಾರೆ.


ಸುಜಾತಾ ಅವರು ಈ ಹಿಂದೆ ಕೂಡ ಹಲವು ಬಾರಿ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಗಮನಾರ್ಹ ಸಾಧನೆ ಮಾಡಿದ್ದರು. ಇದೀಗ ಐದನೇ ಬಾರಿ ರಾಷ್ಟ್ರಮಟ್ಟದ ಸರ್ಕಾರಿ ನೌಕರರ ಚೆಸ್ ಸ್ಪರ್ಧೆಗೆ ಆಯ್ಕೆಯಾಗಿರುವುದು ವಿಶೇಷವಾಗಿದೆ. ಗ್ರಾಮಾಂತರ ಪ್ರದೇಶದ ಸರ್ಕಾರಿ ಶಾಲೆಯ ಶಿಕ್ಷಕಿಯಾಗಿದ್ದರೂ ಕ್ರೀಡಾ ಕ್ಷೇತ್ರದಲ್ಲೂ ನಿರಂತರ ಸಾಧನೆ ಮಾಡುತ್ತಿರುವುದು ಇತರ ಶಿಕ್ಷಕರಿಗೆ ಪ್ರೇರಣೆಯಾಗಿದೆ ಎಂದು ಶಿಕ್ಷಣ ವಲಯದವರು ಅಭಿಪ್ರಾಯಪಟ್ಟಿದ್ದಾರೆ.

ವಿದ್ಯಾರ್ಥಿಗಳಿಗೆ ಪಾಠ ಬೋಧನೆಯ ಜೊತೆಗೆ ಚೆಸ್ ಮೇಲಿನ ಆಸಕ್ತಿಯನ್ನು ನಿರಂತರವಾಗಿ ಬೆಳೆಸಿಕೊಂಡಿರುವ ಸುಜಾತಾ ಅವರು, ಸಮಯ ಸಿಕ್ಕಾಗ ಅಭ್ಯಾಸ ನಡೆಸಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಅವರ ಸಾಧನೆ ಬಳ್ಳಾರಿ ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ ಎಂದು ಸಹೋದ್ಯೋಗಿಗಳು ತಿಳಿಸಿದ್ದಾರೆ.

ಸುಜಾತಾ ಅವರ ಸಾಧನೆಗೆ ಶಾಲೆಯ ಶಿಕ್ಷಕ ವೃಂದ, ಗ್ರಾಮಸ್ಥರು, ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿ, ರಾಷ್ಟ್ರಮಟ್ಟದ ಸ್ಪರ್ಧೆಯಲ್ಲೂ ಉತ್ತಮ ಸಾಧನೆ ಮಾಡುವಂತೆ ಶುಭ ಹಾರೈಸಿದ್ದಾರೆ.

## ಸಾರ್ವಜನಿಕರ ಆಕ್ರೋಶಕ್ಕೆ ಎಚ್ಚೆತ್ತ ಆಡಳಿತ "ಸುವರ್ಣ ಬಳ್ಳಾರಿ" ನಾಮಫಲಕ ದುರಸ್ತಿ ಕಾರ್ಯ ಆರಂಭ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಗರದ ದುರ್ಗಮ್ಮ ದೇವಸ್ಥಾನಕ್ಕೆ ತೆರಳುವ ಮಾರ್ಗದಲ್ಲಿರುವ ಸೇತುವೆ ಮೇಲಿನ "ಸುವರ್ಣ ಬಳ್ಳಾರಿ" ನಾಮಫಲಕ ಹಾನಿಗೊಳಗಾದ ಘಟನೆ ಸಾರ್ವಜನಿಕರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದ ಬೆನ್ನಲ್ಲೇ ಇಂದು ಸಂಬಂಧಪಟ್ಟ ಆಡಳಿತ ಎಚ್ಚೆತ್ತುಕೊಂಡು ದುರಸ್ತಿ ಕಾರ್ಯ ಆರಂಭಿಸಿದೆ. ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಸೇತುವೆಯ ಮೇಲಿನ ನಾಮಫಲಕ ತುಂಡಾಗಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದರು. "ಸಾರ್ವಜನಿಕ ಆಸ್ತಿ ನಮ್ಮದೇ ಕಾಪಾಡುವುದು ನಮ್ಮ ಕರ್ತವ್ಯ" ಎಂದು ನಾಗರಿಕರು ಮನವಿ ಮಾಡಿದ್ದಲ್ಲದೆ, ಸಂಬಂಧಪಟ್ಟ ಅಧಿಕಾರಿಗಳ ನಿರ್ಲಕ್ಷ್ಯವನ್ನೂ ಪ್ರಶ್ನಿಸಿದ್ದರು.

ಈ ಬೆಳವಣಿಗೆಯ ನಂತರ ಇಂದು ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಹಾನಿಗೊಳಗಾದ ನಾಮಫಲಕವನ್ನು ಪರಿಶೀಲಿಸಿ ತುರ್ತು ದುರಸ್ತಿ ಕಾರ್ಯ ಕೈಗೊಂಡರು. ಮುರಿದುಹೋಗಿದ್ದ ಭಾಗಗಳನ್ನು ತೆರವುಗೊಳಿಸಿ ಮರು ಅಳವಡಿಕೆ ಕಾರ್ಯವನ್ನು ಆರಂಭಿಸಿರುವುದು ಕಂಡುಬಂದಿತು. ಸ್ಥಳೀಯರು ಹೇಳುವಂತೆ, ಸಾರ್ವಜನಿಕರ ಒತ್ತಡ ಹಾಗೂ ಮಾಧ್ಯಮಗಳಲ್ಲಿ ವಿಷಯ ಪ್ರಸ್ತಾಪವಾದ ನಂತರವೇ ಆಡಳಿತ ಚುರುಕುಗೊಂಡಿದೆ. ಇಂತಹ ಘಟನೆಗಳು ಮರುಕಳಿಸದಂತೆ ಸೇತುವೆ ಸೇರಿದಂತೆ ಸಾರ್ವಜನಿಕ ಆಸ್ತಿಗಳ ಭದ್ರತೆಗೆ ಶಾಶ್ವತ ಕ್ರಮ ಕೈಗೊಳ್ಳಬೇಕು ಎಂದು ಜನರು ಒತ್ತಾಯಿಸಿದ್ದಾರೆ. ಇದಲ್ಲದೆ, ನಾಮಫಲಕ ಹಾನಿಗೆ ಕಾರಣರಾದವರ ಪತೆ-ಗಾಗಿ ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. "ಅಭಿವೃದ್ಧಿ ಕಾಮಗಾರಿಗಳನ್ನು ನಿರ್ಮಿಸುವುದಷ್ಟೇ ಸಾಲದು, ಅವುಗಳನ್ನು ಸಮರ್ಪಕವಾಗಿ ಸಂರಕ್ಷಿಸುವ ಜವಾಬ್ದಾರಿಯೂ ಆಡಳಿತದ ಮೇಲಿದೆ" ಎಂಬ ಮಾತು ಇದೀಗ ಮತ್ತೆ ಕೇಳಿಬರುತ್ತಿದೆ.

# ಕೌಶಲಗಳ ಸಮರ್ಪಕ ಬಳಕೆ ಮಾಡಿಕೊಳ್ಳಿ:ಪಾಟೋಳಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

25-ಇಂದಿನ ಸ್ಪರ್ಧಾತ್ಮಕ ಯಗದಲ್ಲಿ ಸಮರ್ಥವಾಗಿ ಪೈಪೋಟಿಯನ್ನು ಎದುರಿಸಲು ವಿಷಯಜ್ಞಾನದ ಜೊತೆಗೆ ಕೌಶಲಗಳು ಬೇಕು. ಅವುಗಳ ಸಮರ್ಪಕ ಬಳಕೆಯಾದಾಗ ಅವಕಾಶಗಳು ಬರಲು ಸಾಧ್ಯ ಎಂದು ಬಸವೇಶ್ವರ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಡಾ.ಮಾರುತಿ ಪಾಟೋಳಿ ಹೇಳಿದರು.

ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್. ನರಸಾಪೂರ ಕಲಾ ಹಾಗೂ ಎಂ.ಬಿ. ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ನಡೆದ ಬೀಳ್ಕೊಡುವ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ತಾವು ಆಯ್ಕೆ ಮಡಿಕೊಂಡ ವಿಷಯದ ಬಗ್ಗೆ ಗೌರವವಿರಬೇಕು. ಇತಿಹಾಸದ ವಿದ್ಯಾರ್ಥಿಗಳಿಗೆ ಸಾಕಷ್ಟು



ಅವಕಾಶಗಳಿವೆ. ಅವುಗಳನ್ನು ಸರಿಯಾದ ಸಮಯದಲ್ಲಿ ಬಳಸಿಕೊಳ್ಳಬೇಕು. ತಮ್ಮತನವನ್ನು ಗಟ್ಟಿಗೊಳಿಸಿ ತಮ್ಮಲ್ಲಿನ ಶಕ್ತಿಯನ್ನು ಬಿಟ್ಟುಕೊಡದೇ ಪರಿಶ್ರಮದಿಂದ ಗುರಿಯನ್ನು ಮುಟ್ಟಬೇಕು ಎಂದರಲ್ಲದೇ, ಸ್ವ-ಸಾಮರ್ಥ್ಯದ ಮೇಲೆ ನಂಬಿಕೆಯನ್ನಿಟ್ಟು ವಿಚಾರ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಸಂವಹನ ಕಲೆಯನ್ನು ಬೆಳೆಸಿಕೊಳ್ಳುವುದರ ಮೂಲಕ ಆತ್ಮವಿಶ್ವಾಸವನ್ನು ವೃದ್ಧಿಸಿಕೊಳ್ಳುವಂತೆ ಸಲಹೆ ನೀಡಿದರು.

ಜಂಟೀಕಾರ್ಯದರ್ಶಿ ಡಾ.ಎಸ್.ಬಿ.ಪರ್ವತೀಕರ ಮಾತನಾಡಿ, ಸಮಯ ಮತ್ತು ಅವಕಾಶಗಳ ಸದ್ಬಳಕೆಗೆ ಸಹನೆ ಬೇಕು. ಜೀವನದಲ್ಲಿ ಯಶ ಸಾಧನೆಗೆ ಪ್ರಯತ್ನ ಬೇಕು. ಉತ್ತಮ ಬದುಕಿಗೆ ಮೌಲ್ಯ ಹಾಗೂ ಸಂಸ್ಕಾರ ಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಶ್ರೀನಿವಾಸ ನರಗುಂದ, ವ್ಯಕ್ತಿಯ ವರ್ತನೆಯನ್ನು ಪರಿವರ್ತಿಸುವಲ್ಲಿ ಶಿಕ್ಷಣವು ಒಂದು ಉತ್ತಮ ಸಾಧನವಾಗಿದೆ. ವ್ಯಕ್ತಿಯ ಅಂತಿಮ ಗುರಿಯಾಗಿರುವ ವ್ಯಕ್ತಿತ್ವದ ವಿಕಾಸವನ್ನು ಇದರ ಮೂಲಕ ಸಾಧಿಸಬಹುದಾಗಿದೆ. ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವುದರ ಮೂಲಕ ವಿದ್ಯಾರ್ಥಿಗಳು ಕೀಳರಿಮೆಯಿಂದ ಹೊರಬರಬೇಕು ಎಂದರು.

ವಿದ್ಯಾರ್ಥಿಗಳ ಪರವಾಗಿ ಜ್ಯೋತಿ ಬಿಳಿಜಾಡರ ಮತ್ತು ಎಚ್.ಡಿ.ಮುದ್ದಾಪೂರ ಮಾತನಾಡಿದರು. ಬಸಮ್ಮ ಪ್ರಾರ್ಥಿಸಿದರು. ಸುಷ್ಮಿತಾ ಹಂಡರಗಲ್ ಸ್ವಾಗತಿಸಿದರು. ಐಶ್ವರ್ಯ ಲೋಖಂಡೆ ಪರಿಚಯಿಸಿದರು. ಅಭಿಷೇಕ ದಾಸಣ್ಣವರ ವಂದಿಸಿದರು. ಪ್ರಶಾಂತ ಭಜಂತ್ರಿ ನಿರೂಪಿಸಿದರು. ಸಂಯೋಜಕ ಎಂ.ಡಿ.ಕೋರವಾರ, ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ಇದ್ದರು.



ಹುಣಸೂರು: ನಗರದ ಹೆದ್ದಾರಿ ರಸ್ತೆ ಬಾಲಾಜಿ ಪ್ಯಾಲೇಸ್ ಮುಂಬಾಗ ಬಾರಿ ಮಳೆ ಗಾಳಿಯಿಂದ ಎರಡು ಮರಗಳನ್ನು ಕುಸಿದು ರಸ್ತೆಯ ಮಧ್ಯ ಬಿದ್ದಿರುವುದರಿಂದ ಸುಮಾರು ಒಂದು ತಾಸು ಒಂದು ಗಂಟೆ ಕಾಲ ಪ್ರಯಾಣಿಕರಿಗೆ ಕಾಯುವ ಸಮಯವಾಗಿತ್ತು ನಂತರವಿಷಯ ತಿಳಿದ ನಂತರವೇ ಸ್ಥಳಕ್ಕೆ ಅರಣ್ಯ ಇಲಾಖೆ ಅಗ್ನಿಶಾಮಕ ಪೊಲೀಸ್ ಇಲಾಖೆ ಜಂಟಿಯಲ್ಲಿ ಒಗ್ಗೂಡಿ ಮಧ್ಯ ರಸ್ತೆಯಲ್ಲಿ ಬಿದ್ದಿದ್ದ ದೊಡ್ಡ ಮರಗಳನ್ನು ತುಂಡು ತುಂಡು ಮಾಡಿ ತೆರಗೊಳಿಸಿ ಪ್ರಯಾಣಿಕರನ್ನು ಪ್ರಯಾಣಿಸಲು ಸುಗಮಗೊಳಿಸಿದರು ಸಂದರ್ಭದಲ್ಲಿ ನಗರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರು ಎಂ ಮಹದೇವಯ್ಯ ಅಗ್ನಿಶಾಮಕ ಹಣಾಧಿಕಾರಿ ಶಿವಾಜಿ ರಾವ್ ಪವರ್ ದಫೇದರ್ ವಿನಯ್ ಕುಮಾರ್ ಹಾಗೂ ಇನ್ನಿತರ ಸಿಬ್ಬಂದಿಗಳು ಕೂಡ ಹಾಜರಿದ್ದರು

# ವಿಕಲಚೇತನರ ಹಕ್ಕುಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಎಪಿಡಿ ಸಂಸ್ಥೆಯ ವತಿಯಿಂದ ವಿಕಲಚೇತನ ಸ್ವ ಸಹಾಯ ಸಂಘದ ಸದಸ್ಯರು ಹಾಗೂ ಆರ್.ಪಿ.ಡಿ ಟಾಸ್ಕ್ ಫೋರ್ಸ್ ಸದಸ್ಯರಿಗಾಗಿ ಅಂಗವಿಕಲ ಹಕ್ಕುಗಳ ಕಾಯ್ದೆ-2016 ಅರಿವು ಮತ್ತು ನಾಯಕತ್ವ ಗುಣಗಳ ಕುರಿತು ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ಗುರುಮಠಕಲ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸೋಮವಾರ ಆಯೋಜಿಸಲಾಯಿತು.



ಕಾರ್ಯಕ್ರಮದಲ್ಲಿ ವಿಕಲಚೇತನರ ನಿರೀಕ್ಷೆಗಳನ್ನು ಪಟ್ಟಿ ಮಾಡಿ, ಅಂಗವಿಕಲ ಹಕ್ಕುಗಳ ಕಾಯ್ದೆ-2016ರ ಪ್ರಮುಖ ಅಂಶಗಳು, ಹಕ್ಕುಗಳ ರಕ್ಷಣೆ, ನಿಂದನೆ ವಿರುದ್ದದ 89ನೇ ಸೆಕ್ಷನ್, ವಿಶೇಷ ನ್ಯಾಯಾಲಯಗಳ ವ್ಯವಸ್ಥೆ ಸೇರಿದಂತೆ ಒಟ್ಟು 17 ಅಧ್ಯಾಯಗಳ ಕುರಿತು ವಿವರವಾಗಿ ತಿಳಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ನಾಗಪ್ಪ ಜಿ ಅವಟಿ ಅವರು, "ವಿಕಲಚೇತನರು ತಮ್ಮ ಹಕ್ಕುಗಳನ್ನು ಅರಿತು ಪಡೆದುಕೊಳ್ಳಬೇಕು. ಸಮಾಜದಲ್ಲಿ ಆತ್ಮವಿಶ್ವಾಸದಿಂದ ಬದುಕಲು ನಾಯಕತ್ವಗುಣಗಳನ್ನು ಬೆಳೆಸಿಕೊಳ್ಳುವುದು ಅಗತ್ಯ" ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ನಾಯಕತ್ವಗುಣಗಳನ್ನು ಹೇಗೆ ಅಭಿವೃದ್ಧಿಪಡಿಸಿಕೊಳ್ಳಬೇಕು ಹಾಗೂ ಸಮಾಜದಲ್ಲಿ ಅವುಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದರ ಕುರಿತು ಸ್ಪಷ್ಟ ಮಾಹಿತಿ ನೀಡಲಾಯಿತು.

ಎಪಿಡಿ ಸಂಸ್ಥೆಯ ತಾಲೂಕು ಸಂಯೋಜ-ಕರಾದ ವಿರುಪಾಕ್ಷಿ ಮಾಲಿ ಪಾಟೀಲ್ ಸೇರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ ವಿಕಲಚೇತನ ಸ್ವ ಸಹಾಯ ಸಂಘದ ಸದಸ್ಯರು, ಆರ್.ಪಿ.ಡಿ ಟಾಸ್ಕ್ ಫೋರ್ಸ್ ಸದಸ್ಯರು, ಎಪಿಡಿ ಸಂಸ್ಥೆಯ ನಾಗಮಣಿ, ಸುರೇಶ್, ತಾಲೂಕು ಅಧ್ಯಕ್ಷರಾದ ಸಿದ್ದನಗೌಡ ನಜರಪೂರ ಸೇರಿದಂತೆ ಒಟ್ಟು 49 ಜನರು ಭಾಗವಹಿಸಿದ್ದರು.

# ಮದ್ಯವರ್ಜನ ಶಿಬಿರ ಸಮಾರೋಪ ಪಾನಮುಕ್ತರಾದ 48 ಜನರು



• ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ

ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆ ಅವರ ನೇತೃತ್ವದಲ್ಲಿ ನಡೆಯುವ ಮದ್ಯ ವರ್ಜನ ಶಿಬಿರವು ಅನೇಕ ಹೆಣ್ಣುಮಕ್ಕಳ ಕಣ್ಣೀರು ಒರೆಸುವ ಕಾರ್ಯಕ್ರಮವಾಗಿದೆ ಎಂದು ತಾಲೂಕಿನ ಯರನಾಳ ವಿರಕ್ತಮಠದ ಸಂಗನಬಸವ ಸ್ವಾಮೀಜಿ ಅಭಿಪ್ರಾಯಪಟ್ಟರು.

ತಾಲೂಕಿನ ಯರನಾಳದಲ್ಲಿ ಸೋಮವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿದ್ದ 2056ನೇ ಮದ್ಯವರ್ಜನ ಶಿಬಿರದ ಸಮಾರೋಪದ ಪಾವನ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಹೆಗ್ಗಡೆ ಪೂಜ್ಯರ ಸಮುದಾಯ ಕಾರ್ಯಕ್ರಮಗಳು ದೇಶಕ್ಕೆ ಮಾದರಿಯಾಗಿವೆ ಎಂದು ಶುಭ ಹಾರೈಸಿದರು.

ಕಲಬುರ್ಗಿ ಪ್ರಾದೇಶಿಕ ನಿರ್ದೇಶಕ ದಿನೇಶ ಪೂಜಾರಿ ಮಾತನಾಡಿ, ಒಂದು ಗ್ರಾಮ ಬದಲಾವಣೆಗೆ ಮೊದಲು ನಾವು ಬದಲಾಗುವುದು ಮುಖ್ಯವಾಗಿದೆ. ಕುಡಿತ ಬಿಟ್ಟು ಉಳಿತಾಯಕ್ಕೆ ಮುಂದಾಗಬೇಕು. ನಾವು ಮಾಡುವ ಉಳಿತಾಯ ಕುಟುಂಬ ಹಾಗೂ ದೇಶಕ್ಕೆ ಉಪಯೋಗವಾಗುವ ಕಲೆ ತಿಳಿಸಿಕೊಟ್ಟರು.

ತಾಲೂಕಾ ಯೋಜನಾಧಿಕಾರಿ ಪ್ರಸನ್ ಆರ್ ಸ್ವಾಗತಿಸಿದರು. ಜಿಲ್ಲಾ ನಿರ್ದೇಶಕ ಮೋಹನ ನಾಯ್ಕ, ಪರಶುರಾಮ ಜಮಖಂಡಿ, ಬಸವರಾಜ ಜಾಲಗೇರಿ, ಗುಂಡಪ್ಪಗೌಡ ಬಿರಾದಾರ, ಸಾವಿತ್ರಿ ಕಲ್ಯಾಣಶೆಟ್ಟಿ, ವಲಯದ ಮೇಲ್ವಿಚಾರಕ , ಸೇವಾ ಪ್ರತಿನಿಧಿ, ಮೇಲ್ವಿಚಾರಕ ಶ್ರೇಣಿ ಸಿಬ್ಬಂದಿಗಳು ಉಪಸ್ಥಿತರಿದ್ದರು. ಪಾನಮುಕ್ತ ಜೀವನ: ಶಿಬಿರದಲ್ಲಿ 48 ಜನ ಪಾನಮುಕ್ತ ಜೀವನಕ್ಕೆ ಕಾಲಿರಿಸಿ, ಹೊಸ ಜೀವನದ ಕನಸು ಕಟ್ಟಿಕೊಂಡಿದ್ದಾರೆ.

# ಅತಿಥಿ ಉಪನ್ಯಾಸಕರ ನೇಮಕಕ್ಕೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.25-ಕಲಬುರಗಿ ಜಿಲ್ಲೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಕಲಬುರಗಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರು ತಿಳಿಸಿದ್ದಾರೆ.

ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರುಗಳು ನೇಮಕಗೊಂಡು ಕರ್ತವ್ಯಕ್ಕೆ ಹಾಜರಾಗುವವರೆಗೆ ಅತಿಥಿ ಉಪನ್ಯಾಸಕರನ್ನು ಷರತ್ತುಗೊಳಪಟ್ಟು ಆಯಾ ಹುದ್ದೆಗೆ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನು ಪರಿಗಣಿಸಿ ಮೆರಿಟ್ ಆಧಾರದಲ್ಲಿ ಆಯ್ಕೆ ಮಾಡಲು ಅನುಮತಿ ನೀಡಲಾಗಿದೆ. ಅತಿಥಿ ಉಪನ್ಯಾಸಕರ ನೇಮಕಾತಿಯು ಸರ್ಕಾರದ ಆದೇಶದ ಷರತ್ತುಗಳಿಗೊಳಪಟ್ಟಿರುತ್ತದೆ. ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಸಂಬಂಧಪಟ್ಟ ಕಾಲೇಜಿನ ಪ್ರಿನ್ಸಿಪಾಲರಿಗೆ 2026ರ ಮೇ 29 ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬೇಕು. ಪ್ರಾಂಶುಪಾಲರು ಆಯ್ಕೆ ಮಾಡಿದ ಅಭ್ಯರ್ಥಿಗಳ ವಿಷಯವಾರು ಪಟ್ಟಿಯನ್ನು ಕಚೇರಿಗೆ ಸಲ್ಲಿಸಲು 2026ರ ಮೇ 30 ರಂದು ಕೊನೆಯ ದಿನವಾಗಿದೆ. ಕಾಲೇಜುವಾರು ಖಾಲಿ ಹುದ್ದೆಗಳ ವಿವರ ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಮಿನಿ ವಿಧಾನಸೌಧ ಆವರಣ, ಕಲಬುರಗಿ ಕಚೇರಿಗೆ ಸಂಪರ್ಕಿಸಲು ಕೋರಲಾಗಿದೆ.

# ಚಿಂಚೋಳಿ: ಓರ್ವ ಜವಾನ್ ಹುದ್ದೆಯ ಸೇವೆ ಪಡೆಯಲು ಕೊಟೇಶನ್ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.25-2026-27ನೇ ಸಾಲಿನಲ್ಲಿ ಚಿಂಚೋಳಿ ಶಿಶು ಅಭಿವೃದ್ಧಿ ಯೋಜನೆಯ ಕಚೇರಿಯ ದಿನನಿತ್ಯದ ಕೆಲಸ ಕಾರ್ಯಕ್ಕಾಗಿ ಮಾಸಿಕ ಗೌರವಧನ ಆಧಾರದ ಮೇಲೆ ಓರ್ವ ಜವಾನ ಹುದ್ದೆ (ಗ್ರೂಪ್ (ಡಿ) ಸೇವೆಯನ್ನು ಬಾಹ್ಯಮೂಲ ಸಂಸ್ಥೆಯಿಂದ ಕೊಟೇಶನ್ ಆಹ್ವಾನಿಸಲಾಗಿದೆ.

ಕೊಟೇಶನ್ ಸಲ್ಲಿಕೆಗೆ 2026ರ ಜೂನ್ 9 ರಂದು ಕೊನೆಯ ದಿನವಾಗಿದ್ದು, ಮತ್ತಿತರ ಹೆಚ್ಚಿನ

ಮಾಹಿತಿಗಾಗಿ ಚಿಂಚೋಳಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಬೇಕೆಂದು ಚಿಂಚೋಳಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೆಳಗೇರದಲ್ಲಿ ಅಗ್ನಿ ಅವಘಡ - ಪರಿಹಾರ ನೀಡಲು ಮನವಿ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ತಾಲೂಕಿನ ಬೆಳಗೇರ ಗ್ರಾಮದಲ್ಲಿ ನಿನ್ನೆ ಹನುಮಂತಿ ಗಂಡ ಮಾನಪ್ಪ ಅವರ ಮನೆಯಲ್ಲಿ ಗ್ಯಾಸ್ ಸೋರಿಕೆಯಿಂದ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಸಂಭವಿಸಿ ಅಗ್ನಿ ಅವಘಡ ಸಂಭವಿಸಿದೆ. ಈ ಅವಘಡದಲ್ಲಿ ಮನೆಯಲ್ಲಿದ್ದ ದವಸ-ಧಾನ್ಯಗಳು, ಮನೆ ನಿರ್ಮಾಣಕ್ಕಾಗಿ ಕೂಡಿಟ್ಟಿದ್ದ ಹಣ ಹಾಗೂ ಹಲವು ಗೃಹೋಪಯೋಗಿ ಸಾಮಗ್ರಿಗಳು ಸುಟ್ಟು ಕರಕಲಾಗಿವೆ ಎಂದು ತಿಳಿದುಬಂದಿದೆ. ಕುಟುಂಬದ ಉಪಜೀವನ ಮನೆ ಕೆಲಸಗಳ ಮೇಲೆಯೇ ಅವಲಂಬಿತವಾಗಿದ್ದು, ಈ ಘಟನೆ ಅವರಿಗೆ ತುಂಬಲಾರದ ಆರ್ಥಿಕ ನಷ್ಟ ಉಂಟುಮಾಡಿದೆ. ಈ ಕುರಿತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಂಪೂರ್ಣ ತನಿಖೆ ನಡೆಸಿ, ಸಂತ್ರಸ್ತ ಕುಟುಂಬಕ್ಕೆ ಸರ್ಕಾರದಿಂದ ಸಿಗಬೇಕಾದ ಪರಿಹಾರವನ್ನು ತಕ್ಷಣ ಒದಗಿಸಬೇಕು ಎಂದು ಗುರುಮಠಕಲ್ ಡಿಎಸ್ ಎಸ್ ಕ್ರಾಂತಿಕಾರಿ ತಾಲೂಕ ಅಧ್ಯಕ್ಷ ಆನಂದ್ ಭಜಂತ್ರಿ ಮನವಿ ಮಾಡಿದ್ದಾರೆ.

# ಬಯೋಮೆಟ್ರಿಕ್ ಹಾಜರಾತಿಯ ಕ್ರಮಕ್ಕೆ ದಿಢೀರನೆ ತನಿಖೆ: ಲವೀಶ್ ಒರಡಿಯಾ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಕುಡಿಯುವ ನೀರಿನ ಕೆ, ಚರಂಡಿಗಳ ಸ್ವಚ್ಛತೆಯ, ನೀರಿನ ಮಾದರಿಗಳ ಪರೀಕ್ಷೆ, ಕರವಸೂಲಾತಿ, ಹಾಗೂ ಮನರೇಗಾ ಯೋಜನೆಯಡಿ ಯಾವುದೇ ರೀತಿಯ ಲೋಪದೋಷವಾಗದಂತೆ ಕ್ರಮ ವಹಿಸಬೇಕು ಎಂದು ಯಾದಗಿರಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಲವೀಶ್ ಒರಡಿಯಾ ಅವರು ಹೇಳಿದರು. ಯಾದಗಿರಿ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇತ್ತೀಚಿನ ಮೇ.22 ರಂದು ಗ್ರಾಮ ಪಂಚಾಯತಿಗಳ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಹಾಗೂ ಎಲ್ಲಾ ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತುರ್ತು ಅನೀರಿಕ್ಷಿತ ಸಭೆ ನಡೆಸಿ ಹಾಗೂ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮ ಪಂಚಾಯತಿಗಳ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರೇಡ್-1 &ಚಿಟಠಿ 2 ಕಾರ್ಯದರ್ಶಿಗಳು ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳ ಅನೀರಿಕ್ಷಿತ ಸಭೆ ಕರೆದು ತುರ್ತು ವಿಷಯಗಳ ಬಗ್ಗೆ ಪರಿಶೀಲನೆ ಮಾಡಲಾಯಿತು. ಸಭೆಯಲ್ಲಿ ಕುಡಿಯುವ ನೀರಿನ ಪೂರೈಕೆ ಬಗ್ಗೆ, ಚರಂಡಿಗಳ ಸ್ವಚ್ಛತೆಯ ಬಗ್ಗೆ, ನೀರಿನ ಮಾದರಿಗಳ ಪರೀಕ್ಷೆ ಬಗ್ಗೆ, ಕರವಸೂಲಾತಿ ಬಗ್ಗೆ ಹಾಗೂ ಮನರೇಗಾ ಯೋಜನೆಯಡಿ ಕಡಿಮೆ ಮಾನವ ದಿನಗಳ ಸೃಜನೆ ಬಗ್ಗೆ ಚರ್ಚೆ ಮಾಡಿ ಮುಂಬರುವ ದಿನಗಳಲ್ಲಿ ಎಲ್ಲಾ ವಿಷಯಗಳ ಬಗ್ಗೆ ಅತೀ ಗಂಭೀರವಾಗಿ ಎಚ್ಚರಿಕೆ ವಹಿಸಿ ಯಾವುದೇ ರೀತಿಯ ಲೋಪದೋಷವಾಗದಂತೆ ಕ್ರಮ ವಹಿಸಲು ಎಲ್ಲಾ ತಾಲ್ಲೂಕು ಮತ್ತು ಗ್ರಾಮ ಪಂಚಾಯತ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಸೂಚಿಸಿದರು. ಅಲ್ಲದೇ ಹಲವು ದಿನಗಳಿಂದ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ಗ್ರಾಮ ಪಂಚಾಯತ ಮಟ್ಟದ ಅಧಿಕಾರಿ, ಸಿಬ್ಬಂದಿಗಳ ಹಾಜರಾತಿ ಬಗ್ಗೆ ದೂರು

ಸ್ವೀಕೃತಿಯಾಗುತ್ತಿರುವ ಹಿನ್ನಲೆಯಲ್ಲಿ ಇದೇ ಸಭೆಯಲ್ಲಿ ಅನೀರಿಕ್ಷಿತ ಬಯೋಮೆಟ್ರಿಕ್ ಹಾಜರಾತಿಯ ಕುರಿತು ದಿಢೀರನೆ ತನಿಖೆ ನಡೆಸಲಾಯಿತು. ತನಿಖಾ ಸಂದರ್ಭದಲ್ಲಿ ಸುಮಾರು ಶೇ.80 ರಷ್ಟು ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ನಕಲಿ ಬಯೋಮೆಟ್ರಿಕ್ ಹಾಜರಾತಿ

ಹಾಕಿರುವುದು ಕಂಡುಬಂದಿರುತ್ತದೆ ಎಂದು ತಿಳಿಸಿದರು. ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ವಿವರಣೆ ಕೇಳಿ ನೋಟಿಸ್ ನೀಡಲಾಗಿದೆ ಎಂದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿಗಳ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರೇಡ್-1 &ಚಿಟಠಿ 2 ಕಾರ್ಯದರ್ಶಿಗಳು, ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳ ಹಾಗೂ ಇನ್ನಿತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

# 27 ರಂದು ವಿವಿಧ ಕಾಮಗಾರಿಯ ಅಡಿಗಲ್ಲು

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಮೇ 25 : 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಮೈಕ್ರೋ ಸಾಮಾನ್ಯ ಯೋಜನೆ ಅಡಿಯಲ್ಲಿ ಗುರುಮಠಕಲ್ ಮತಕ್ಷೇತ್ರದ ಸಿಂದಗಿ-ಕೊಡಂಗಲ್ ರಾಜ್ಯ ಹೆದ್ದಾರಿ 16 ಮುಖ್ಯ ರಸ್ತೆ ಆಯ್ದು ಭಾಗಗಳಲ್ಲಿ ಮರು ಡಾಂಬರಕರಣ ಹಾಗೂ ಗುರುಮಠಕಲ್ ಪಟ್ಟಣದ ರಸ್ತೆ ಅಗಲೀಕರಣ ಮತ್ತು ಬ್ರಿಡ್ಜ್ ನಿರ್ಮಾಣ ಹಾಗೂ ಗುರುಮಠಕಲ್ ಪಟ್ಟಣದಲ್ಲಿ ಸೌಂದರ್ಯೀಕರಣ ಮತ್ತು ಆಧುನಿಕ ಬಸ್ ಸ್ಟ್ಯಾಂಡ್ ನಿರ್ಮಾಣ ಅಂದಾಜು ಮೊತ್ತ 990 ಲಕ್ಷ ರೂ.ಗಳ ಕಾಮಗಾರಿಯ ಅಡಿಗಲ್ಲು 2026ರ ಮೇ 27 ರಂದು ಬೆಳಿಗ್ಗೆ 8 ಗಂಟೆಗೆ ಚಿನ್ನಕಾರ ಗೇಟ್‌ದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪೂರ, ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಲೋಕೋಪಯೋಗಿ ಇಲಾಖೆ ಸಚಿವರಾದ ಶ್ರೀ ಸತೀಶ ಜಾರಕಿಹೊಳಿ, ಜೇವರ್ಗಿ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಡಾ.ಅಜಯಸಿಂಗ್, ಕರ್ನಾಟಕ ವಿಧಾನ ಪರಿಷತ್ತು ವಿರೋಧ ಪಕ್ಷದ ನಾಯಕ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ, ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಬಾಬುರಾವ್ ಚಿಂಚನಸೂರು, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರು ಶ್ರೀ ಶರಣಪ್ಪ ಸಲಾದಪೂರ ಅವರ ಘನ ಉಪಸ್ಥಿತಿಯಲ್ಲಿ ನೆರವೇರಲಿದೆ.

ಗುರುಮಠಕಲ್ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ ಶರಣಗೌಡ ಕಂದಕೂರ ಅವರು ಶಿಲಾನ್ಯಾಸಕರು ಹಾಗೂ ಕಾರ್ಯಕ್ರಮ ಅಧ್ಯಕ್ಷತೆ ವಹಿಸುವರು.

ಕಲಬುರಗಿ ಲೋಕಸಭಾ ಸದಸ್ಯರು ಶ್ರೀ ರಾಧಾಕೃಷ್ಣ ದೊಡ್ಡಮನಿ, ವಿಧಾನ ಪರಿಷತ್ತು ಸದಸ್ಯರು ಶ್ರೀ ಬಿ.ಜಿ.ಪಾಟೀಲ್, ಡಾ.ಚಂದ್ರಶೇಖರ ಬಿ.ಪಾಟೀಲ್, ಶ್ರೀ ಶಶೀಲ್ ಜಿ.ನಮೋಶಿ, ಶಹಾಪೂರ ಭೀಮರಾಯನಗುಡಿ ಕಾಡಾ ಅಧ್ಯಕ್ಷರು ಶ್ರೀ ಬಾಬು ಹೊನ್ನಾನಾಯಕ ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಸರ್ವರಿಗೂ ಆದರದ ಸುಸ್ವಾಗತವನ್ನು ಯಾದಗಿರಿ ಜಿಲ್ಲಾಧಿಕಾರಿ ಶ್ರೀ ಪಾಂಡ್ವೆ ರಾಹುಲ್ ತುಕಾರಾಮ, ಯಾದಗಿರಿ ಉಪ ವಿಭಾಗ ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಶ್ರೀ ಪರಶುರಾಮ, ಯಾದಗಿರಿ ವಿಭಾಗ ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರರು ಶ್ರೀ ಸಾಹೇಬಗೌಡ ಪಾಟೀಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಮೇ 25: ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆದಿಂದ 2026-27ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ (ಪಿ.ಯು.ಸಿ, ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಮಾತ್ರ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಅವರು ತಿಳಿಸಿದ್ದಾರೆ.

ವಸತಿ ನಿಲಯ ಗುರುಮಠಕಲ್ ಮೆಟ್ರಿಕ್ ನಂತರದ ಬಾಲಕರ ನಿಲಯ ವಸತಿ ನಿಲಯದ ಕೋಡ್ ಸಂ. ಬಿಸಿಡಬ್ಲ್ಯೂ ಡಿ 2558 ಇದೆ. ವಸತಿ ನಿಲಯ ಯಾದಗಿರಿ ಮೆಟ್ರಿಕ್ ನಂತರದ (ಪಿ.ಯು.ಸಿ) ಬಾಲಕರ ನಿಲಯ ಹೊಸ ವಸತಿ ನಿಲಯದ ಕೋಡ್ ಸಂ. ಬಿಸಿಡಬ್ಲ್ಯೂ ??ಡಿ 2559 ಇದೆ. ವಸತಿ ನಿಲಯ ಗುರುಮಠಕಲ್ ಮೆಟ್ರಿಕ್ ನಂತರದ ಬಾಲಕರ ನಿಲಯ ಹೊಸ ವಸತಿ ನಿಲಯದ ಕೋಡ್ ಸಂ. ಬಿಸಿಡಬ್ಲ್ಯೂ ಡಿ 2562 ಇದೆ. ವಸತಿ ನಿಲಯ ಯಾದಗಿರಿ ಮೆಟ್ರಿಕ್ ನಂತರದ (ಪಿ.ಯು.ಸಿ) ಬಾಲಕಿಯರ ನಿಲಯ ಹೊಸ ವಸತಿ ನಿಲಯದ ಕೋಡ್ ಸಂ. ಬಿಸಿಡಬ್ಲ್ಯೂ ??ಡಿ 2563 ಇದೆ. ವಸತಿ ನಿಲಯ ಗುರುಮಠಕಲ್ ಮೆಟ್ರಿಕ್ ನಂತರದ ಬಾಲಕಿಯರ ನಿಲಯ ಹಳೆಯ ವಸತಿ ನಿಲಯದ ಕೋಡ್ ಸಂ. ಬಿಸಿಡಬ್ಲ್ಯೂ ಡಿ 2564 ಇದೆ. ವಸತಿ ನಿಲಯ ಯಾದಗಿರಿ ಟೌನ್ ಮೆಟ್ರಿಕ್ ನಂತರದ ಬಾಲಕಿಯರ ನಿಲಯ ವಸತಿ ನಿಲಯದ ಕೋಡ್ ಸಂ. ಬಿಸಿಡಬ್ಲ್ಯೂ ಡಿ 2670 ಇದೆ.

ತಾಲ್ಲೂಕು ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ ಪ.ಜಾ, ಪ.ವರ್ಗದ ಪಿ.ಯು.ಸಿ, ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ ಪ್ರವರ್ಗ-1, ಎಸ್.ಸಿ &ಎಸ್.ಟಿ 2.50 ಲಕ್ಷ ರೂ.ಗಳ ಒಳಗಿರಬೇಕು. ಪ್ರವರ್ಗ-2ಎ, 2ಬಿ, 3ಎ, 3ಬಿ 1 ಲಕ್ಷ ರೂ.ಗಳ ಒಳಗಿರಬೇಕು.

ವಿದ್ಯಾರ್ಥಿಗಳು ಆನ್‌ಲೈನ್ shp.karnataka.gov.in/bcwd ನಲ್ಲಿ 2026ರ ಜೂನ್ 15ರ ಒಳಗೆ ಅರ್ಜಿಸಲ್ಲಿಸಬೇಕು. ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ bcwd.karnataka.gov.in ಭೇಟಿ ನೀಡಬೇಕು. ಅರ್ಜಿಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.comಗೆ ಇ-ಮೇಲ್ ಮುಖಾಂತರ ಅಥವಾ ತಾಲ್ಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಅರ್ಜಿಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂ.9743310896ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ರಾಮೀಣ ಭಾಗದ ಪ್ರತಿ ಮನೆಗೂ ಶುದ್ಧ ನೀರು ಪೂರೈಕೆ



• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)**

ಮೇ.25: ಗ್ರಾಮೀಣ ಪ್ರದೇಶದ ಸಾರ್ವಜನಿಕರ ಆರೋಗ್ಯ ರಕ್ಷಣೆ ಮತ್ತು ಪ್ರತಿಯೊಬ್ಬರಿಗೂ ಸುರಕ್ಷಿತ ಕುಡಿಯುವ ನೀರನ್ನು ಖಾತರಿಪಡಿಸುವ ಮಹತ್ತರ ಉದ್ದೇಶದಿಂದ ವಿಶೇಷ ನೀರಿನ ಪರೀಕ್ಷೆಯ ಅಭಿಯಾನ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಚಾಲನೆ ನೀಡಿದರು.

ನಗರದ ತಾಲೂಕು ಪಂಚಾಯತಿಯ ವಿದ್ಯಾರಣ್ಯ ಸಭಾಂಗಣದಲ್ಲಿ ಸೋಮವಾರ ವಿಶೇಷ ನೀರಿನ ಪರೀಕ್ಷೆಯ ಅಭಿಯಾನಕ್ಕೆ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಅಧಿಕೃತವಾಗಿ ಚಾಲನೆ ನೀಡಿ ಅವರು ಮಾತನಾಡಿದರು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ಮೇ 25 ರಿಂದ ಜೂನ್ 10 ರವರೆಗೆ ಜಿಲ್ಲಾದ್ಯಂತ ಈ ವಿಶೇಷ ಆಂದೋಲನ ನಡೆಯಲಿದ್ದು, ಮೊದಲ ಕುಡಿಯುವ ನೀರಿನ ಗುಣಮಟ್ಟದ ಕುರಿತು ಗ್ರಾಮೀಣ ಮಟ್ಟದಲ್ಲೇ ನಿರಂತರ ನಿಗಾ ವಹಿಸುವುದು ಅತ್ಯಗತ್ಯ. ಮಳೆಗಾಲದ ಆರಂಭದ ಈ ದಿನಗಳಲ್ಲಿ ನೀರಿನ ಮೂಲಗಳು ಕಲುಷಿತಗೊಳ್ಳುವ ಸಾಧ್ಯತೆ ಹೆಚ್ಚಿರುವುದರಿಂದ, ಜಲಮೂಲ ಕಲುಷಿಗೊಳ್ಳದಂತೆ ಎಚ್ಚರವಹಿಸಬೇಕು. ಪ್ರತಿಯೊಂದು ಗ್ರಾಮ ಪಂಚಾಯತಿಯೂ ತಮಗೆ ನೀಡಿರುವ ಕಿಟ್‌ಗಳನ್ನು ಸಮರ್ಪಕವಾಗಿ ಬಳಸಿ, ನಿಯಮಿತವಾಗಿ ನೀರಿನ ಗುಣಮಟ್ಟವನ್ನು ತಪಾಸಣೆ ಮಾಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಸಾಂಕ್ರಾಮಿಕ ರೋಗ ಮುಕ್ತ ಗ್ರಾಮವೇ ನಮ್ಮ ಗುರಿ:

ಅಶುದ್ಧ ಹಾಗೂ ಕಲುಷಿತ ನೀರಿನ ಸೇವನೆಯಿಂದ ಗ್ರಾಮೀಣ ಭಾಗದಲ್ಲಿ ಹರಡುವ ಕಾಲರಾ, ಕಾಮಾಲೆ, ಅತಿಸಾರ ಭೇದಿಯಂತಹ ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆಗೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮ ಕೈಗೊಳ್ಳುವುದು ಅತ್ಯಗತ್ಯ ಎಂದ ಅವರು, ಗ್ರಾಮದ ಜಲಮೂಲಗಳಲ್ಲಿ ಕ್ಲೋರಿನೇಷನ್ ಪ್ರಕ್ರಿಯೆಯನ್ನು ಸರಿಯಾದ ಪ್ರಮಾಣದಲ್ಲಿ ನಿರ್ವಹಿಸುವಂತೆ ಮತ್ತು ಶುದ್ಧ ಕುಡಿಯುವ ನೀರಿನ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವಂತೆ ತಿಳಿಸಿದರು. ತಾಲೂಕಿನ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ ಸದಸ್ಯರು ಹಾಗೂ ಪ್ರಮುಖವಾಗಿ ಪ್ರತಿದಿನ ನೀರು ಸರಬರಾಜು ಮಾಡುವ ನೀರು ಗಂಟಿಗಳಿಗೆ ಕಾರ್ಯಕ್ರಮದಲ್ಲಿ ವಿಶೇಷ ನೀರಿನ ಪರೀಕ್ಷೆಯ ಕಿಟ್ ವಿತರಿಸಲಾಯಿತು. ಜಿಲ್ಲೆಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಹಿರಿಯ ರಸಾಯನ ತಜ್ಞರು ಇಡೀ ತರಬೇತಿಯನ್ನು ಅತ್ಯಂತ ಪ್ರಾಯೋಗಿಕವಾಗಿ ನಡೆಸಿಕೊಟ್ಟರು. ಕಿಟ್ ಬಳಸಿ ನೀರಿನಲ್ಲಿರುವ ಫ್ಲೋರೈಡ್, ನೈಟ್ರೇಟ್, ಕ್ಲೋರೈಡ್ ಹಾಗೂ ಗಡಸುತನದ ಪ್ರಮಾಣವನ್ನು ಸ್ಥಳದಲ್ಲೇ ಪತ್ತೆ ಹಚ್ಚುವುದು ಹೇಗೆ ಎಂದು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಸಭೆಯಲ್ಲಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿ ಆಲಂ ಭಾಷ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ವಿಜಯ್ ಕುಮಾರ್, ಕಿರಿಯ ಅಭಿಯಂತರ ಸುರೇಶ್, ನರೇಶ್. ಸಹಾಯಕ ಅಭಿಯಂತರರು ಮಹರುದ್ರಗೌಡ, ಹಿರಿಯ ರಸಾಯನ ತಜ್ಞರು ಅರುಣ್ ಕುಮಾರ್. ಜಿ. ವಿ ಇದ್ದರು

# ಸಮಾಜ ಸೇವೆ ಗುರುತಿಸಿ ಶೈಲೇಂದ್ರ ಪೊಲೀಸ್ ಪಾಟೀಲರಿಗೆ ವಿಶ್ವ ಕನ್ನಡಿಗ ಪ್ರಶಸ್ತಿ ಪ್ರದಾನ

• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ಗೋವಾ ರಾಜ್ಯದ ರಾಜಧಾನಿ ಪಣಜಿಯ ಗಾಸ್ಪರ್ ಡೈಸ್ ಟೆನ್ನಿಸ್ ಕೋರ್ಟ್ ಸಂಭಂಗಣದಲ್ಲಿ ಮೇ 24ರಂದು ರವಿರತ್ನ ಡಾ. ವಿ.ನಾಗೇಂದ್ರ ಪ್ರಸಾದ್ ಇವರ ಸರ್ವಾಧ್ಯಕ್ಷತೆಯಲ್ಲಿ ಜರುಗಿದ 2ನೇ ವರ್ಷದ ವಿಶ್ವ ಕನ್ನಡ ಸಮ್ಮೇಳನದಲ್ಲಿ, ತಾಲೂಕಿನ ನಿರ್ಣಾ ಗ್ರಾಮದ ಶೈಲೇಂದ್ರ ಪೊಲೀಸ್ ಪಾಟೀಲ್ ರವರ ಸಮಾಜ ಸೇವೆ ಗುರುತಿಸಿ ಪ್ರಸ್ತಕ 2026ನೇ ಸಾಲಿನ ವಿಶ್ವ ಕನ್ನಡಿಗರ ಪ್ರಶಸ್ತಿಯನ್ನು ಚಿತ್ರಸಾಹಿತಿ, ನಟ, ನಿರ್ದೇಶಕರು ಹಾಗೂ ವಿಶ್ವ ಕನ್ನಡ ಸಮ್ಮೇಳನ ಸಮ್ಮೇಳನಾಧ್ಯಕ್ಷ ಡಾ. ವಿ. ನಾಗೇಂದ್ರ ಪ್ರಸಾದ್. ಹಾಗೂ ಚೇತನ ಫೌಂಡೇಷನ ಅಧ್ಯಕ್ಷರು ಮತ್ತು ಜನತಾ ಪ್ರಭ ದಿನಪತ್ರಿಕೆಯ ಸಂಪಾದಕ ಡಾ. ಚಂದ್ರಶೇಖರ್ ಮಾಡಲಗೇರಿ ಇವರು ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಿದರು.



# ವಸತಿ ಯೋಜನೆಯಡಿ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)**

ಮೇ.25: ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ವಸತಿ ರಹಿತರಿಗೆ ವಸತಿ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕೆ ಅರ್ಜಿ ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 5 ಕೊನೆ ದಿನವಾಗಿದೆ.

ಫಲಾನುಭವಿಗಳು ನಿವೇಶನ ಹೊಂದಿರುವ ಬಗ್ಗೆ ಹಕ್ಕು ಪತ್ರ ಅಥವಾ ಪೂರಕ ದಾಖಲಾತಿ, ಪಾಸ್ ಪೋರ್ಟ್ ಸೈಜ್ 2 ಭಾವಚಿತ್ರ, ಇತ್ತೀಚಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಮತದಾರರ ಗುರುತೀನ ಚೀಟಿ ಮತ್ತು ಬ್ಯಾಂಕ್ ಪಾಸ್ ಬುಕ್ ದಾಖಲಾತಿಯೊಂದಿಗೆ ಸಂಬಂಧಪಟ್ಟ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಛೇರಿಯಿಂದ ಅರ್ಜಿ ನಮೂನೆ ಪಡೆದು ಅರ್ಜಿ ಸಲ್ಲಿಸಬಹುದು.

ಈ ಹಿಂದೇ ಯಾವುದೇ ಯೋಜನೆಯಡಿ ವಸತಿ ಸೌಲಭ್ಯವನ್ನು ಪಡೆದಿಲ್ಲವೆಂದು ಗ್ರಾಮೀಣ ಭಾಗದವರು ಗ್ರಾಮ ಪಂಚಾಯತಿಯಿಂದ ಹಾಗೂ ನಗರ ಪ್ರದೇಶದವರು ಪಟ್ಟಣ ಪಂಚಾಯತಿ, ನಗರಸಭೆ, ಪುರಸಭೆಯಿಂದ ದೃಢೀಕರಣ ಪ್ರಮಾಣ ಪತ್ರವನ್ನು ಪಡೆದು ಅರ್ಜಿ ಸಲ್ಲಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ವೈ.ಎ.ಕಾಳೆ ತಿಳಿಸಿದ್ದಾರೆ

## ಶಾಂತಿವರ್ಧಕ ಪಿಯು ಕಾಲೇಜಿನಲ್ಲಿ ಹೊಸ ತರಗತಿಗಳ ಪ್ರಾರಂಭೋತ್ಸವ

# ನೂತನ ವಿದ್ಯಾರ್ಥಿಗಳಿಗೆ ಸಿಹಿ ನೀಡಿ ಆತ್ಮೀಯ ಸ್ವಾಗತ



• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ**

:ಪಟ್ಟಣದ ಶಾಂತಿವರ್ಧಕ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ 2026-27ನೇ ಸಾಲಿನ ಹೊಸ ತರಗತಿಗಳ ಪ್ರಾರಂಭೋತ್ಸವ ಹಾಗೂ ನೂತನ ವಿದ್ಯಾರ್ಥಿಗಳ ಆದರದ ಸ್ವಾಗತ ಸಮಾರಂಭವು ಅತ್ಯಂತ ಸಡಗರ-ಸಂಭ್ರಮದಿಂದ ಜರುಗಿತು.

ಕಾರ್ಯಕ್ರಮದ ಆರಂಭದಲ್ಲಿ ಕುಮಾರಿ ಅತಿಯಾ ಅವರ ಪ್ರಾರ್ಥನೆ ಗೀತೆಯೊಂದಿಗೆ ಜ್ಞಾನದ ಹಬ್ಬಕ್ಕೆ ಚಾಲನೆ ನೀಡಲಾಯಿತು. ತದನಂತರ ಆಗಮಿಸಿದ ಗಣ್ಯರು ಜಂ-ಟಿಯಾಗಿ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಅಧಿಕೃತವಾಗಿ ಉದ್ಘಾಟಿಸಿದರು. ವಿದ್ಯಾರ್ಥಿಗಳಿಗೆ ವಿಶಿಷ್ಟ ಸ್ವಾಗತ: ಕಾಲೇಜು ಆವರಣಕ್ಕೆ ಮೊದಲ ದಿನ ಹೆಜ್ಜೆ ಇಟ್ಟ ನೂತನ ವಿದ್ಯಾರ್ಥಿಗಳಿಗೆ ಸಂಸ್ಥೆಯ ವತಿಯಿಂದ ಹೂವು, ಪೆನ್ನು ಹಾಗೂ ಸಿಹಿಯನ್ನು ಕೊಡುವುದರ ಮೂಲಕ ಅತ್ಯಂತ ಹೃತ್ಪೂರ್ವಕವಾಗಿ ಮತ್ತು ಸಡಗರದಿಂದ ಬರಮಾಡಿಕೊಳ್ಳಲಾಯಿತು. ಮೊದಲ ದಿನವೇ ಕಾಲೇಜಿನಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿದ್ದು, ವಿದ್ಯಾರ್ಥಿಗಳಲ್ಲಿ ಹೊಸ ಶೈಕ್ಷಣಿಕ ವರ್ಷದ ಉತ್ಸಾಹ ಎದ್ದು ಕಾಣುತ್ತಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಬಾಬುರಾವ ಪಾಟೀಲ ಹೊರಂಡಿ ಅವರು ನೆರವೇರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಶಿವಾಜಿ ಆರ್. ಎಚ್. ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಮುಖ್ಯ ಅತಿಥಿಗಳಾಗಿ ಪ್ರೊ. ವಿಶ್ವನಾಥ ಕಿವಡೆ ಹಾಗೂ ಗೌರವ ಉಪಸ್ಥಿತರಾಗಿ ಓಂಕಾರ ಸೂರ್ಯವಂಶಿ ಅವರು ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಉಪನ್ಯಾಸಕ ಹಾಗೂ ಕಚೇರಿ ಸಿಬ್ಬಂದಿ ವರ್ಗದವರಾದ ಶಿವಶಂಕರ ವಾಡೇಕರ, ಶ್ರೀಕಾಂತ ಪ್ಯಾಗೆ, ಸುಭಾಷ ರಾಥೋಡ್, ಶರಣಗೌಡ ಪಾಟೀಲ, ಶ್ರೀಮತಿ ಕಾದಂಬಿನಿ, ಶ್ರೀಮತಿ ಬಸವಾಂಬಿಕಾ, ವೆಂಕಟ ಮೋರೆ, ಶಿವಶಂಕರ ಕಾಂಬಳೆ, ಚಂದ್ರಕಾಂತ ಭೈರಪ್ಪ, ವಿಜಯಲಕ್ಷ್ಮಿ ಹಾಗೂ ಯಲ್ಲಾಲಿಂಗ ಮೇತ್ರೆ ಸೇರಿದಂತೆ ಆಡಳಿತಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

?ಸುನಿಲಬಾರೋಳೆ ಅವರು ಸಮಾರಂಭವನ್ನು ಅಚ್ಚುಕಟ್ಟಾಗಿ ನಿರೂಪಿಸಿದರೆ, ಶ್ರೀ ಕಾಳಿದಾಸ ಬೌದ್ಧೆ ಅವರು ಕೊನೆಯಲ್ಲಿ ವಂದನಾರ್ಪಣೆ ಮಾಡಿದರು. ನೂತನ ವಿದ್ಯಾರ್ಥಿಗಳ ಆಗಮನದಿಂದ ಕಾಲೇಜು ಕ್ಯಾಂಪಸ್ ಕಳೆಗಟ್ಟಿತ್ತು

# ಮಹಿಳೆಯರ ಸ್ವಾವಲಂಬನೆಗೆ ಸಹಕಾರ ಸಂಘಗಳು ಸಹಕಾರಿ: ಸವಿತಾ ಪಾಟೀಲ್



• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಮೇ 25: ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸಾಧನೆಗಳು ಇಂದು ಹಿಂದಿಗಿಂತಲೂ ಹೆಚ್ಚಿನ ಮಹತ್ವ ಪಡೆದುಕೊಂಡಿವೆ. ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ಮತ್ತು ಆತ್ಮವಿಶ್ವಾಸವನ್ನು ನೀಡಿ, ಅವರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಹಕಾರ ಸಂಘಗಳು ಬಹುದೊಡ್ಡ ಆಸರೆಯಾಗಿವೆ ಎಂದು ಸರಕಾರಿ ಮಹಾವಿದ್ಯಾಲಯದ ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಸವಿತಾ ಪಾಟೀಲ್ ಹೇಳಿದರು.

ಶುಕ್ರವಾರ ನಗರದಲ್ಲಿರುವ ಕೆ.ಐ.ಸಿ.ಎಂ ತರಬೇತಿ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ. ಬೆಂಗಳೂರು, ಕಲಬುರಗಿ ಜಿಲ್ಲಾ ಸಹಕಾರ ಒಕ್ಕೂಟ ನಿ. ಹಾಗೂ ಸಹಕಾರ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಆಯ್ದ ಮಹಿಳಾ ಪತ್ತಿನ ಸಹಕಾರ ಸಂಘಗಳ ಪದಾಧಿಕಾರಿಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ಜಿಲ್ಲಾ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ಧೈರ್ಯದಿಂದ ಎಲ್ಲ ಕ್ಷೇತ್ರಗಳಲ್ಲೂ ತೊಡಗಿಸಿಕೊಂಡು ಈ ತರಬೇತಿಯ ಸದುಪಯೋಗ ಪಡೆಯಬೇಕು ಎಂದರು. ಕಲಬುರಗಿ ಉಪ ವಿಭಾಗದ ಸಹಾಯಕ ಸಂಘಗಳ ಸಹಾಕಾರ ನಿಬಂಧಕರಾದ ಸಂಜಯಕುಮಾರ ಅವರು ಇತ್ತೀಚಿನ ಕಾಯ್ದೆ ಕಾನೂನು ತಿದ್ದುಪಡಿಗಳ ಕುರಿತು, ನಾಲ್ಕು ಚಕ್ರ ಚಾರಿಟೇಬಲ್ ಟ್ರಸ್ಟ್‌ನ ಮುಖ್ಯಸ್ಥ ಮಾಲಾಶ್ರೀ ಕಣ್ಣಿ ಅವರು ಮಹಿಳಾ ಸಬಲೀಕರಣದ ಕುರಿತು ಹಾಗೂ ಕೆ.ಐ.ಸಿ.ಎಂ ತರಬೇತಿ ಕೇಂದ್ರದ ಪ್ರಾಂಶುಪಾಲ ಅರುಣಕುಮಾರ ಬಿ. ಹರಸೂರ ಅವರು ಸಹಕಾರ ಸಂಘಗಳಲ್ಲಿ ಲೆಕ್ಕ ಪತ್ರ ನಿರ್ವಹಣೆ ಕುರಿತು ವಿಶೇಷ ಉಪನ್ಯಾಸ ನೀಡಿದರು

# ಸೊಳ್ಳೆಯಿಂದ ಹರಡುವ ಕಾಯಿಲೆಗಳ ತಡೆಗೆ ಸಾರ್ವಜನಿಕರು ಸಹಕರಿಸಿ: ಡಾ.ಸುರೇಂದ್ರ ಬಾಬು

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.25: ಕಳೆದ 2–3 ದಿನಗಳಿಂದ ಜಿಲ್ಲೆಯಾದ್ಯಂತ ಸುರಿದ ಅಕಾಲಿಕ ಮಳೆಯಿಂದ ತಗ್ಗು ಗುಂಡಿಗಳು ಸೇರಿದಂತೆ ಅಲ್ಲಲ್ಲಿ ನೀರು ನಿಲ್ಲುವುದರಿಂದ ಡೆಂಗ್ಯು ಹರಡುವ ಈಡಿಸ್ ಇಜಿಪ್ಟೈ ಸೊಳ್ಳೆಯ ಸಂತತಿ ಹೆಚ್ಚಾಗುವ ಸಾಧ್ಯತೆ ಇದೆ. ಇದರಿಂದ ಸಂಭಾವ್ಯ ಡೆಂಗ್ಯು ಪ್ರಕರಣಗಳು ಕಂಡು ಬರುವ ಸಾಧ್ಯತೆಗಳಿದ್ದು, ಸಾರ್ವಜನಿಕರು ಮನೆಯ ಸುತ್ತಲು ನೀರು ನಿಲ್ಲದಂತೆ ನೋಡಿಕೊಳ್ಳುವ ಜೊತೆ–ಗೆ ಬಳಕೆಗಾಗಿ ನೀರು ತುಂಬುವ ಡ್ರಮ್, ಬ್ಯಾರೆಲ್, ಕಲ್ಲಿನ ಡೋಣಿ ಮುಂತಾದ ಪರಿಕರಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸಿ ಮತ್ತು ಯಾರಿಗಾದರೂ ಒಂದೇ ದಿನ ಜ್ವರ ಕಂಡು ಬಂದರೂ ಸಹ ವೈದ್ಯರ ಬಳಿ ಪರೀಕ್ಷಿಸಿ ಅಗತ್ಯ ಚಿಕಿತ್ಸೆ ಪಡೆಯಿರಿ ಎಂದು ಸಾರ್ವಜನಿಕರಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ಅವರು ಕೋರಿದ್ದಾರೆ.ಮನೆಯ ಒಳಗಿನ ಸಾಮಗ್ರಿಗಳನ್ನು ನಿಗಾ ವಹಿಸಿದಂತೆ ಮನೆಯ ಹೊರಗೆ ನೀರು ಸುತ್ತಲು ನೀರು ಸಂಗ್ರಹವಾಗುವ ಪ್ಲಾಸ್ಟಿಕ್ ಕಪ್, ತಗಡಿನ ಟಿನ್, ತೆಂಗಿನ ಚಿಪ್ಪು, ಒಡೆದ ಮಡಿಕೆ, ಬಿಸಾಡಿದ ಟೈರ್, ಮುಂತಾದ ತ್ಯಾಜ್ಯವನ್ನು ವಿಲೇವಾರಿ ಮಾಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.



ಮನೆಯಲ್ಲಿರುವ ಚಿಕ್ಕ ಮಕ್ಕಳು, ಗರ್ಭಿಣಿಯರು, ವಯೋವೃದ್ದರು, ಬಾಣಂತಿಯರಿಗೆ ಸೊಳ್ಳೆ ಕಡೆಯದಂತೆ ಕಾಳಜಿ ತೆಗೆದುಕೊಳ್ಳಿ ನಿರ್ಲಕ್ಷ್ಯ ವಹಿಸಬಾರದು.ತಕ್ಷಣ ಪರೀಕ್ಷೆ ಮಾಡಿಸಿಕೊಳ್ಳಿ: ಸಾಮಾನ್ಯವಾಗಿ ಜ್ವರವನ್ನು ನಾವು ನಿರ್ಲಕ್ಷಿಸುತ್ತೇವೆ. ಇಂತಹ ಸಂದರ್ಭಗಳಲ್ಲಿ ಡೆಂಗ್ಯು ಸಂಬಂಧಿತ ಜ್ವರವಾಗಿದ್ದರೆ ರೋಗಿಯು ಪ್ಲೇಟ್‌ಲೆಟ್ಸ್‌ಳ ಶೀಘ್ರ ಕುಸಿಯುವಿಕೆಯಿಂದ ಆರೋಗ್ಯ ಸಮಸ್ಯೆ ಎದುರಾಗಿ ರಕ್ತಸ್ರಾವದಂತಹ ಗಂಭಿರ ಸಮಸ್ಯೆ ಎದುರುಸ ಬೇಕಾಗಬಹುದು. ಕಾರಣ ಯಾರಿಗಾದರೂ 3 ದಿನಗಳ ಕಡಿಮೆಯಾಗದ ಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ವಿಪರೀತ ನೋವು ಕಾಣಿಸಿಕೊಂಡಲ್ಲಿ ನಿರ್ಲಕ್ಷಿಸದೆ ಹತ್ತಿರದ ಆರೋಗ್ಯ ಕೇಂದ್ರಕ್ಕೆ ಬೇಟಿ ನೀಡಿ ಅಗತ್ಯ ಪರೀಕ್ಷೆ ಮಾಡಿಸಿ ವೈದ್ಯರ ಸಲಹೆಯಂತೆ ಲಕ್ಷಣಗಳ ಆಧಾರದ ಮೇರೆಗೆ ಚಿಕಿತ್ಸೆ ಪಡೆಯಬೇಕು.ಲಾರ್ವಾ ಸಮೀಕ್ಷೆಗೆ ಸಹಕರಿಸಿ: ಜಿಲ್ಲಾ ರೋಗ ವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಚಂದ್ರಶೇಖರಯ್ಯ ಸ್ವಾಮಿ ಅವರ ನೇತೃತ್ವದಲ್ಲಿ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ದಂದು ಸೊಳ್ಳೆಗಳ ಉತ್ಪತಿ ತಾಣಗಳನ್ನು ಗುರ್ತಿಸಿ ನಾಶಗೊಳಿಸಲು ಸಿಬ್ಬಂದಿಯವರಿಂದ ಲಾರ್ವಾ ಸಮೀಕ್ಷೆ ಕೈಗೊಳ್ಳಲಾಗುತ್ತಿದ್ದು, ಸಾರ್ವಜನಿಕರು ಪರಿಕರಗಳಿಗೆ ಮುಚ್ಚಳ ಮುಚ್ಚಿ ಬಟ್ಟೆ ಕಟ್ಟಿ, ಬಳಕೆ ಮಾಡದ ನೀರು ಸಂಗ್ರಹಕಗಳಿಗೆ ಕೊಬ್ಬರಿ ಎಣ್ಣೆಯನ್ನು ಹಾಕುವ ಮೂಲಕ ಸೊಳ್ಳೆ ಉತ್ಪತ್ತಿ ತಡೆಯಬೇಕು. ಬಳಸದಿರುವ ನೀರು ನಿಲ್ಲುವ ಸ್ಥಳಗಳಲ್ಲಿ ಸುಟ್ಟ ಆಯಿಲ್ ಹಾಕಲುಹಾಗೂ ಅಗತ್ಯವಿರುವಲ್ಲಿ ಟೆಮೋಪಾಸ್ ದ್ರಾವಣ ಹಾಕಲು ಕ್ರಮ ವಹಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕ್ರೀಡಾ ವಸತಿ ನಿಯಲಗಳಿಗೆ ಜೂ.01ರಂದು ವಿಶೇಷ ಆಯ್ಕೆ ಶಿಬಿರ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.25 : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ 2026–27ನೇ ಸಾಲಿನಲ್ಲಿ ಕ್ರೀಡಾ ವಸತಿ ಶಾಲೆ ಅಥವಾ ನಿಲಯಗಳಿಗೆ 8ನೇ ತರಗತಿ ಮತ್ತು ಪ್ರಥಮ ಪಿ.ಯು.ಸಿ ಮಟ್ಟದ ಅರ್ಹ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ಪ್ರವೇಶಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಈಗಾಗಲೇ ಜಿಲ್ಲಾ ಹಾಗೂ ವಿಭಾಗ ಮಟ್ಟದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದ್ದು, ಈ ಆಯ್ಕೆ ಶಿಬಿರಗಳನ್ನು ವಿವಿಧ ಕಾರಣಗಳಿಂದ ಭಾಗವಹಿಸಲು ಸಾಧ್ಯವಾಗದ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶವನ್ನು ನೀಡುವ ದೃಷ್ಟಿಯಿಂದ ಜೂನ್ 01ರಂದು ರಾಜ್ಯದ ಕೆಲವು ಸ್ಥಳಗಳಲ್ಲಿ ವಿವಿಧ ಕ್ರೀಡೆಗಳಿಗೆ ವಿಶೇಷ ಆಯ್ಕೆ ಶಿಬಿರಗಳನ್ನು ಆಯೋಜಿಸಲು ಉದ್ದೇಶಿಸಲಾಗಿದೆ.

ಕಿರಿಯರ ವಿಭಾಗದ ಕ್ರೀಡಾ ವಸತಿ ಶಾಲೆಗಳ ಆಯ್ಕೆಯನ್ನು ಪ್ರಸ್ತುತ 7ನೇ ತರಗತಿ ಅಭ್ಯಾಸ ಮಾಡುತ್ತಿರುವ ಬಾಲಕ/ಬಾಲಕಿಯರಿಗಾಗಿ ದಿನಾಂಕ 01–06–2026 ರಂದು 14 ವರ್ಷದೊಳಗಿರಬೇಕು ಮತ್ತು 8ನೇ ತರಗತಿಗೆ ಪ್ರವೇಶ ಪಡೆಯಲು ಅರ್ಹರಾಗಿರಬೇಕು.

ಹಿರಿಯರ ವಿಭಾಗದ ಕ್ರೀಡಾ ವಸತಿ ಶಾಲೆಗಳ ಆಯ್ಕೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ದಿನಾಂಕ 01–06–2026 ರಂದು 18 ವರ್ಷದೊಳಗಿದ್ದು, ಪ್ರಥಮ ಪಿ.ಯು.ಸಿ ಪ್ರವೇಶ ಪಡೆಯಲು ಅರ್ಹರಾಗಿರಬೇಕು. ಆಯ್ಕೆಯನ್ನು ಪ್ರಸ್ತುತ 10ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಾಲಕ ಅಥವಾ ಬಾಲಕಿಯರಿಗಾಗಿ ಆಯ್ಕೆ ನಡೆಸಲಾಗುತ್ತಿದೆ.

ತಾವು ವ್ಯಾಸಾಂಗ ಮಾಡುತ್ತಿರುವ ಶಾಲಾ ಮುಖ್ಯಸ್ಥರಿಂದ ಜನ್ಮ ದಿನಾಂಕ ಪ್ರಮಾಣಪತ್ರ ಹಾಗೂ ವ್ಯಾಸಂಗ ಮಾಡುತ್ತಿರುವ ತರಗತಿಯ ವಿವರಗಳನ್ನೊಳಗೊಂಡ ದೃಢೀಕರಣ ಪತ್ರವನ್ನು ಆಯ್ಕೆ ದಿನದಂದು ಕಡ್ಡಾಯವಾಗಿ ತರಬೇಕು. ಆಸಕ್ತ ಕ್ರೀಡಾಪಟುಗಳು ಈ ವಿಶೇಷ ಆಯ್ಕೆ ಶಿಬಿರದಲ್ಲಿ ಭಾಗವಹಿಸಬಹುದಾಗಿದೆ. ರಾಜ್ಯದ ಯಾವುದೇ ಭಾಗದ ಕ್ರೀಡಾಪಟಗಳು ಭಾಗವಹಿಸಲು ಮುಕ್ತ ಅವಕಾಶವಿರುತ್ತದೆ. ಆಯ್ಕೆಯಲ್ಲಿ ಪಾಲ್ಗೊಳ್ಳುವ ಕ್ರೀಡಾಪಟುಗಳಿಗೆ ಯಾವುದೇ ವಿಧವಾದ ಭತ್ಯೆಯನ್ನು ನೀಡಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗೆ ಸಹಾಯಕ ನಿರ್ದೇಶಕರ ಕಚೇರಿ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣ ರಾಯಚೂರು ಇಲ್ಲಿ ಅಥವಾ ಖೇಲೋ ಇಂಡಿಯಾ ತರಬೇತುದಾರರು ಚಂದ್ರಶೇಖರ್ ದೂರವಾಣಿ ಸಂಖ್ಯೆ: 9886551214ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಲ್ಲಿ ಮುಂಗಾರು ಬೀಜ ದಿನೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಲ್ಲಿ ಮುಂಗಾರು ಬೀಜ ದಿನೋತ್ಸವ ಕಾರ್ಯಕ್ರಮ ಸೋಮವಾರ ನಡೆಯಿತು.

ಪ್ರತಿ ವರ್ಷದಂತೆ ಈ ವರ್ಷವೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಿಂದ ಮೇ 25 ರಂದು ಮುಂಗಾರು ಬೀಜ ದಿನೋತ್ಸವವನ್ನು ಆಚರಿಸಲಾಗುತ್ತಿದೆ. ಅದರಂತೆ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಲ್ಲಿಯೂ ಮುಂಗಾರು ಬೀಜ ದಿನೋತ್ಸವವನ್ನು ಆಚರಿಸಲಾಯಿತು. ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಸ್ತಾರಣ ನಿರ್ದೇಶಕರಾದ ಡಾ. ಎ.ಆರ್. ಕುರುಬರ ಮತ್ತು ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ತಿಮ್ಮಣ್ಣ ಚವಡಿ ಹಾಗೂ ಕೊಪ್ಪಳ ಕೃಷಿವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಬದರಿ ಪ್ರಸಾದ ಪಿ.ಆರ್. ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು.





ಈ ಕಾರ್ಯಕ್ರಮವನ್ನು ವ್ಯವಸ್ಥಾಪನಾ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ತಿಮ್ಮಣ್ಣ ಚವಡಿ ಅವರು ಉದ್ಘಾಟಿಸಿದರು. ಬಳಿಕ ಅವರು ಮಾತನಾಡಿ, ಈ ಭಾಗದ ರೈತರಿಗೆ ಉತ್ತಮ ಬೀಜಗಳನ್ನು ಒದಗಿಸುವ ಸಲುವಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಜ್ಞಾನಿಗಳು ಹಾಗೂ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳದ ವಿಜ್ಞಾನಿ ಮತ್ತು ವಿಸ್ತರಣಾ ಮುಂದಾಳುಗಳೊಂದಿಗೆ ಚರ್ಚಿಸಿ ಉತ್ತಮ ಗುಣಮಟ್ಟದ ವಿವಿಧ ಬೆಳೆಗಳ ಪ್ರಮಾಣಿತ ಸಂಕರಣ ತಳಿಗಳನ್ನು ವಿತರಿಸುವ ಕಾರ್ಯಕ್ರಮವನ್ನು ಇಂದು ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಕೊಪ್ಪಳ ಕೃಷಿವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಬದರಿ ಪ್ರಸಾದ ಪಿ.ಆರ್. ಅವರು ಮಾತನಾಡಿ, ಈ ಭಾಗದ ರೈತರಿಗೆ ಉತ್ತಮ ತಳಿ ಮತ್ತು ಸಂಕರಣ ತಳಿಗಳನ್ನು ಒದಗಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ರೈತರು ತಳಿಗಳನ್ನು ಆಯ್ಕೆ ಮಾಡಿ ವೈಜ್ಞಾನಿಕವಾಗಿ ಬಿತ್ತನೆ ಮಾಡಿ ನಿರ್ವಹಣೆ ಮಾಡಿದದಲ್ಲಿ ಉತ್ತಮ ಫಸಲು ಪಡೆಯಬಹುದೆಂದು ತಿಳಿಸಿದರು.

ಗುಳದಳ್ಳಿ ಕೃಷಿ ಸಂಶೋಧನಾ ಕೇಂದ್ರದ ಕ್ಷೇತ್ರ ಅಧೀಕ್ಷಕರು ಹಾಗೂ ಬೀಜ ವಿಜ್ಞಾನಿಯಾದ ಡಾ. ಹನುಮಂತಪ್ಪ ದಾಸರಹಳ್ಳಿ ಅವರು ಮಾತನಾಡುತ್ತಾ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಲಭ್ಯವಿರುವ ವಿವಿಧ ಬೆಳೆಗಳ ತಳಿ ಮತ್ತು ಸಂಕರಣ ತಳಿಗಳ ಬಗ್ಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ರೈತರು ಕಡ್ಡಾಯವಾಗಿ ಬೀಜೋಪಚಾರ ಮಾಡಿ ಬಿತ್ತನೆ ಮಾಡಿದಲ್ಲಿ ಉತ್ತಮ ಮೊಳಕೆ ಒಡೆದು ಮಣ್ಣಿನಲ್ಲಿರುವ ರೋಗಾಣುಗಳಿಂದ ಬರುವ ರೋಗ ನಿರೋಧಕ ಶಕ್ತಿಯನ್ನು ಮತ್ತು ಬರನಿರೋಧಕ ಶಕ್ತಿಯನ್ನು ಪಡೆಯುವುದಲ್ಲದೆ ಇಳುವರಿಯಲ್ಲಿ ಶೇಕಡಾ 15 ರಿಂದ 25 ರಷ್ಟು ಹೆಚ್ಚಾಗುತ್ತದೆ ಎಂದು ಮಾಹಿತಿ ನೀಡಿದರು.

ಇದೆ ಸಂದರ್ಭದಲ್ಲಿ ಸಾಂಕೇತಿಕವಾಗಿ ಐದಾರು ರೈತರಿಗೆ ವಿವಿಧ ಬೆಳೆಗಳ ಬೀಜಗಳನ್ನು ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕುಕನೂರು ತಾಲೂಕಿನ ಕೃಷಿಕ ಸಮಾಜದ ನಿರ್ದೇಶಕರಾದ ಪ್ರಕಾಶ್ ಮೇಟಿ, ಪ್ರಗತಿಪರ ರೈತರಾದ ಮುದುಕಪ್ಪ ದೇವರ, ಜೀವಂತ ಗೌಡ, ಗವಿಸಿದ್ದಪ್ಪ, ಶರಣೆಗೌಡ ಹಾಗೂ ಹನುಮಂತಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ರೈತರು ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಜ್ಞಾನಿಗಳ (ಡಾ. ಬದರಿ ಪ್ರಸಾದ ಪಿ.ಆರ್., ವಿಸ್ತರಣಾ ಮುಂದಾಳು, ಮೊ.ನಂ. 9900145705)ನ್ನು ಸಂಪರ್ಕಿಸಬಹುದು.

# ಹೋಂ ಸ್ಟೇಗಳ ನೋಂದಣಿಗೆ ಪ್ರವಾಸೋದ್ಯಮ ಇಲಾಖೆಯಿಂದ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.25 : ಪ್ರವಾಸಿಗರ ಸುರಕ್ಷತೆ, ಗುಣ ಮಟ್ಟದ ಸೇವೆ, ಕಾನೂನು ಬದ್ದ ನಿರ್ವಹಣೆ ಹಾಗೂ ಪ್ರವಾಸೋದ್ಯಮದ ಅಭಿವೃದ್ದಿಯ ದೃಷ್ಟಿಯಿಂದ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ ಸೌಲಭ್ಯ ಮತ್ತು ನಿಯಂತ್ರಣ 2015ರ ಕಾಯ್ದೆ ಪ್ರಕಾರ ಹಾಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೋಂ ಸ್ಟೇ ಮಾಲೀಕರು ಕಡ್ಡಾಯವಾಗಿ ಜಿಲ್ಲೆಯ ಎಲ್ಲ ಹೋಂ ಸ್ಟೇಯನ್ನು ಆನ್‌ಲೈನ್ ಮುಖಾಂತರ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿಯನ್ನು ಮಾಡಿಕೊಳ್ಳಬೇಕೆಂದು ಕೋರಲಾಗಿದೆ.ಜಿಲ್ಲೆಯಲ್ಲಿ ಪ್ರವಾಸೋಧ್ಯಮ ಇಲಾಖೆಯಲ್ಲಿ ನೋಂದಣಿಯಾಗದೇ ಕಾರ್ಯನಿರ್ವಸುತ್ತಿರುವ ಹೋಂಸ್ಟೇಗಳು ಕಡ್ಡಾಯವಾಗಿ ಪ್ರವಾಸೋದ್ಯಮ ಇಲಾಖೆಯಡಿ ನೋಂದಣಿ ಮಾಡಿಕೊಳ್ಳಬೇಕು. ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳದೇ ಕಾರ್ಯನಿರ್ವಹಿಸುತ್ತಿದ್ದರೆ ಅಂತಹ ಹೋಂಸ್ಟೇಗಳ ಮಾಲೀಕರು ಕರ್ನಾಟಕ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ(ಸೌಲಭ್ಯ ಮತ್ತು ನಿಯಂತ್ರಣ) ಕಾಯ್ದೆ 2015 ಪ್ರಕಾರ ಸರ್ಕಾರದ ಆದೇಶ ಸಂಖ್ಯೆ: ಟಿಓಆರ್ 133 nrN 2025 ಬೆಂಗಳೂರು, ದಿನಾಂಕ: 29.04.2026 ರನ್ವಯ ಕ್ರಮವಹಿಸಲಾಗುವುದು.ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಗಣೇಶ ಗುಡಿ ಹತ್ತಿರ, ನಿಜಲಿಂಗಪ್ಪ ಕಾಲೋನಿ, ರಾಯಚೂರು–584101, ದೂರವಾಣಿ ಸಂಖ್ಯೆ: 08532 200677, ಇ–ಮೇಲ್:– adtourismrcr@gmail.comಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಪ್ರೆಂಟಿಸ್‌ಶಿಪ್ ಸಂದರ್ಶನ ಯಶಸ್ವಿ: 323 ಅಭ್ಯರ್ಥಿಗಳ ಆಯ್ಕೆ





• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲೆಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ), ಕುಷ್ಟಗಿ ರಸ್ತೆ, ಟಣಕನಕಲ್, ಕೊಪ್ಪಳದಲ್ಲಿ ಇತ್ತೀಚೆಗೆ ಆಯೋಜಿಸಲಾಗಿದ್ದ ಅಪ್ರೆಂಟಿಸ್‌ಶಿಪ್ ತರಬೇತಿ ಸಂದರ್ಶನ ಪ್ರಕ್ರಿಯೆ ಯಶಸ್ವಿಯಾಗಿ ನಡೆದಿದ್ದು, 323 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ಬೆಂಗಳೂರು ಸಮೀಪದ ಬಿಡದಿಯಲ್ಲಿರುವ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಆಯೋಜಿಸಲಾದ

ಈ ಸಂದರ್ಶನದಲ್ಲಿ ಐಟಿಐ ತೇರ್ಗಡೆ–ಯಾದ ಅಭ್ಯರ್ಥಿಗಳು ಹಾಗೂ ಪ್ರಸ್ತುತ ಅಂತಿಮ ವರ್ಷದ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಭಾಗವಹಿಸುವ ಅವಕಾಶ ಕಲ್ಪಿಸಲಾಗಿತ್ತು.

ಕೊಪ್ಪಳ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಂದ ಒಟ್ಟು 509 ತರಬೇತಿದಾರರು ಹೆಸರು ನೋಂದಾಯಿಸಿಕೊಂಡಿದ್ದರು. ಇದರಲ್ಲಿ 370 ಅಭ್ಯರ್ಥಿಗಳು ನೇರವಾಗಿ ಸಂದರ್ಶನದಲ್ಲಿ ಭಾಗವಹಿಸಿದ್ದು, ಉತ್ತಮ ಪ್ರದರ್ಶನ ತೋರಿದ 323 ಅಭ್ಯರ್ಥಿಗಳು ಅಂತಿಮವಾಗಿ ಆಯ್ಕೆ ಮಾಡಲಾಯಿತು.

ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ದೃಷ್ಟಿಯಿಂದ ಈ

ಸಂದರ್ಶನ ಪ್ರಕ್ರಿಯೆ ಐಟಿಐ ವಿದ್ಯಾರ್ಥಿಗಳಿಗೆ ಮಹತ್ವದ ಅವಕಾಶವಾಗಿದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ ಸರ್ಕಾರಿ ಐಟಿಐ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಜಿಲ್ಲಾ ನೋಡಲ್ ಅಧಿಕಾರಿಗಳು ಶುಭಾಶಯ ಕೋರಿದರು. ಮುಂದಿನ ದಿನಗಳಲ್ಲೂ ಐಟಿಐ ತರಬೇತಿದಾರರು ಇಂತಹ ಉದ್ಯೋಗಾವಕಾಶಗಳು ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಅವರು ತಿಳಿಸಿದ್ದಾರೆ.

# ಪ್ರಥಮ ಪಿಯುಸಿ ಪ್ರವೇಶ: ಮೇ.27ರಂದು ಕೌನ್ಸಲಿಂಗ್

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.25: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2026–27ನೇ ಸಾಲಿಗಾಗಿ ರಾಯಚೂರು ಜಿಲ್ಲೆಯಲ್ಲಿರುವ ಅಲ್ಪಸಂಖ್ಯಾತರ ವಿವಿಧ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ದಾಖಲಾತಿಗಾಗಿ ಮೇ.27ರಂದು ಕೌನ್ಸಲಿಂಗ್ ಹಮ್ಮಿಕೊಳ್ಳಲಾಗಿದ್ದು, ಮೆರಿಟ್‌ನಲ್ಲಿ ಅರ್ಹತೆ ಪಡೆದು ಆಯ್ಕೆಯಾದ ವಿದ್ಯಾರ್ಥಿಗಳು ವಿದ್ಯಾರ್ಥಿಗಳು ಕೌನ್ಸಲಿಂಗ್‌ಗೆ ಕಡ್ಡಾಯವಾಗಿ ಹಾಜರಾಗುವಂತೆ ಕೋರಲಾಗಿದೆ.ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ. ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಕಾಲೇಜು ಹಾಗೂ ಮೌಲಾನಾ ಆಜಾದ್ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ದಾಖಲಾತಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಮೆರಿಟ್‌ನಲ್ಲಿ ಅರ್ಹತೆ ಪಡೆದು ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮೇ.27ರಂದು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು, ಬೋಳಮಾನದೊಡ್ಡಿ ರಸ್ತೆ ರಾಯಚೂರಿನಲ್ಲಿ ಬೆಳಿಗ್ಗೆ 9:30 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿನಿಯರಿಗೆ (ಬಾಲಕಿಯರು) ಹಾಗೂ ಮಧ್ಯಾಹ್ನ 12 ಗಂಟೆಯಿಂದ 2 ಗಂಟೆಯವರೆಗೆ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ (ಬಾಲಕರು) ಕೌನ್ಸಲಿಂಗ್ ನಡೆಯಲಿದೆ.ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಬೋಳಮಾನದೊಡ್ಡಿ ರಸ್ತೆ ರಾಯಚೂರಿನಲ್ಲಿ ಬೆಳಿಗ್ಗೆ 9:30 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಎಸ್.ಸಿ, ಎಸ್.ಟಿ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರಿಗೆ (ಬಾಲಕಿಯರು) ಮಧ್ಯಾಹ್ನ 12 ಗಂಟೆಯಿಂದ 2 ಗಂಟೆಯವರೆಗೆ ಎಸ್.ಸಿ, ಎಸ್.ಟಿ ಹಾಗೂ ಹಿಂದುಳಿದ ವರ್ಗಗಳ ಬಾಲಕ ವಿದ್ಯಾರ್ಥಿಗಳಿಗೆ ಕೌನ್ಸಲಿಂಗ್ ಹಮ್ಮಿಕೊಳ್ಳಲಾಗಿದೆ.ಹೆಚ್ಚಿನ ಮಾಹಿತಿಗಾಗಿ ತಮ್ಮ ಹತ್ತಿದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ, ಡಾ.ಎಪಿಜೆ, ಅಬ್ದುಲ್ ಕಲಾಂ ವಸತಿ ಕಾಲೇಜು ಹಾಗೂ ಮೌಲಾನಾ ಆಜಾದ್ ಕಾಲೇಜು ಹಾಗೂ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ರಾಯಚೂರು ಮೊಬೈಲ್ ಸಂಖ್ಯೆ: 9731028420, ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ದೇವದುರ್ಗ ಮೊಬೈಲ್ ಸಂಖ್ಯೆ: 9148233616, ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಲಿಂಗಸೂಗೂರು ಉಪ ವಿಭಾಗದ ಮೊಬೈಲ್ ಸಂಖ್ಯೆ: 886447863 & 8197540046, ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಮಾನವಿ ಮೊಬೈಲ್ ಸಂಖ್ಯೆ: 8867334785 ಅಥವಾ ಜಿಲ್ಲಾ ಅಲ್ಪಸಂಖ್ಯಾತರ ಕಚೇರಿಗೆ ಭೇಟಿ ನೀಡಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರತಿಯೊಬ್ಬ ಸದಸ್ಯರು ತರಬೇತಿಯ ಉಪಯೋಗವನ್ನು ಪಡೆಯಿರಿ: ದತ್ತಾತ್ರೇಯಹೆಗೆಡೆ

• ಮಲ್ಲಮ್ಮ ನುಡಿ ವಾರ್ತೆಕುರುಗೋಡು

ಮೇ.25 ಪುರಸಭೆ ಅಧ್ಯಕ್ಷರು, ಉಪಾಧ್ಯಕ್ಷರು, ಮತ್ತು ಪುರಸಭೆ ಸದಸ್ಯರು ಅಭಿವೃದ್ಧಿ ದೃಷ್ಟಿಯಿಂದ ಜನಗ್ರಹ ಸಂಸ್ಥೆಯು ನೀಡುವ ತರಬೇತಿಯ ಉಪಯೋಗವನ್ನು ಪಡೆದು ತಮ್ಮ ವಾರ್ಡುಗಳಲ್ಲಿ ಕಸವಿಲೇವಾರಿ ಮಾಡಿ ಸ್ವಚ್ಚತೆಗೊಳಿಸಿ ವಾರ್ಡುಗಳ ಅಭಿವೃದ್ಧಿಗೆ ಶ್ರಮಿಸಬೇಕೆಂದು ಕುರುಗೋಡು ಪುರಸಭೆ ಮುಖ್ಯಾಧಿಕಾರಿ ದತ್ತಾತ್ರೇಯಹೆಗೆಡೆ ಅವರು ಸದಸ್ಯರುಗಳಿಗೆ ಸಲಹೆ ನೀಡಿದರು.ಅವರು ಪಟ್ಟಣದ ಪುರಸಭೆ ಕಾರ್ಯಾಲಯದಲ್ಲಿ ಜನಗ್ರಹ ಸಂಸ್ಥೆಯು ಪುರಸಭೆ ಸದಸ್ಯರುಗಳಿಗೆ ನೀಡುವ ಒಂದುದಿನದ ತರಬೇತಿ ಕಾರ್ಯಾಗಾರದಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ಪುರಸಭೆ ಸದಸ್ಯರು ಜನಗ್ರಹ ಸಂಸ್ಥೆಯ ಸಂಪನ್ಮೂಲವ್ಯಕ್ತಿಗಳು ಸಹ ತಮಗೆ ತರಬೇತಿಯಲ್ಲಿ ಹೆಚ್ಚಿನ ಮಾಹಿತಿಯನ್ನು ನೀಡುತ್ತಾರೆ. ಆದ್ದ–ರಿಂದ ತರಬೇತಿ ಪಡೆದು ಸದಸ್ಯರು ತಮ್ಮ ವಾರ್ಡುಗಳ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕೆಂದು ಕರೆನೀಡಿದರು.



ಕುರುಗೋಡು ಪುರಸಭೆ ಅಧ್ಯಕ್ಷ ಮಂಜುನಾಥ ಹಾಗು ಉಪಾಧ್ಯಕ್ಷೆ ಶ್ರೀಮತಿನಾಗವೇಣಿಅಂಜಿನಪ್ಪ ಅವರು ತಮ್ಮ ಅನಿಸಿಕೆ ವ್ಯಕ್ತಪಡಿಸಿ ಜನಗ್ರಹಸಂಸ್ಥೆಯು ಸದಸ್ಯರುಗಳಿಗೆ ನೀಡುವ ತರಬೇತಿ ಕಾರ್ಯಾಗಾರವು ಉತ್ತಮವಾದ ಬೆಳೆವಣಿಗೆ. ಈ ತರಬೇತಿಯನ್ನು ಎಲ್ಲಾ ಸದಸ್ಯರು ಸದುಪಯೋಗಪಡಿಸಿಕೊಳ್ಳಬೇಕೆಂದು ಎಂದು ಸಲಹೆ ನೀಡಿದರು.

ಜನಗ್ರಹಸಂಸ್ಥೆಯ ಸಂಪನ್ಮೂಲವ್ಯಕ್ತಿ ಹೆಚ್.ಎಲ್.ಮಂಜುನಾಥ ಅವರು ನೆರೆದ ನೆರೆದ ಪುರಸಭೆ ಸದಸ್ಯರಿಗೆ ತರಬೇತಿ ನೀಡಿ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜೊತೆ ಜ್ಞಾನ, ಸಲಹೆ ಮತ್ತು ತರಬೇರಿಗಳನ್ನು ನಿರಂತರವಾಗಿ ನೀಡುತ್ತಾ ಬಂದಿರುತ್ತದೆ. ಅಲ್ಲದೆ ಘನತ್ಯಾಜ್ಯವಸ್ತು ನಿಯಮ 2026 ಅನುಷ್ಠಾನ ಕುರಿತು ತರಬೇತಿ ನೀಡಿದರು. ತಾಂತ್ರಿಕ ಸಹಲೆಗಾರ ಲೋಕೇಶ, ಸೇರಿದಂತೆ ಪುರಸಭೆ ಅದ್ಯಕ್ಷ, ಉಪಾದ್ಯಕ್ಷ, ಮತ್ತು ಸದಸ್ಯರುಗಳು ತರಬೇತಿ ಉಪಯೋಗಪಡೆದುಕೊಂಡರು.

# ಅಂಗನವಾಡಿ ಕಂ ಕ್ರಷ್ ಕೇಂದ್ರಗಳ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗಳಿಗೆ ಆಫ್‌ಲೈನ್ ಮುಖಾಂತರ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.25 : ರಾಯಚೂರಿನ ಗಿಲ್ಲೇಸೂಗೂರು ಶಿಶು ಅಭಿವೃದ್ಧಿ ಯೋಜನೆಯಡಿ 08 ಅಂಗನವಾಡಿ ಕಂ ಕ್ರಷ್ ಕೇಂದ್ರಗಳ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಆಫ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ.ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಕಚೇರಿಯಲ್ಲಿ ಪಡೆದು–ಕೊಂಡು ಮೇ.30 ರೊಳಗಾಗಿ ಈ ಕಚೇರಿಗೆ ಸಲ್ಲಿಸಬಹುದಾಗಿದೆ.ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಗಿಲ್ಲೇಸೂಗೂರು ಯೋಜನೆ ಆಶಾಪೂರು ಕ್ರಾಸ್ ಸ್ಟೇಷನ್ ರಸ್ತೆ ರಾಯಚೂರು ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಎಂದು ಗಿಲ್ಲೇಸೂಗೂರುಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೇ.26ರಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ ಸಂದರ್ಶನ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.25: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಮೇ.26ರ ಬೆಳಗ್ಗೆ 10ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ನೇರ ಸಂದರ್ಶನ ಆಯೋಜಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವಂತೆ ಕೋರಲಾಗಿದೆ.

ನೇರ ಸಂದರ್ಶನದಲ್ಲಿ ಖಾಸಗಿ ಕಂಪನಿಗಳು ಭಾಗವಹಿಸಿ ತಮ್ಮಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಿದ್ದಾರೆ.

ಅರ್ಹತೆಗಳು: ಎಸ್.ಎಸ್.ಎಲ್.ಸಿ, ಪಿ.ಯು.ಸಿ ಹಾಗೂ ಎಲ್ಲಾ ಪದವೀಧರ ಆಸಕ್ತ 18 ರಿಂದ 28 ವರ್ಷಗಳ ವರೆಗಿನ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ.

ವಿದ್ಯಾರ್ಹತೆಯ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳು ಮತ್ತು ತಮ್ಮ ಬಯೋಡೆಟಾ, ಆಧಾರ್ ಕಾರ್ಡ್ ಪ್ರತಿ, ಭಾವಚಿತ್ರಗನ್ನು ಸಲ್ಲಿಸಬೇಕು. ನೇರ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕವಿರುವುದಿಲ್ಲ, ಬದಲಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬಾಲಾಜಿ ಕಾಂಪ್ಲೆಕ್ಸ್, ನೆಲ ಮಹಡಿ, ಗೂಡ್ ಶೆಡ್ ರಸ್ತೆ, ಸ್ಟೇಷನ್ ಏರಿಯಾ, ರಾಯಚೂರು ಹಾಗೂ ದೂರವಾಣಿ ಸಂಖ್ಯೆ 08532–231684, 9916931616, 9008211750, 8197930236ಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ನವೀನ ಕುಮಾರ್ ಸಂಗೇಪಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭೀಮಮಾರ್ಗ ಸಮಿತಿಗೆ ಪದಾಧಿಕಾರಿಗಳ ನೇಮಕ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಮೇ 25:ರಾಷ್ಟ್ರೀಯ ಭೀಮಮಾರ್ಗ ಸಮಿತಿಯ ರಾಜ್ಯ ಘಟಕಗಳಿಗೆ ಪದಾಧಿಕಾರಿಗಳನ್ನು ನೇಮಕ ಮಾಡಿ ಬಾನುವಾರ ಪ್ರಮಾಣ ಪತ್ರ ವಿತರಿಸಲಾಯಿತು. ಗೌರ್ವಧ್ಯಕ್ಷ :ಸುರೇಶ. ಡಿ ಅಧ್ಯಕ್ಷ :ಶಿವಶೇಖರ್. ಉಪಾಧ್ಯಕ್ಷರು :ಸೋಹನ್ ಕುಮಾರ್. ಪ್ರಭುಸ್ವಾಮಿ. ಮನೋಜ್ ಇ. ಟ. ವೆಂಕಟೇಶ್.ಕಾರ್ಯಧ್ಯಕ್ಷ :ಜಗದೀಶ್. ಪ್ರಧಾನ ಕಾರ್ಯದರ್ಶಿ :ಕುಮಾರ್ ಸಹಕಾರ್ಯದರ್ಶಿ:ಸಿದ್ದರಾಜು. :ಖಾಜಾಂಚಿ :ಗುರುಪ್ರಸಾದ್ ಆಯ್ಕೆ ಆಗಿರುವರು

ರಾಜ್ಯ ಸಂಘನ ಕಾರ್ಯಧರ್ಶಿ :ಸಚಿನ್ ಆರ್,ರಾಜ್ಯ ಕಾನೂನು ಸಲೇಹಗಾರರು /ರಾಜ್ಯ ಯುವಘಟಕದ ಕಾರ್ಯಧ್ಯಕ್ಷಕುಮಾರಸ್ವಾಮಿ ,ರಾಜ್ಯ ಯುವಘಟಕದ ಅಧ್ಯಕ್ಷ.:ನಂದ,ರಾಜ್ಯ ಕಲಾವಿರ ಘಟಕದ ಅಧ್ಯಕ್ಷ:ಹನುಮಯ್ಯ: ರಾಜ್ಯ ಸಂಘನ ಸಂಚಾಲಕರು :ರುಕ್ಮಿಣಿ. ಎಸ್.ರಾಜ್ಯ ಮಹಿಳಾ ಘಟಕದ ಅಧ್ಯಕ್ಷರು :ಪದ್ಮಾವತಿ. ರಾಜ್ಯ ಮಹಿಳಾಉಪಾಧ್ಯಕ್ಷರು :ಪೂರ್ಣಿಮಾ.ಆಯ್ಕೆ ಆಗಿರುವರು

ಮೈಸೂರ್ ಜಿಲ್ಲಾಘಟಕಕ್ಕೆ ಉಪಾಧ್ಯಕ್ಷರು. :ಹರೀಶ್,ಜಿಲ್ಲಾ ಪ್ರಧಾನಕಾರ್ಯಧರ್ಶಿ :ಮಹದೇವಸ್ವಾಮಿಜಿಲ್ಲಾ ಖಜಾಂಚಿ :ರವಿ.:ರಾಜ್ಯ ಕಾರ್ಯಕಾರಿ ಸದಸ್ಯ ರು.:ಹರೀಶ್.,ಮೈಸೂರ್ ನಗರ ಅ ದ್ಯಕ್ಷರು :ಮಹಾದೇವಸ್ವಾಮಿ,ರಾಜ್ಯ ಯುವಘಟಕದ ಉಪಾಧ್ಯಕ್ಷರು

ಸಚಿದಾನಂದ ಇವರುಗಳನ್ನು ಆಯ್ಕೆ ಮಾಡಲಾಗಿದೆ ಎಂದು ಅಧ್ಯಕ್ಷ ಶಿವಶೇಖರ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

## ಅಕ್ರಮ ಮದ್ಯ ಮಾರಾಟ ತಡೆಗಟ್ಟುವಂತೆ ಮನವಿ



• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ತಾಲೂಕಿನಾದ್ಯಂತ ಜರುಗುತ್ತಿರುವ ಅಕ್ರಮ ಮದ್ಯ ಮಾರಾಟ ಹಾಗೂ ಸಾಗಾಟವನ್ನು ತಡೆಗಟ್ಟಿ ತಪ್ಪಿತಸ್ಥರಿಗೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕುಕನೂರು ಪೊಲೀಸ್ ಠಾಣಾ ಪಿಎಸ್ಐ ಎಸ್ ಪಿ ನಾಯಕ್ ಅವರಿಗೆ ಕರವೇ ತಾಲೂಕ ಘಟಕದಿಂದ ಮನವಿ ಪತ್ರ ಸಲ್ಲಿಸಲಾಯಿತು.

ತಾಲೂಕಿನಾದ್ಯಂತ ಅಕ್ರಮ ಮದ್ಯ ಸಾಗಣೆ ಹಾಗೂ ಮಾರಾಟವು ಹೆಗ್ಗಿಲ್ಲದೆ ಜರುಗುತ್ತಿದ್ದು ಇದರಿಂದ ಯುವಜನತೆ ದಾರಿ ತಪ್ಪುವ ಆತಂಕ ಎದುರಾಗಿದ್ದು ಜೊತೆಗೆ ಮಹಿಳೆಯರು ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ ಇದನ್ನೆಲ್ಲಾ ಪರಿಗಣಿಸಿ ಪೊಲೀಸ್ ಇಲಾಖೆಯು ಅಕ್ರಮ ಮದ್ಯ ಮಾರಾಟ ಹಾಗೂ ಸಾಗಾಟವನ್ನು ತಡೆಗಟ್ಟಿ ತಪ್ಪಿತಸ್ಥರಿಗೆ ಕಾನೂನು ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಕುಕನೂರು ತಾಲೂಕ ಘಟಕದಿಂದ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕರವೇ ತಾಲೂಕ ಅಧ್ಯಕ್ಷ ರಮೇಶ ಚಂಡೂರ, ಉಪಾಧ್ಯಕ್ಷ ಹುಸೇನಸಾಬ್ ನದಾಫ್, ಗ್ರಾಮ ಶಾಖೆ ಅಧ್ಯಕ್ಷರ ಮಾರುತಿ ತಳಬಾಳ, ಉಪಾಧ್ಯಕ್ಷರಾದ ಹನುಮಂತ ವಾಲ್ಮೀಕಿ, ಮುತ್ತಪ್ಪ ಜ್ಯೋತಿ ಹಾಗೂ ಇನ್ನೂ ಅನೇಕರು ಉಪಸ್ಥಿತರಿದ್ದರು

## ಆದಿಲ್ ಮೊಬೈಲ್ಸ್ ವತಿಯಿಂದ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ




ಪಟ್ಟಣದ ಖ್ಯಾತ ಆದಿಲ್ ಮೊಬೈಲ್ಸ್ & ಹೋಮ್ ಅಪ್ಲಯನ್ಸ್ ಸಂಸ್ಥೆಯು ತನ್ನ 15ನೇ ವಾರ್ಷಿಕೋತ್ಸವದ ಅಂಗವಾಗಿ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 85% ಕ್ಕಿಂತ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಿದೆ ಎಂದು ಸಂಸ್ಥೆಯ ಮಾಲೀಕರು ತಿಳಿಸಿದ್ದಾರೆ.ಪಟ್ಟಣದ ಪತ್ರಿಕಾ ಭವನದಲ್ಲಿ ಸೋಮವಾರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಪ್ರಮುಖರಾದ ಎಂ.ಡಿ. ಖಾಜಾ ಹುಸೇನ್, ಮಹಮ್ಮದ್ ಜಾಫರ್, ಎಂ.ಡಿ. ಖಾಲಿದ್, ಮಹಮ್ಮದ್ ಮುಸ್ತಾಫ್, ಮಹಿಬೂಬ್ ಸಾಬ್ ಹಾಗೂ ಹರ್ಷ ವಾಹಿದ್ ಅವರು, "ಆದಿಲ್ ಮೊಬೈಲ್ಸ್ ಸಂಸ್ಥೆ ಸ್ಥಾಪನೆಯಾಗಿ ಮೇ 30 ರಂದು 15 ವರ್ಷಗಳು ಪೂರ್ಣಗೊಳ್ಳಲಿದ್ದು, ಈ ಸುದೀರ್ಘ ಪಯಣದಲ್ಲಿ ಗ್ರಾಹಕರು ನೀಡಿದ ಬೆಂಬಲವೇ ನಮ್ಮ ಬೆಳವಣಿಗೆಗೆ ಕಾರಣವಾಗಿದೆ. ಆದ್ದರಿಂದ ವಾರ್ಷಿಕೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶದಿಂದ ಸಮಾಜಮುಖಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ" ಎಂದು ತಿಳಿಸಿದರು.ಮೇ 30, 2026 ರಂದು ಸಂಜೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಬೆಂಗಳೂರು ಬೈಪಾಸ್ ರಸ್ತೆಯ ಕಡದಳ್ಳಿ ಮಕ್ಕಳ ಆಸ್ಪತ್ರೆ ಹಿಂಭಾಗದ ಶಾದಿಮಹಲ್ ಹೊರ ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದೆ. ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ 85% ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಗುವುದು ಎಂದು ಹೇಳಿದರು.ಇದೇ ವೇಳೆ ವಿದ್ಯಾರ್ಥಿಗಳಲ್ಲಿ ಕಲಿಕೆಯ ಉತ್ಸಾಹ ಹೆಚ್ಚಿಸುವ ಸಲುವಾಗಿ ವಿವಿಧ ಶಾಲಾ–ಕಾಲೇಜುಗಳಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಸಹ ನೀಡಲಾಗುವುದು ಎಂದು ತಿಳಿಸಿದರು. ವಿದ್ಯಾರ್ಥಿಗಳ ಹೆಸರುಗಳನ್ನು ಲಿಂಗಸೂಗೂರಿನ ಆದಿಲ್ ಮೊಬೈಲ್ಸ್ ಅಂಗಡಿಗಳಲ್ಲಿ ನೊಂದಾಯಿಸಬಹುದಾಗಿದೆ ಎಂದು ಮಾಹಿತಿ ನೀಡಿದರು.

ತಾಲೂಕಿನ ಪಾಲಕರು, ಶಾಲಾ–ಕಾಲೇಜುಗಳ ಮುಖ್ಯಸ್ಥರು, ಪ್ರಾಂಶುಪಾಲರು ಹಾಗೂ ಶಿಕ್ಷಕರು ವಿದ್ಯಾರ್ಥಿಗಳ ಹೆಸರುಗಳನ್ನು ನೋಂದಾಯಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ 9880283225 ಹಾಗೂ 8095219143 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಹೇಳಿದರು

## ನಾಗರಾಳ ; ಬಕ್ರೀದ ಹಬ್ಬದ ಶಾಂತಿ ಸಭೆ



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಬಕ್ರೀದ ಹಬ್ಬಕ್ಕೆ ದಿನಗಣನೆ ಆರಂಭವಾಗಿರುವ ಬೆನ್ನಲ್ಲೇ, ಬಕ್ರೀದ ಹಬ್ಬ ಆಚರಣೆ ಅಂಗವಾಗಿ ಸಮೀಪದ ನಾಗರಾಳ ಗ್ರಾಮದಲ್ಲಿ ಸೋಮವಾರ ಪೊಲೀಸ್ ಇಲಾಖೆಯಿಂದ ಶಾಂತಿ ಸಭೆ ಕರೆಯಲಾಗಿತ್ತು.

ಪಟ್ಟಣದ ಪೊಲೀಸ್ ಠಾಣಾ ಪಿಎಸ್ಐ ವೆಂಕಟೇಶ ಮಾಡಗೇರಿ ಶಾಂತಿ ಸಭೆಯಲ್ಲಿ ಮಾತನಾಡಿ, ಇದೇ 28ರಂದು ನಡೆಯಲಿರುವ ಬಕ್ರೀದ್ ಹಬ್ಬವನ್ನು ಶಾಂತ ರೀತಿಯಿಂದ ಆಚರಣೆ ಮಾಡಬೇಕು. ಯಾವುದೇ ಗೊಂದಲ ಹಾಗೂ ಅಶಾಂತಿಗೆ ಆಸ್ಪದ ನೀಡಬಾರದು. ಕಾನೂನು ಸುವ್ಯವಸ್ಥೆ ಕಾಪಾಡಲು ಸಹಕಾರ ನೀಡಿದ್ದಾರೆ. ಇದೇ ಸಹಕಾರ ಮುಂದುವರಿಸಬೇಕು ಎಂದು ಮನವಿ ಮಾಡಿದರು.

ನಾಗರಾಳ ಗ್ರಾಂ.ಪಂ ಮಾಜಿ ಅಧ್ಯಕ್ಷ ಸಾಬಣ್ಣ, ಅಲ್ತಾಫ ಪೀರ, ಹೊನ್ನಪ್ಪ ಮೇಟಿ, ಪಿಡಿಓ ಪ್ರವೀಣ ಪಾಟೀಲ್, ಹುಸೇನಸಾಬ, ಹನುಮಂತ, ಬಸವರಾಜ, ಶಂಕ್ರಪ್ಪ, ದೊಡ್ಡಪ್ಪ ಮೇಟಿ , ಮಕ್ಕಣ್ಣ, ಸುನೀಲ್, ಸಂಗಪ್ಪ ಹಿರೇಮನಿ, ಹೆಚ್ ಸಿ ಅಮರೇಶ ಸೇರಿದಂತೆ ಇತರರಿದ್ದರು.

## ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಉತ್ತಮ ಶಿಕ್ಷಣಕ್ಕಾಗಿ ಪ್ರೋತ್ಸಾಹ ನೀಡುವುದು ಅವಶ್ಯ:ವಿಶ್ವನಾಥ್ ಹೂಗಾರ

• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ



ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸುವ ಮೂಲಕ ಅವರಿಗೆ ಉತ್ತಮ ಶಿಕ್ಷಣ–ಕ್ಕಾಗಿ ಪ್ರೋತ್ಸಾಹ ನೀಡುವುದು ಅವಶ್ಯ. ಅಲ್ಲಮಪ್ರಭು ಸೌಹಾರ್ದ ಸಹಕಾರಿ ಸಂಘದ ವತಿಯಿಂದ ಎಸ್.ಎಸ್.ಎಲ್.ಸಿ.ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ತಾಲ್ಲೂಕಿಗೆ ಕೀರ್ತಿ ತಂದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಗೌರವಿಸುವ ಮೂಲಕ ಅಲ್ಲಮಪ್ರಭು ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ವಿಶ್ವನಾಥ್ ಹೂಗಾರ ಹೇಳಿದರು.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕೇಂಬ್ರಿಡ್ಜ್ ಹೈಸ್ಕೂಲ್ ನ ಅಮೃತಾ ತಂದೆ ಮಲ್ಲೇಶ ಮಾಟೂರು 625 ಕ್ಕೆ 615, ಜ್ಞಾನ ಸಂಜೀವಿನಿ ಹೈಸ್ಕೂಲ್ ನ ಸಂಜಯ್ ತಂದೆ ಶಂಕರಲಿಂಗಪ್ಪ 98.88,% ಸಮರ್ಥ ಮುತಾಲಿಕ್, 98% ಹಾಗೂ ಪಿಯುಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ 625 ಅಂಕಗಳಿಗೆ 587 ಅಂಕ ಗಳಿಸುವ ಮೂಲಕ ಸೀತಾಲಕ್ಷ್ಮಿ ಮುತಾಲಿಕ್ ತಾಲ್ಲೂಕಿಗೆ ಕೀರ್ತಿ ತಂದಿದ್ದಾರೆ.

ಈ ಎಲ್ಲಾ ಪ್ರತಿಭಾವಂತ ವಿಸ್ಯಾರ್ಥಿಗಳ ಭವಿಷ್ಯ ಉಜ್ವಲವಾಗಿರಲಿ ಎಂದು ಹಾರೈಸಿ ಅಲ್ಲಮಪ್ರಭು ಸೌಹಾರ್ದ ಸಹಕಾರಿ ಸಂಘದ ಕಚೇರಿಯಲ್ಲಿ ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು.

ಸಹಕಾರಿ ಉಪಾಧ್ಯಕ್ಷರಾದ ಅಮರೇಶ ಕುಂಬಾರ, ನಿರ್ದೇಶಕರಾದ ಬಸವರಾಜ ಹೂಗಾರ, ಅಮರೇಶ ಕಳಸದ ಗುಡಿ, ಈರಮ್ಮ ಮಲ್ಲೇಶ ಮಾಟೂರ, ಸಿಎ ಬಸವರಾಜ ಸಜ್ಜನ್, ಹಾಗೂ ಪೋಷಕರು ಮತ್ತು ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಫಿರಂಗಿಗಳ ರಕ್ಷಣೆ ಮಾಡಲು ಮನವಿ



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಇಲ್ಲಿನ ಐತಿಹಾಸಿಕ ಕೋಟೆಯ ಫಿರಂಗಿಗಳನ್ನು ರಕ್ಷಣೆ ಮಾಡಬೇಕು ಎಂದು ಸಂಘಟನೆಯವರಿಂದ ಪಿಎಸ್ಐ ವೆಂಕಟೇಶ ಮಾಡಗೇರಿ ಅವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಕೋಟೆಗೆ ಸಂಬಂಧಿಸಿದ ಸುಮಾರು ದಶಕದ ಹಳೆಯ ಫಿರಂಗಿಗಳು ಐತಿಹಾಸಿಕ ಕೋಟೆ ಪರಂಪರೆಯ ಕುರುಹುಗಳಾಗಿವೆ. ಠಾಣೆ ಮೂಲೆಯಲ್ಲಿ ಬಿದ್ದು ನಶಿಸಿತ್ತಿರುವ ಫಿರಂಗಿಗಳನ್ನು ರಕ್ಷಿಸಬೇಕು. ಮುಂದಿನ ಪೀಳಿಗೆಗೆ ಇತಿಹಾಸದ ನೆನಪು ಉಳಿಸಲು ತಮ್ಮ ಠಾಣಾ ಮುಂಭಾಗದಲ್ಲಿ ಸಾರ್ವಜನಿಕರ ವೀಕ್ಷಣೆ ಮಾಡಲು ಫಿರಂಗಿಗಳನ್ನು ಹಾಕಬೇಕು ಎಂದು ಮನವಿ ಮಾಡಿದ್ದಾರೆ. ಮಾನವ ಬಂಧುತ್ವ ವೇದಿಕೆ ಸಂಚಾಲಕ ಸಂಜೀವ ಚಲವಾದಿ, ಇಕ್ಬಾಲ್ ಉಸ್ತಾದ್, ವಿಶ್ವನಾಥ ಜೋಗಿ, ಎಸ್ಡಿಪಿಐ ಅಧ್ಯಕ್ಷ ಎಂಡಿರಫಿಕ್ ಖಾಜಿ, ದೇವರಾಜ ಯಾದವ, ಖಾಜಾ ಮೈನುದ್ದಿನ ಸೇರಿದಂತೆ ಇತರರಿದ್ದರು.

## ಅಧಿಕಾರಿಗಳ ನಿರ್ಲಕ್ಷ್ಯದಿಂದ ಬೇಸತ್ತ ಯುವಕರಿಂದ ಸ್ವಯಂ ಪ್ರೇರಿತವಾಗಿ ಟ್ಯಾಂಕ್ ಸ್ವಚ್ಛತೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಜಿಲ್ಲೆಯ ಗುರುಮಠಕಲ್ ತಾಲೂಕಿನ ಯಂಪಾಡ ಗ್ರಾಮದ ಹನುಮಾನ್ ದೇವಸ್ಥಾನದ ಸಮೀಪದಲ್ಲಿರುವ ಕುಡಿಯುವ ನೀರಿನ ಟ್ಯಾಂಕ್ ಕಲ್ಲು–ಮಣ್ಣುಗಳಿಂದ ಅಶುಚಿಯಾಗಿರುವುದನ್ನು ಮತ್ತು ಅಧಿಕಾರಿಗಳ ನಿರ್ಲಕ್ಷ್ಯದಿಂದ ಬೇಸತ್ತ ಯುವಕರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ, ರೋಗ–ರುಜಿನಗಳಿಂದ ದೂರವಿರಲು ಸ್ವಯಂ ಪ್ರೇರಿತವಾಗಿ ಸ್ವಚ್ಛತಾ ಕಾರ್ಯ ಕೈಗೊಂಡರು. ಗ್ರಾಮದ ಯುವಕರು ಸ್ವಯಂಪ್ರೇರಿತವಾಗಿ ಮುಂದೆ ಬಂದು ಟ್ಯಾಂಕ್ ಸ್ವಚ್ಛಗೊಳಿಸಿರುವುದು ಸಮಾಜದ ಮೇಲಿನ ಅವರ ಜವಾಬ್ದಾರಿತನ ಹಾಗೂ ಸೇವಾಭಾವನೆಯನ್ನು ತೋರಿಸುತ್ತದೆ. ಇದು ಕೇವಲ ಸ್ವಚ್ಛತಾ ಕಾರ್ಯವಷ್ಟೇ ಅಲ್ಲ, ಸಾರ್ವಜನಿಕ ಹಿತದೃಷ್ಟಿಯಿಂದ ಯುವಕರು ನೀಡಿದ ಜಾಗೃತಿ ಸಂದೇಶವೂ ಆಗಿದೆ. ಜನರು ಕೈಜೋಡಿಸುವ ಮುನ್ನವೇ ಅಧಿಕಾರಿಗಳು ಇಂತಹ ಮೂಲಸೌಕರ್ಯಗಳ ನಿರ್ವಹಣೆ ಮತ್ತು ಸ್ವಚ್ಛತೆಗೆ ಆದ್ಯತೆ ನೀಡಬೇಕೆಂಬ ಪ್ರೇರಣಾದಾಯಕ ಉದಾಹರಣೆಯಾಗಿ ಈ ಕಾರ್ಯ ಎಲ್ಲರಿಗೂ ಮಾದರಿಯಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಬೇಸತ್ತ ಯುವಕರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ, ರೋಗ–ರುಜಿನಗಳಿಂದ ದೂರವಿರಲು ಸ್ವಯಂಪ್ರೇರಿತವಾಗಿ ಸ್ವಚ್ಛತಾ ಕಾರ್ಯ ಕೈಗೊಂಡರು.

ಸಾರ್ವಜನಿಕ ಆರೋಗ್ಯ ಮತ್ತು ಪರಿಸರದ ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯೆಂಬ ಸಂದೇಶವನ್ನು ಈ ಕಾರ್ಯ ಸ್ಪಷ್ಟವಾಗಿ ತೋರಿಸಿದ ಗ್ರಾಮದ ಸ್ವಯಂ ಸೇವಾ ಮನೋಭಾವದ

ಸೇವಕರಾದ ಹಣಮೇಶ ಮಡಿವಾಳ, ಮರಲಿಂಗಪ್ಪಕಲಾಲ್, ಜಲಾಲ್ ಸಾಬ್, ಶರಣು ನಾಯ್ಕೋಡಿ, ಶಿವು ಜುಲ್ಬೆ, ಮಲ್ಲಿಕಾರ್ಜುನ ನಾಯ್ಕೋಡಿ ಹಾಗೂ ಇತರರು ಇದ್ದರು.

## ಬಂಕ್‌ಗಳಲ್ಲಿ ಪೆಟ್ರೋಲ್ ಡಿಜೆಲ್ ಕೊರತೆ



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಪಟ್ಟಣದ ಬಂಕಗಳಲ್ಲಿ ಡಿಜೆಲ್ ಕೊರತೆಯಿಂದ ವಾಹನ ಸವಾರರಿಗೆ, ರೈತರಿಗೆ ತೊಂದರೆ ಉಂಟಾಗಿದೆ. ಪಟ್ಟಣದಲ್ಲಿ ತಿಂಗಳಲ್ಲಿ ಎರಡು ಮೂರು ಬಾರಿ ಪೆಟ್ರೋಲ್, ಡೀಸೆಲ್ ಕೊರತೆ ಕಾಣಿಸಿಕೊಂಡಿತ್ತು. ಆದರೆ ರವಿವಾರ ಪಟ್ಟಣದ ಲಿಂಗಸುಗೂರ ರಸ್ತೆಯಲ್ಲಿನ ಎರಡು ಬಂಕ್, ಬಾಗಲಕೋಟೆ ರಸ್ತೆಯಲ್ಲಿನ ಎರಡು ಬಂಕ್ ತಾವರಗೇರೆ ರಸ್ತೆಯಲ್ಲಿ ಎರಡು ಬಂಕ್ ಗಳನ್ನು ಸ್ಥಾಪಿಸಲಾಗಿದೆ.ಒಟ್ಟೂ ಆರು ಬಂಕ್ ಗಳಲ್ಲಿ ಡಿಜೆಲ್ ಇಲ್ಲದಿರುವುದರಿಂದ ವಾಹನ ಸವಾರರು, ರೈತರು ಕಂಗಾಲಾದರೂ. ಪ್ರತಿಬಂಕ್ ಅಲೆದು ಡಿಜೆಲ್ ಇಲ್ಲದೆ ಕೊನೆಗೆ ದೂರದ ಪಟ್ಟಣಗಳ ಪೆಟ್ರೋಲ್ ಬಂಕ್ ಗಳಿಗೆ ಹೋಗಿ ಡಿಜೆಲ್ ತಂದು ವಾಹನ ಚಾಲನೆ ಮಾಡಿದ್ದೆವೆಎಂದು ಚಾಲಕರು ಪ್ರತಿಕೆಗೆ ಪ್ರತಿಕ್ರಿಯೇಸಿದ್ದಾರೆ. ಪಟ್ಟಣ ಸೇರಿದಂತೆ ಸುತ್ತಲಿನ ಪ್ರದೇಶದಲ್ಲಿ ಉತ್ತಮ ಮಳೆ ಸುರಿದಿರುವುದರಿಂದ ಭೂಮಿ ಹದಗೋಳಿಸಲು ಟ್ಯಾಕ್ಟರ್ ಗಳನ್ನು ಅವಲಂಬಿಸಿರುವ ರೈತರು ಮಡಿಕೆ ,ಕುಂಠಿ, ಟಿಲ್ಲರ್ ಯಂತ್ರಗಳನ್ನು ಬಳಸಿ ಭೂಮಿ ಹದಗೊಳಿ ಬಿತ್ತನೆಗೆ ಅಣಿ ಮಾಡಿಕೋಳ್ಳು ಹವಣಿಸುತ್ತಿರುವ ರೈತಾಪಿ ವರ್ಗಕ್ಕೆ, ಟ್ಯಾಕ್ಟರ್ ಮಾಲೀಕರಿಗೆ ಬಂಕ್‌ಗಳಲ್ಲಿ ಡಿಸೆಲ್ ಇಲ್ಲ ಎಂಬ ಶುದ್ದಿ ಅಘಾತವಾಗಿತ್ತು. ಆದರೆ ದೂರದ ಊರುಗಳಿಗೆ ತೆರಳುವ ಪ್ರಯಾಣಿಕರಿಗೆ, ಬೇರೆ ಊರುಗಳಿಂದ ಪಟ್ಟಣ ಹಾದುಹೋಗುವ ವಾಹನ ಸವಾರರಿಗೆ ಡಿಜೆಲ್ ಹಾಕಿಸಲು ಬಂಕಗಳ ಹತ್ತಿರ ಬಂದು ಡಿಜೆಲ್ ಇಲ್ಲ ಎಂಬುವುದನ್ನು ಕೇಳಿ ಮರಳುತ್ತಿರುವ ದೃಶ್ಯಕಂಡು ಬಂತ್ತು.

## ನಿಮ್ಮಿಂದ ಜನರಿಗೆ ಟ್ಯಾಂಕರ್ ನೀರು ಕೊಡುವ ಪರಿಸ್ಥಿತಿ ಬಂತಲ್ಲಾ ಡಿಸಿ, ಸಿಇಒಗೆ ಶಾಸಕ ಕಂದಕೂರ ವಿಷಾದ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



### ಜೆಸ್ಕಾಂ -ಪಂಚಾಯಿತಿಗಳಿಗೆ ಬೀಗ ಹಾಕುತ್ತೇವೆ ಶಾಸಕ ಶರಣಗೌಡ ಕಂದಕೂರ ಎಚ್ಚರಿಕೆ

ಕ್ಷೇತ್ರದ ಜನಸಾಮಾನ್ಯರು ನೀರು–ವಿದ್ಯುತ್‌ಗಾಗಿ ಪರದಾಡುತ್ತಿದ್ದರೂ ಜೆಸ್ಕಾಂ ಅಧಿಕಾರಿಗಳು ಹಾಗೂ ಪಿಡಿಒಗಳು ಅಹವಾಲು ಆಲಿಸುತ್ತಿಲ್ಲ. ಅಧಿಕಾರಿಗಳ ಇಂತಹ ಉಡಾಫೆಯ ಧೋರಣೆಯನ್ನು ಇನ್ಮುಂದೆ ಸಹಿಸಲು ಸಾಧ್ಯವಿಲ್ಲ. ಇವರ ಕಾರ್ಯವೈಖರಿ ತಕ್ಷಣವೇ ಬದಲಾಗದಿದ್ದಲ್ಲಿ, ಇಡೀ ಕ್ಷೇತ್ರದ ಜನರನ್ನು ಒಗ್ಗೂಡಿಸಿ ಉಗ್ರ ಪ್ರತಿಭಟನೆ ನಡೆಸಲಾಗುವುದು. ಅಷ್ಟೇ ಅಲ್ಲದೆ, ಜೆಸ್ಕಾಂ ಕಚೇರಿಗಳಿಗೆ ಹಾಗೂ ಗ್ರಾಮ ಪಂಚಾಯಿತಿಗಳಿಗೆ ಬೀಗ ಹಾಕಿಸಿ ಧರಣಿ ಹಮ್ಮಿಕೊಳ್ಳಬೇಕಾಗುತ್ತದೆ.

ಗುರುಮಠಕಲ್ ಮತಕ್ಷೇತ್ರದಲ್ಲಿ ಕಾಡುತ್ತಿರುವ ಕುಡಿಯುವ ನೀರಿನ ಅಭಾವ, ನಿರಂತರ ವಿದ್ಯುತ್ ವ್ಯತ್ಯಯ, ಜೆಸ್ಕಾಂ ಅಧಿಕಾರಿಗಳ ಬೇಜವಾಬ್ದಾರಿತನ, ಪಿಡಿಒಗಳ ಗೈರುಹಾಜರಿ ಹಾಗೂ ಓವರ್ ಲೋಡ್ ಬೂದಿ ತುಂಬಿದ ಲಾರಿಗಳಿಂದ ರಸ್ತೆಗಳು ಹಾಳಾಗುತ್ತಿರುವುದನ್ನು ಖಂಡಿಸಿ ಶಾಸಕ ಶರಣಗೌಡ ಕಂದಕೂರ ಅವರು ಜಿಲ್ಲಾಡಳಿತವನ್ನು ತೀವ್ರವಾಗಿ ಒತ್ತಾಯಿಸಿದ್ದಾರೆ. ಯಾದಗಿರಿ ಜಿಲ್ಲೆಯ ನೂತನ ಜಿಲ್ಲಾಧಿಕಾರಿ ಪಾಂಡವೇ ರಾಹುಲ್ ತುಕಾರಾಂ ಹಾಗೂ ಜಿ.ಪಂ. ಸಿಇಒ ಲವೀಶ್ ಒರಡಿಯಾ ಅವರನ್ನು ಭೇಟಿ ಮಾಡಿದ ಶಾಸಕರು ವಿಸ್ತೃತ ಮನವಿ ಸಲ್ಲಿಸಿದರು.ಕ್ಷೇತ್ರದ ನೀರಿನ ಅಭಾವಕ್ಕೆ ಜೆಸ್ಕಾಂ ಅಧಿಕಾರಿಗಳ ಬೇಜವಾಬ್ದಾರಿತನ ಹಾಗೂ ವಿದ್ಯುತ್ ವ್ಯತ್ಯಯವೇ ಕಾರಣ. ಪಟ್ಟಣದ ಹಲವು ಬಡಾವಣೆಗಳಲ್ಲಿ ನೀರಿನ ತೀವ್ರ ಸಮಸ್ಯೆ ಉದ್ಭವಿಸಿದ್ದು, ಸಾರ್ವಜನಿಕರಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವ ದುಸ್ಥಿತಿ ನಿರ್ಮಾಣವಾಗಿರುವುದಕ್ಕೆ ಶಾಸಕರು ತೀವ್ರ ಆಕ್ರೋಶ ಹೊರಹಾಕಿದರು. "ನನ್ನ ಶಾಸಕತ್ವದ ಅವಧಿಯಲ್ಲಿ ಜನರಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವಂತಹ ಪರಿಸ್ಥಿತಿ ಬಂದಿದೆಯಲ್ಲಾ" ಎಂದು ಶಾಸಕರು ಅತ್ಯಂತ ಭಾವನಾತ್ಮಕವಾಗಿ ನುಡಿದು ತೀವ್ರ ವಿಷಾದ ವ್ಯಕ್ತಪಡಿಸಿದರು. ಇಂದಿನ ಆಧುನಿಕ ಕಾಲದಲ್ಲೂ ಜನರಿಗೆ ಟ್ಯಾಂಕರ್ ನೀರೇ ಆಧಾರವಾಗಿರುವುದು ಅತ್ಯಂತ ಕಷ್ಟಕರ ಸಂಗತಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ಮುಂಬರುವ ಮಳೆಗಾಲ ಎದುರಿಸಲು ಜಿಲ್ಲಾಡಳಿತ ಹಾಗೂ ಜೆಸ್ಕಾಂ ತಕ್ಷಣವೇ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದರು.ಇದೇ ವೇಳೆ ಕ್ಷೇತ್ರದ ರಸ್ತೆಗಳ ದುಸ್ಥಿತಿಯ ಕುರಿತು ಜಿಲ್ಲಾಡಳಿತದ ಗಮನ ಸೆಳೆದ ಶಾಸಕರು, ಕ್ಷೇತ್ರದಾದ್ಯಂತ ಮಿತಿ ಮೀರಿ (ಓವರ್ ಲೋಡ್) ಬೂದಿ ತುಂಬಿದ ಲಾರಿಗಳು ಹಗಲುರಾತ್ರಿ ಸಂಚರಿಸುತ್ತಿರುವುದರಿಂದ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ರಸ್ತೆಗಳು ಸಂಪೂರ್ಣವಾಗಿ ಜರ್ಜರಿತಗೊಂಡು ಸಾರ್ವಜನಿಕರ ಸಂಚಾರಕ್ಕೆ ಸಂಚಕಾರ ತಂದೊಡ್ಡುತ್ತಿವೆ. ಈ ಅಕ್ರಮ ಹಾಗೂ ಮಿತಿ ಮೀರಿದ ಬೂದಿ ಲಾರಿಗಳ ಸಂಚಾರಕ್ಕೆ ಕಡಿವಾಣ ಹಾಕುವಂತೆ ಪೊಲೀಸ್ ವರಿಷ್ಠಾಧಿಕಾರಿಗಳಿಗೆ (ಎಸ್ಪಿ) ಹಲವು ಬಾರಿ ಮನವಿ ಮಾಡಿದರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ಕುರಿತು ಜಿಲ್ಲಾಧಿಕಾರಿಗಳು ತಕ್ಷಣವೇ ಮಧ್ಯೆ ಪ್ರವೇಶಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.ಗ್ರಾಮೀಣ ಜನರ ಸಮಸ್ಯೆಗಳನ್ನು ಆಲಿಸಬೇಕಾದ ಪಿಡಿಒಗಳು ಪಂಚಾಯತಿಗಳಲ್ಲಿ ಲಭ್ಯವಿರುತ್ತಿಲ್ಲ. ಸಾರ್ವಜನಿಕರು ದೂರು ನೀಡಲು ಹೋದರೆ ಅಧಿಕಾರಿಗಳೇ ಸಿಗುತ್ತಿಲ್ಲ ಎಂದು ಸಿಇಒ ಗಮನಕ್ಕೆ ತಂದ ಶಾಸಕರು, ಕಚೇರಿಗಳಲ್ಲಿ ಇರದ ಪಿಡಿಒಗಳ ವಿರುದ್ಧ ಹಾಗೂ ಸಾರ್ವಜನಿಕರ ಕರೆ ಸ್ವೀಕರಿಸದ ಜೆಸ್ಕಾಂ ಸಿಬ್ಬಂದಿ ವಿರುದ್ಧ ಕಟ್ಟುನಿಟ್ಟಿನ ಶಿಸ್ತುಕ್ರಮಕ್ಕೆ ಆಗ್ರಹಿಸಿದರು. ಸುಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು 24 ಗಂಟೆಗಳಲ್ಲಿ ಬದಲಾಯಿಸಬೇಕು ಮತ್ತು ಅಪೂರ್ಣಗೊಂಡಿರುವ ಜೆಜೆಎಂ ಹಾಗೂ ಬಹುಗ್ರಾಮ ಕುಡಿಯುವ ನೀರು ಯೋಜನೆಗಳ ಕಾಮಗಾರಿಗಳನ್ನು ತಕ್ಷಣವೇ ಪೂರ್ಣಗೊಳಿಸಬೇಕು ಎಂದು ಜಿ.ಪಂ. ಸಿಇಒ ಅವರಿಗೆ ಸೂಚಿಸಿದರು.ಶಾಸಕರ ಸುದೀರ್ಘ ಅಹವಾಲು ಆಲಿಸಿದ ನೂತನ ಜಿಲ್ಲಾಧಿಕಾರಿಗಳು ಹಾಗೂ ಜಿ.ಪಂ. ಸಿಇಒ ಅವರು, ನೀರಿನ ಸಮಸ್ಯೆ, ವಿದ್ಯುತ್ ವ್ಯತ್ಯಯ ಹಾಗೂ ಬೂದಿ ಲಾರಿಗಳ ಓವರ್ ಲೋಡ್ ಸಂಚಾರದ ಕುರಿತು ತಕ್ಷಣವೇ ಸಂಬಂಧಪಟ್ಟ ಇಲಾಖೆಗಳ ತುರ್ತು ಸಭೆ ಕರೆದು ಸೂಕ್ತ ನಿರ್ದೇಶನ ನೀಡುವುದಾಗಿ ಹಾಗೂ ಸಾರ್ವಜನಿಕರ ಕರೆಗಳಿಗೆ ಸ್ಪಂದಿಸದ ಮತ್ತು ಗೈರುಹಾಜರಾಗುವ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ಜಾರಿ ಮಾಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷರಾದ ಶುಬಾಸ್ಚಂದ್ರ ಕಟಕಟಿ, ಮುಖಂಡರಾದ ಮಲ್ಲನಗೌಡ ಹಳೆಮನಿ, ರಾಜು ಉಡುಪಿ, ಅಲ್ಲಾವುದ್ದೀನ್, ಲಕ್ಷ್ಮಣ ನಾಯಕ ಕೂಡ್ಲೂರ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ರಾಜ್ಯದಲ್ಲಿ ಮತ್ತೆ ತೈಲ ಬೆಲೆ ಏರಿಕೆ: ವಾಹನ ಸವಾರರು ಕಂಗಾಲು



**ಬಳ್ಳಾರಿ:** ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೇಲ್ ದರಗಳು ಮತ್ತೆ ಏರಿಕೆಯಾಗಿರುವುದು ಸಾರ್ವಜನಿಕರಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ. ಕಳೆದ 10 ದಿನಗಳ ಅವಧಿಯಲ್ಲಿ ನಾಲ್ಕನೇ ಬಾರಿ ತೈಲ ಬೆಲೆ ಹೆಚ್ಚಳವಾಗಿರುವುದು ವಾಹನ ಸವಾರರು, ಸಾರಿಗೆ ಉದ್ಯಮಿಗಳು ಹಾಗೂ ಸಾಮಾನ್ಯ ಜನರ ಮೇಲೆ ಹೆಚ್ಚುವರಿ ಆರ್ಥಿಕ ಭಾರವನ್ನು ತಂದಿದೆ.

ಇತ್ತೀಚಿನ ದರ ಪರಿಷ್ಕರಣೆಯಂತೆ ಪ್ರತಿ ಲೀಟರ್ ಪೆಟ್ರೋಲ್ ಬೆಲೆಯಲ್ಲಿ 2.90 ಹಾಗೂ ಡೀಸೇಲ್ ಬೆಲೆಯಲ್ಲಿ 2.10 ಏರಿಕೆ ಮಾಡಲಾಗಿದೆ. ಇದರ ಪರಿಣಾಮವಾಗಿ ಗಣಿ ಜಿಲ್ಲೆ ಬಳ್ಳಾರಿಯಲ್ಲಿ ಪೆಟ್ರೋಲ್ ದರ ಲೀಟರ್ಗೆ 109.19 ತಲುಪಿದ್ದು, ಡೀಸೇಲ್ ದರ 100 ಗಡಿ ದಾಟಿದೆ. ತೈಲ ಬೆಲೆ ಏರಿಕೆಯಿಂದ ದಿನನಿತ್ಯ ವಾಹನ ಬಳಕೆ ಮಾಡುವ ನೌಕರರು, ವಿದ್ಯಾರ್ಥಿಗಳು, ಸಣ್ಣ ವ್ಯಾಪಾರಿಗಳು ಹಾಗೂ ಸರಕು ಸಾಗಣೆ ವಾಹನ ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನತೆ ತತ್ತರಿಸಿರುವ ಸಂದರ್ಭದಲ್ಲಿ ಇಂಧನ ದರ ಏರಿಕೆ ಮತ್ತಷ್ಟು ಹೊರೆ ತಂದಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಳ್ಳಾರಿಯಲ್ಲಿ ಆಟೋ ಚಾಲಕರು, ಲಾರಿ ಮಾಲೀಕರು ಹಾಗೂ ಖಾಸಗಿ ವಾಹನ ಸವಾರರು ಸರ್ಕಾರದ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ. "ಪ್ರತಿ ಕೆಲ ದಿನಗಳಿಗೊಮ್ಮೆ ತೈಲ ದರ ಹೆಚ್ಚಳ ಮಾಡುವುದು ಜನಸಾಮಾನ್ಯರ ಬದುಕಿನ ಮೇಲೆ ನೇರ ಪರಿಣಾಮ ಬೀರುತ್ತಿದೆ. ವಾಹನ ಚಾಲನೆ ಮಾಡುವುದೇ ದುಬಾರಿಯಾಗುತ್ತಿದೆ" ಎಂದು ವಾಹನ ಸವಾರರು ದೂರಿದರು. ಗಣಿ ಚಟುವಟಿಕೆಗಳು ಹೆಚ್ಚಿರುವ ಬಳ್ಳಾರಿ ಜಿಲ್ಲೆಯಲ್ಲಿ ಡೀಸೇಲ್ ಬಳಕೆ ಹೆಚ್ಚಾಗಿರುವುದರಿಂದ ಲಾರಿ ಹಾಗೂ ಸರಕು ಸಾಗಣೆ ಕ್ಷೇತ್ರಕ್ಕೂ ಈ ದರ ಏರಿಕೆ ದೊಡ್ಡ ಹೊಡೆತ ನೀಡಿದೆ. ಸಾರಿಗೆ ವೆಚ್ಚ ಹೆಚ್ಚಳದಿಂದ ಅಗತ್ಯ ವಸ್ತುಗಳ ಬೆಲೆಯೂ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ವ್ಯಾಪಾರ ವಲಯದವರು ಆತಂಕ ವ್ಯಕ್ತಪಡಿಸಿದ್ದಾರೆ. ರಾಜ್ಯ ಸರ್ಕಾರ ತೈಲ ಮೇಲಿನ ತೆರಿಗೆ ಮರುಪರಿಶೀಲನೆ ಮಾಡಿ ಸಾರ್ವಜನಿಕರಿಗೆ ಪರಿಹಾರ ನೀಡಬೇಕು ಎಂಬ ಒತ್ತಾಯವೂ ಕೇಳಿಬರುತ್ತಿದೆ. ನಿರಂತರ ದರ ಏರಿಕೆಯಿಂದ ಮಧ್ಯಮ ವರ್ಗ ಹಾಗೂ ದುಡಿಯುವ ವರ್ಗದ ಜನರ ಜೀವನ ನಿರ್ವಹಣೆ ಕಷ್ಟಕರವಾಗುತ್ತಿದೆ ಎಂದು ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ಮೇ 26 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

**ಕಲಬುರಗಿ:** ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ–1ರ ವ್ಯಾಪ್ತಿಯ 110/33/11 ಕೆವ್ಹಿ ಆಳಂದ, ವಿದ್ಯುತ್ ವಿತರಣಾ ಕೇಂದ್ರದ ಪರಿವರ್ತಕ–1 ಮತ್ತು 2ರ ನಿರ್ವಹಣಾ ಕಾರ್ಯಕೈಗೊಂಡಿರುವ ಪ್ರಯುಕ್ತ ಎಲ್ಲಾ ಹೊರಹೊಗುವ 11ಕೆ.ವಿ. ಫೀಡರಗಳ ವ್ಯಾಪ್ತಿಯ ಗ್ರಾಮಗಳಲ್ಲಿ 2026ರ ಮೇ 26 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಎಲ್ಲಾ ಗ್ರಾಹಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ–1ರ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

**110/11 ಕೆವಿ ಆಳಂದ ವಿದ್ಯುತ್ ವಿತರಣಾ ಕೇಂದ್ರ:** ಎಫ್–1 ಆಳಂದ ಟೌನ, ಎಫ್–2 ಆಳಂದ ವಾಟರ್ ಸಪ್ಲೈ, ಎಫ್–3– ಭುಸನೂರ ಐಪಿ ಸೆಟ್, ಎಫ್–4–ಹನುಮಾನ ಟೆಂಪಲ್, ಎಫ್–5– ಕಿಣ್ಣಿಸುಲ್ತಾನ ಎನ್.ಜೆ.ವಾಯ್, ಎಫ್–6–ಖಾನಾಪೂರ ಐಪಿ ಸೆಟ್, ಎಫ್–7– ಹೆಬಳಿ ಐಪಿ ಸೆಟ್, ಎಫ್–8 ತೆಲೆಕೊಣಿ ಐಪಿ ಸೆಟ್, ಎಫ್–9–ರಮೇಶ ತಾಂಡಾ ಐಪಿ ಸೆಟ್ ಫೀಡರಿನ ಆಳಂದ ಪಟ್ಟಣ ಹೆಬಳಿ, ಮೋರಿಸಾಬ ತಾಂಡಾ, ಗುಳ್ಳೊಳಿ, ಗುಳ್ಳೊಳಿ ತಾಂಡಾ, ಜಿರೊಳ್ಳಿ, ಜಿರೊಳ್ಳಿ ತಾಂಡಾ, ಸಂಗೋಳಿ(ಜೆ), ಹೆಬಳಿ ತಾಂಡಾ, ಮಟಕಿ ತಾಂಡಾ, ತೀರ್ಥ ತಾಂಡಾ, ಅಪ್ಪತಾ ತಾಂಡಾ, ಪಿಎನ್ ತಾಂಡಾ, ಪಾರ್ದಿ ತಾಂಡಾ, ಸೀಡಫಾರ್ಮ ತಾಂಡಾ ಹನುಮಾನಗರ ತಾಂಡಾ, ಕಿಣ್ಣಿಸುಲ್ತಾನ.

# ಉಚಿತ ತಪಾಸಣೆ: ಸಾರ್ವಜನಿಕರಿಗೆ ಆರ್.ಬಿ. ಪಾಟೀಲ್ ಮನವಿ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ನಗರದ ಡಾ. ಆರ್.ಬಿ. ಪಾಟೀಲ್ ಫೌಂಡೇಶನ್, ಶ್ರೀ ಅಂಜನಾದ್ರಿ ಗೆಜ್ಜೆ ಹೆಜ್ಜೆ ಜನಸೇವಾ ಕಲಾ ಟ್ರಸ್ಟ್ ಹಾಗೂ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಯ ಜಂಟಿ ಆಶ್ರಯದಲ್ಲಿ ಮೇ 24 ಮತ್ತು 25 ರಂದು (ಭಾನುವಾರ ಮತ್ತು ಸೋಮವಾರ) ನಗರದಲ್ಲಿ ಎರಡು ದಿನಗಳ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಫೌಂಡೇಶನ್ ಅಧ್ಯಕ್ಷ ಹಾಗೂ ವಕೀಲರಾದ ಆರ್.ಬಿ. ಪಾಟೀಲ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, "ನಗರದ ಭಗೀರಥ ವೃತ್ತದ ಬಳಿಯಿರುವ ಯಶೋಧ ಆಸ್ಪತ್ರೆಯ ಹಿಂಭಾಗದ ಶ್ರೀ ಸೀತಾರಾಮಾಂಜನೇಯ ದೇವಸ್ಥಾನದ ಆವರಣದಲ್ಲಿ ಅತ್ಯಂತ ನುರಿತ ವೈದ್ಯರ ತಂಡದಿಂದ ಈ ಶಿಬಿರ ನಡೆಯಲಿದೆ. ಆರ್ಥಿಕವಾಗಿ ಹಿಂದುಳಿದ ಜನರು ದುಬಾರಿ ವೆಚ್ಚಕ್ಕೆ ಹೆದರಿ ರೋಗಗಳನ್ನು ಉಲ್ಬಣಗೊಳಿಸಿಕೊಳ್ಳಬಾರದು ಎಂಬ ಉದಾತ್ತ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ" ಎಂದರು.

ಯಾವೆಲ್ಲ ಕಾಯಿಲೆಗಳಿಗೆ ತಪಾಸಣೆ?

ಶಿಬಿರದಲ್ಲಿ ಹೃದ್ರೋಗ, ಸ್ತನ ಕ್ಯಾನ್ಸರ್, ಕಿಡ್ನಿ ಸ್ಟೋನ್, ಅಪೆಂಡಿಸೈಟಿಸ್, ಸ್ತ್ರೀರೋಗ ಹಾಗೂ ಪ್ರಸೂತಿ, ಮಕ್ಕಳ ರೋಗಗಳು, ಮೂಳೆ ಮತ್ತು ಕೀಲು ರೋಗ, ನರರೋಗ, ಬೆನ್ನು ನೋವು, ಕುತ್ತಿಗೆ ನೋವು, ಇ.ಎನ್.ಟಿ (ಕಿವಿ, ಮೂಗು, ಗಂಟಲು), ಕಣ್ಣಿನ ತಪಾಸಣೆ, ಮೆದುಳಿನ ಗಡ್ಡೆ, ಬಿಪಿ ಮತ್ತು ಶುಗರ್ ಸೇರಿದಂತೆ 30ಕ್ಕೂ ಹೆಚ್ಚು ಗಂಭೀರ ಕಾಯಿಲೆಗಳಿಗೆ ಉಚಿತ ತಪಾಸಣೆ ನಡೆಸಲಾಗುತ್ತದೆ. ತಪಾಸಣೆಯ ಬಳಿಕ ರೋಗ ಲಕ್ಷಣ ಕಂಡುಬಂದಲ್ಲಿ ಬಿಪಿಎಲ್, ಅಂತ್ಯೋದಯ ಹಾಗೂ ಯಶಸ್ವಿನಿ ಕಾರ್ಡ್ ಹೊಂದಿರುವ ಫಲಾನುಭವಿಗಳಿಗೆ ಉಚಿತವಾಗಿ ಮುಂದಿನ ಚಿಕಿತ್ಸೆ ಒದಗಿಸಲಾಗುವುದು ಎಂದು ಅವರು ವಿವರಿಸಿದರು.

**ಗಣ್ಯರ ಸಮ್ಮುಖದಲ್ಲಿ ಉದ್ಘಾಟನೆ:** ಶ್ರೀ ಅಂಜನಾದ್ರಿ ಗೆಜ್ಜೆ ಹೆಜ್ಜೆ ಜನಸೇವಾ ಕಲಾ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ನಾಗರಾಜ್ ಇಂಗಳಗಿ ಮಾತನಾಡಿ, "ಈ ಸೇವಾ ಕಾರ್ಯಕ್ಕೆ ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಸಂಘದ ಗಂಗಾವತಿ ಘಟಕ ಹಾಗೂ ವಿಐಪಿ ಮೆಲೋಡಿಸ್ ಕೈಜೋಡಿಸಿವೆ. ಶಿಬಿರವನ್ನು ಸುಳೇಕಲ್‌ನ ಶ್ರೀ ಭುವನೇಶ್ವರಯ್ಯ ಶ್ರೀಗಳು ಉದ್ಘಾಟಿಸಲಿದ್ದು, ಅರಳಹಳ್ಳಿಯ ಶ್ರೀ ಗವಿಸಿದ್ದೇಶ್ವರ ಶ್ರೀಗಳು ಹಾಗೂ ಜಾಮಿಯಾ ಮಸೀದಿಯ ಮೌಲಾನಾ ಕಮಾಲ್ ಪಾಶಾ ನಕ್ಷಬಂದಿ ಅಲ್ ಖಾದ್ರಿ ಸಾಬ್ ದಿವ್ಯ ಸಾನಿಧ್ಯ ವಹಿಸಲಿದ್ದಾರೆ" ಎಂದರು.

ವೇದಿಕೆಯಲ್ಲಿ ಮಾಜಿ ಶಾಸಕ ಪರಣ್ಣ ಮುನವಳ್ಳಿ, ಮಾಜಿ ಸಂಸದ ಶಿವರಾಮಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಹೆಚ್.ಆರ್. ಶ್ರೀನಾಥ್, ಶ್ರೀ ಭಗೀರಥ ಉಪ್ಪಾರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ನರಸಪ್ಪ ಅಮರಜ್ಯೋತಿ, ವೈದ್ಯಾಧಿಕಾರಿ ಈಶ್ವರ ಸವಡಿ, ತಾಲೂಕು ಉಪ್ಪಾರ ಸಮಾಜದ ಅಧ್ಯಕ್ಷ ವೆಂಕಟೇಶ್ ಅಮರಜ್ಯೋತಿ ಸೇರಿದಂತೆ ಹಲವರು ಪಾಲ್ಗೊಳ್ಳಲಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಕಾರ್ಮಿಕ ಸಂಘದ ರಾಜ್ಯಾಧ್ಯಕ್ಷ ಶಿವಕುಮಾರ್ ಗೌಡ, ಮುಖಂಡರಾದ ರಾಮು ಹಂಚಿನಾಳ್ ಹಾಗೂ ಗೋಪಾಲ್ ಉಪಸ್ಥಿತರಿದ್ದರು. ಸಾರ್ವಜನಿಕರು ಈ ಉಚಿತ ಶಿಬಿರದ ಸದುಪಯೋಗ ಪಡಿಸಿಕೊಳ್ಳಲು ಕೋರಲಾಗಿದೆ.



# ಕೆ.ಪಿ.ಎಸ್ ಶಾಲೆಗಳಿಗೆ ಅನುಮೋದನೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬಾಗಲಕೋಟೆ ಮತಕ್ಷೇತ್ರದ ನೀಲಾನಗರ, ನೀರಲಕೇರಿ ಹಾಗೂ ಕದಾಂಪುರ ಪುನರ್ವಸತಿ ಕೇಂದ್ರಕ್ಕೆ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ (ಕೆ.ಪಿ.ಎಸ್) ಅನುಮೋದನೆ ದೊರೆತಿದೆ ಎಂದು ಶಾಸಕ ಉಮೇಶ್ ಮೇಟಿ ತಿಳಿಸಿದ್ದಾರೆ.

ಗ್ರಾಮೀಣ ಭಾಗದ ಮಕ್ಕಳಿಗೂ ಉತ್ತಮ ಶಿಕ್ಷಣ ಸಿಗಬೇಕು ಎನ್ನುವುದು ನಮ್ಮ ಆಶಯ. ಈ ಭಾಗದ ಜನರು ಹಲವು ವರ್ಷಗಳಿಂದ ಈ ಶಾಲೆಗಳಿಗಾಗಿ ಬೇಡಿಕೆ ಇಟ್ಟಿದ್ದರು. ಈಗ ಸರ್ಕಾರ ಶಾಲೆಗಳಿಗೆ ಅನುಮೋದನೆ ನೀಡಿರುವುದು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಬಹಳ ಸಂತಸವಾಗಿದೆ ಎಂದಿದ್ದಾರೆ.

ಮತಕ್ಷೇತ್ರದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಉತ್ತಮ ಮೂಲಸೌಕರ್ಯ, ಶಿಕ್ಷಕರ ಸೌಲಭ್ಯ ಹಾಗೂ ಆಧುನಿಕ ಶಿಕ್ಷಣ ವ್ಯವಸ್ಥೆ ಕಲ್ಪಿಸುವ ಕೆಲಸ ನಡೆಯುತ್ತಿದೆ. ಈಗ ಕೆ.ಪಿ.ಎಸ್



ಶಾಲೆಗಳ ಆರಂಭದಿಂದ ಬಡ ಮತ್ತು ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಲಿದೆ. ಕ್ಷೇತ್ರದ ಅಭಿವೃದ್ಧಿಯ ಜೊತೆಗೆ ಶಿಕ್ಷಣ ಕ್ಷೇತ್ರಕ್ಕೂ ವಿಶೇಷ ಗಮನ ನೀಡಲಾಗುತ್ತಿದೆ ಎಂದಿರುವ ಶಾಸಕ ಮೇಟಿ, ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಶಿಕ್ಷಣ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರದ ಮಟ್ಟದಲ್ಲಿ ಪ್ರಯತ್ನ ಮಾಡಲಾಗುವುದು ಎಂದು ಹೇಳಿದ್ದಾರೆ.

# 36 ಮೆಟ್ರಿಕ್ ಟನ್ ಕಬ್ಬಿಣದ ಅದಿರು ಜಪ್ತಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಖನಿಜ ಸಾಗಾಣಿಕೆ ಪರವಾನಗಿಯನ್ನು ದುರುಪಯೋಗಪಡಿಸಿಕೊಂಡು ಕಳ್ಳತನದಿಂದ ಕಬ್ಬಿಣದ ಅದಿರನ್ನು ಸಾಗಿಸುತ್ತಿದ್ದ ಜಾಲವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಭೇದಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಎರಡು ಟಿಪ್ಪರ್ ಲಾರಿಗಳು ಹಾಗೂ ಸುಮಾರು 36 ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಜಪ್ತಿ ಮಾಡಲಾಗಿದ್ದು, ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕೌಲ್ ಬಜಾರ್ನ ಕೆ. ಸತ್ಯನಾರಾಯಣ (52), ಓಬುಳಾಪುರಂನ ಕೆ. ನಾಗರಾಜ (32) ಬಂಧಿತ ಆರೋಪಿಗಳು. ಇವರ ವಿರುದ್ಧ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಸೆಕ್ಷನ್ 318(4) ಮತ್ತು 303(2)ರ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

**ಘಟನೆ ವಿವರ:** ಮೇ 23ರಂದು ಆಂಧ್ರಪ್ರದೇಶದ ಸೋಮಲಾಪುರ ರೈಲ್ವೇ ಸೈಡಿಂಗ್ಸ್ ಪ್ರದೇಶದಿಂದ



ಬಳ್ಳಾರಿಯ ಹಲಕುಂದಿ ಗ್ರಾಮದಲ್ಲಿರುವ ಶ್ರೀ ತಿರುಪತಿ ಸ್ಟೀಲ್ಸ್ ಕಾಸ್ಟ್ ಲಿಮಿಟೆಡ್ ಘಟಕಕ್ಕೆ ಅದಿರು ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಅಧಿಕಾರಿಗಳಿಗೆ ಲಭಿಸಿತ್ತು. ಈ ಮಾಹಿತಿ ಮೇರೆಗೆ ಭೂವಿಜ್ಞಾನಿ ನವೀನ್ ಜಿ. ಮತ್ತು ತಂಡದವರು ಬಳ್ಳಾರಿ ಗ್ರಾಮೀಣ ಪೊಲೀಸರೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಿದರು.

ಹಲಕುಂದಿ ಗ್ರಾಮದ ವಿ.ಆರ್.ಕೆ.ಪಿ ಫ್ಯಾಕ್ಟರಿ ರಸ್ತೆಯ ರೈಲ್ವೇ ಗೇಟ್ ಸಮೀಪ ಸಂಚರಿಸುತ್ತಿದ್ದ ಎರಡು ಲಾರಿಗಳನ್ನು ತಡೆದು ತಪಾಸಣೆ ನಡೆಸಿದಾಗ ಅಕ್ರಮ ಬಯಲಾಗಿದೆ.

# ರಾಜೀವ್ ಗಾಂಧಿ ನಗರದಲ್ಲಿ ಮೂಲಸೌಕರ್ಯ ಕಾಮಗಾರಿಗೆ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಮಹಾನಗರ ಪಾಲಿಕೆಯ ವಾರ್ಡ್ ನಂ.34ರ ರಾಜೀವ್ ಗಾಂಧಿ ನಗರದಲ್ಲಿ ಕುಡಿಯುವ ನೀರು, ಒಳಚರಂಡಿ ಹಾಗೂ ಪೇವರ್ಸ್ ಅಳವಡಿಸುವ ಅಭಿವೃದ್ಧಿ ಕಾಮಗಾರಿಗೆ ಮಾಜಿ ಮಹಾಪೌರರು ಹಾಗೂ ಪಾಲಿಕೆ ಸದಸ್ಯರಾದ ರಾಜೇಶ್ವರಿ ಸುಬ್ಬರಾಯುಡು ಅವರು ಭೂಮಿ ಪೂಜೆ ನೆರವೇರಿಸಿದರು.

ಈ ಪ್ರದೇಶದಲ್ಲಿ ಹಲವು ವರ್ಷಗಳಿಂದ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಒಳಚರಂಡಿ ಸೌಲಭ್ಯ ಇಲ್ಲದ ಕಾರಣ ಸಾರ್ವಜನಿಕರು ಸಾಕಷ್ಟು ಸಮಸ್ಯೆ ಅನುಭವಿಸುತ್ತಿದ್ದರು. ಮಳೆಯ ಸಮಯದಲ್ಲಿ ರಸ್ತೆಗಳಲ್ಲಿ ನೀರು ನಿಂತು ಸಂಚಾರಕ್ಕೂ ತೊಂದರೆ ಉಂಟಾಗುತ್ತಿತ್ತು. ಇದರಿಂದ ಸ್ಥಳೀಯ ನಿವಾಸಿಗಳು ಮೂಲಸೌಕರ್ಯ ಅಭಿವೃದ್ಧಿಗೆ ಒತ್ತಾಯಿಸುತ್ತಿದ್ದರು.

ಸಾರ್ವಜನಿಕರ ಬೇಡಿಕೆಯನ್ನು ಪರಿಗಣಿಸಿ 15ನೇ ಹಣಕಾಸು ಆಯೋಗದ ಅನುದಾನದಡಿ



ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಯಡಿ ಕುಡಿಯುವ ನೀರಿನ ಪೈಪ್ಲೈನ್ ಅಳವಡಿಕೆ, ಒಳಚರಂಡಿ ನಿರ್ಮಾಣ ಹಾಗೂ ಪೇವರ್ಸ್ ಅಳವಡಿಕೆ ಕಾರ್ಯ ನಡೆಯಲಿದೆ. ಕಾಮಗಾರಿ ಪೂರ್ಣಗೊಂಡ ಬಳಿಕ ಪ್ರದೇಶದ ಜನರಿಗೆ ಮೂಲಭೂತ ಸೌಲಭ್ಯಗಳು ಸುಧಾರಿಸಲಿದ್ದು, ಸಂಚಾರ ಹಾಗೂ ಸ್ವಚ್ಛತೆ ಸಮಸ್ಯೆಗೂ ಪರಿಹಾರ ಸಿಗಲಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟರು.

ಭೂಮಿ ಪೂಜೆ ಬಳಿಕ ಮಾತನಾಡಿದ ರಾಜೇಶ್ವರಿ ಸುಬ್ಬರಾಯುಡು ಅವರು, "ನಗರದ ಪ್ರತಿಯೊಂದು ವಾರ್ಡ್‌ನಲ್ಲೂ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ. ಸಾರ್ವಜನಿಕರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಹಂತ ಹಂತವಾಗಿ ಒದಗಿಸಲಾಗುತ್ತಿದೆ. ರಾಜೀವ್ ಗಾಂಧಿ ನಗರದ ನಿವಾಸಿಗಳ ಸಮಸ್ಯೆಯನ್ನು ಮನಗಂಡು ಈ ಕಾಮಗಾರಿ ಆರಂಭಿಸಲಾಗಿದೆ," ಎಂದು ತಿಳಿಸಿದರು.

ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿರುವುದಕ್ಕೆ ಸ್ಥಳೀಯ ನಿವಾಸಿಗಳು ಸಂತಸ ವ್ಯಕ್ತಪಡಿಸಿ, ರಾಜೇಶ್ವರಿ ಸುಬ್ಬರಾಯುಡು ಅವರ ಕಾರ್ಯವನ್ನು ಮೆಚ್ಚಿದರು.

ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರಾದ ಕಟ್ಟಾ ರಘು, ತುಕಾರಾಂ, ಷನ್ಮೂಘ, ಬಾಬು, ಕಟ್ಟಿ, ಜಂಬಣ್ಣ, ಲೋಕೇಶ್, ಯುವ ಮುಖಂಡ ಯೋಗಾನಂದ ರೆಡ್ಡಿ ಸೇರಿದಂತೆ ಹಲವರು ಹಾಗೂ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

# ನಾಯಿಗಳ ಸ್ಥಳಾಂತರಕ್ಕೆ ಪುರಸಭೆ ಮುಂದು



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಪಟ್ಟಣದಲ್ಲಿ ದಿನದಿಂದ ದಿನಕ್ಕೆ ಹುಚ್ಚು ನಾಯಿಗಳ ಹಾವಳಿ ಹೆಚ್ಚಾಗುತ್ತಿದ್ದು, ಇದೀಗ ಪುಟ್ಟ ಮಕ್ಕಳ ಮೇಲೂ ದಾಳಿ ನಡೆಸುತ್ತಿರುವ ಘಟನೆಗಳು ಆತಂಕಕ್ಕೆ ಕಾರಣವಾಗಿವೆ.

ಲಕ್ಷ್ಮೀ ನಗರದಲ್ಲಿ ಗೌತಮಿ ತಂದೆ ಬಸವರಾಜ್ ಎನ್ನುವ ಪುಟ್ಟ ಬಾಲಕಿಗೆ ಹಾಗೂ ಅರ್ಜುನ್ ಎನ್ನುವ ಬಾಲಕನಿಗೆ ಭಾನುವಾರ ಸಾಯಂಕಾಲ ಹುಚ್ಚು ನಾಯಿ ಕಡಿದಿರುವ ಘಟನೆ ನಡೆದಿದೆ. ನಾಯಿ ದಾಳಿಯಿಂದ ಗಾಯಗೊಂಡ ಬಾಲಕಿ ಗೌತಮಿ ಯಾದಗಿರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿದುಬಂದಿದೆ.

**ಪಟ್ಟಣದಲ್ಲಿ ಸಾರ್ವಜನಿಕರ ಮೇಲೆ ದಾಳಿ ಮಾಡುತ್ತಿರುವ ಬೀದಿ ನಾಯಿಗಳನ್ನು ಕಾರ್ಯಚರಣೆ ಮೂಲಕ ನಾಯಿಗಳನ್ನು ಹಿಡಿದು ಅವುಗಳನ್ನು ಬೇರೆಡೆ ಸ್ಥಳಾಂತರ ಮಾಡಲಾಗುತ್ತಿದೆ, ಇನ್ನೂ ಭಾನುವಾರ ದಾಳಿ ಮಾಡಿದ ಹುಚ್ಚು ನಾಯಿಯನ್ನು ಹಿಡಿಯಲಾಗಿದೆ ಸ್ಥಳೀಯರು ಯಾವುದೇ ಭಯ ಪಡುವ ಅಗತ್ಯ ಇಲ್ಲ.**

**–ಶರಣಪ್ಪ ಎಮ್. ಪುರಸಭೆ ಮುಖ್ಯಾಧಿಕಾರಿ**

ಭಾನುವಾರ ಪಟ್ಟಣದಲ್ಲಿ ಮಲ್ಲಯ್ಯ ಕಟ್ಟ ಬಡಾವಣೆಯ ನರಸಪ್ಪ ಅಳೆಗಾರ ಎನ್ನುವವರಿಗೆ ಸೇರಿದ ಹಸು ಸಾವಿಗೂ ಹುಚ್ಚು ನಾಯಿ ಕಡಿತವೇ ಕಾರಣವಾಗಿದ್ದು, ಸಾರ್ವಜನಿಕರಲ್ಲಿ ಭೀತಿ ಹೆಚ್ಚಾಗಿದೆ. ಸ್ಥಳೀಯರು ಸಂಬಂಧಪಟ್ಟ ಪುರಸಭೆ ಅಧಿಕಾರಿಗಳು ತಕ್ಷಣ ಹುಚ್ಚು ನಾಯಿ ಹಾಗೂ ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಪಶು ವೈದ್ಯಾಧಿಕಾರಿಗಳು ಹಾಗೂ ಆರೋಗ್ಯ ಇಲಾಖೆ ಸಾರ್ವಜನಿಕರು ಎಚ್ಚರಿಕೆಯಿಂದಿರಬೇಕು, ಮಕ್ಕಳನ್ನು ಒಂಟಿಯಾಗಿ ಹೊರಗೆ ಬಿಡಬಾರದು ಹಾಗೂ ನಾಯಿ ಕಡಿತವಾದ ತಕ್ಷಣ ವೈದ್ಯಕೀಯ ಚಿಕಿತ್ಸೆ ಪಡೆಯಬೇಕು ಎಂದು ಸೂಚನೆ ನೀಡಿದ್ದಾರೆ.

# 1,700ಕೋಟಿ ಹೂಡಿಕೆಗೆ ಪ್ರಸ್ತಾಪ: ಖರ್ಗೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕಲಬುರಗಿ ಜಿಲ್ಲೆಯಲ್ಲಿ ಉದ್ದೇಶಿತ ಮೆಗಾ ಜವಳಿ ಪಾರ್ಕ್ (TextilePark) ಯೋಜನೆಯು ಅತ್ಯಂತ ವೇಗವಾಗಿ ಪ್ರಗತಿ ಕಾಣುತ್ತಿದ್ದು, ಈಗಾಗಲೇ ಪ್ರಮುಖ ಹಂತದ ಪ್ರಕ್ರಿಯೆಗಳು ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಜಿಲ್ಲೆಯ ನದಿಸಿನ್ನೂರು ಮತ್ತು ಕಿರಣಗಿ ಗ್ರಾಮಗಳ ವ್ಯಾಪ್ತಿಯಲ್ಲಿ ಒಟ್ಟು 1,000 ಎಕರೆ ಜಮೀನನ್ನು ಈ ಮಹತ್ವಾಕಾಂಕ್ಷಿ ಯೋಜನೆಗಾಗಿ ಗುರುತಿಸಲಾಗಿದೆ ಎಂದು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಪಾರ್ಕ್‌ನ ಉದ್ಘಾಟನೆಗೂ ಮುನ್ನವೇ ಹೂಡಿಕೆದಾರರಿಂದ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದ್ದು, 8 ಪ್ರಮುಖ ಹೂಡಿಕೆದಾರರಿಂದ ಸುಮಾರು 1,700 ಕೋಟಿ ರೂಪಾಯಿಗಳ ಹೂಡಿಕೆಯ ಪ್ರಸ್ತಾಪಗಳು ಹರಿದುಬಂದಿವೆ ಎಂದು ಸಚಿವರು ಹೇಳಿದ್ದಾರೆ.

ಬೆಂಗಳೂರಿನಲ್ಲಿ ಇಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಜವಳಿ ಇಲಾಖೆ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಅಧಿಕಾರಿಗಳು, ಹೂಡಿಕೆದಾರರು ಮತ್ತು ವಿಡಿಯೊ ಸಂವಾದದ ಮೂಲಕ ಕಲಬುರಗಿ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ ಜವಳಿ ಪಾರ್ಕ್ ಪ್ರಗತಿ ಪರಿಶೀಲಿಸಿದರು.

ಜವಳಿ ಪಾರ್ಕಿನಲ್ಲಿ ಆರಂಭಗೊಳ್ಳಲಿರುವ ಘಟಕಗಳಿಗೆ ಅನುಕೂಲವಾಗುವಂತೆ 25 ಎಕರೆಯಲ್ಲಿ ಸೌರವಿದ್ಯುತ್ ಘಟಕವನ್ನು ಆರಂಭಿಸಲಾಗುತ್ತಿದ್ದು, ಮಾಲಿನ್ಯರಹಿತ ಹಸಿರುಶಕ್ತಿಯನ್ನು ಬಳಸಿದಂತಾಗುವುದಲ್ಲದೆ ಜಗತ್ತಿನ ತಾಪಮಾನ ಏರಿಕೆ ಹಾಗೂ ಹವಾಮಾನ ವೈಪರೀತ್ಯ ತಡೆಯಲು ಕೊಡುಗೆ ನೀಡಿದಂತಾಗುವುದು ಎಂದು ಸಚಿವರು ಸಭೆಗೆ ತಿಳಿಸಿದರು.

ಜವಳಿ ಪಾರ್ಕ್‌ಗೆ ಗುರುತಿಸಲಾಗಿರುವ ಭೂಮಿಯನ್ನು ಈಗಾಗಲೇ ಕೈಗಾರಿಕಾ ಬಳಕೆಗೆ ಪರಿವರ್ತಿಸಲಾಗಿದ್ದು, ಅರಣ್ಯ ಇಲಾಖೆಯಿಂದಲೂ ಅಗತ್ಯ ಅನುಮತಿಗಳನ್ನು ಪಡೆಯಲಾಗಿದೆ. ಇದಲ್ಲದೆ, ಬಹುಮುಖ್ಯವಾಗಿದ್ದ ಪರಿಸರ ಅನುಮತಿಯು (Environmental Clearance) ಅಕ್ಟೋಬರ್, 27, 2025 ರಂದು ಲಭ್ಯವಾಗಿದೆ ಎಂಬ ಮಾಹಿತಿಯನ್ನೂ ಸಚಿವರು ನೀಡಿದ್ದಾರೆ.

ಪಾರ್ಕ್‌ನ ಸಮಗ್ರ ಮಾಸ್ಟರ್ ಪ್ಲಾನ್, ಆರ್ಥಿಕ ಯೋಜನೆ ಹಾಗೂ ವಿವರವಾದ ಯೋಜನಾ ವರದಿ (ಆಕಖ) ಸಿದ್ಧಪಡಿಸುವ ಕಾರ್ಯ ಪೂರ್ಣಗೊಂಡಿದೆ. ಯೋಜನೆಯ ಸುಗಮ ನಿರ್ವಹಣೆಗಾಗಿ ಈಗಾಗಲೇ ಮೂರು ಪ್ರಮುಖ ಮಂಡಳಿ ಸಭೆಗಳನ್ನು (14 ಜೂನ್ 2024, 12 ನವೆಂಬರ್ 2024 ಮತ್ತು 4 ನವೆಂಬರ್ 2025) ನಡೆಸಲಾಗಿದೆ ಎಂದು ಹೇಳಿರುವ ಸಚಿವ ಪ್ರಿಯಾಂಕ್ ಖರ್ಗೆ ಈ ಜವಳಿ ಪಾರ್ಕ್ ಸ್ಥಾಪನೆಯಿಂದಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾವಿರಾರು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿದ್ದು, ಪ್ರಾದೇಶಿಕ ಆರ್ಥಿಕ ಅಭಿವೃದ್ಧಿಗೆ ಹೊಸ ದಿಕ್ಸೂಚಿ ಸಿಗಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಇಂದಿನ ಸಭೆಯಲ್ಲಿ ಹೇಳಿದರು. ಜವಳಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ರೋಹಿಣಿ ಸಿಂಧೂರಿ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಗೋವಿಂದರೆಡ್ಡಿ, ಕಲಬುರಗಿ ಜಿಲ್ಲಾಧಿಕಾರಿ ಮೊಹಮ್ಮದ್ ಇಕ್ರಮುಲ್ಲಾ ಷರೀಫ್ ಹಾಗೂ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.



# ಬಿರುಗಾಳಿ ಮಿಶ್ರಿತ ಭಾರಿ ಮಳೆ



• **ರಾಜಕುಮಾರ ಆರ್. ಹಡಪದ, ಚಿಟಗುಪ್ಪ**

ರವಿವಾರ ಸಾಯಂಕಾಲ ಬಿರುಗಾಳಿ ಮಿಶ್ರಿತ ಮಳೆ ಸುರಿದ ಹಿನ್ನಲೆ ವಿದ್ಯುತ್ ಕಂಬಗಳು ನೆಲಕ್ಕುರಳಿದ ಘಟನೆ ಪಟ್ಟಣ ಸೇರಿದಂತೆ ಬೆಳಕೇರಾ, ರಾಂಪುರ, ಮುದನ್ನಾಳ, ವಳಖಿಂಡಿ, ಉಡಬಾಳ, ಮುಸ್ತರಿ, ಬಸಿರಾಪುರ್, ರಸ್ತೆಯ ಅಕ್ಕ ಪಕ್ಕದಲ್ಲಿ ಧಾರಾಕಾರ ಮಳೆ ಜತೆಗೆ ಜೋರಾಗಿ ಗಾಳಿ ಬೀಸಿದ್ದರಿಂದ ಪಟ್ಟಣದ ಭವಾನಿ ದೇವಸ್ಥಾನ ಹತ್ತಿರ, ಜನತಾ ನಗರ ಕಾಲೋನಿ ಸೇರಿದಂತೆ ವಿವಿಧೆಡೆ ಸುಮಾರು 20 ವಿದ್ಯುತ್ ಕಂಬ ಮುರಿದು ನೆಲಕ್ಕೆ ಉರುಳಿ ಬಿದ್ದಿವೆ. ಇಡೀ ರಾತ್ರಿ ವಿದ್ಯುತ್ ಇಲ್ಲದೆ ಜನತಾ ನಗರ ಕಾಲೋನಿಯ ನಿವಾಸಿಗಳು ರಾತ್ರಿ ಸಮಯ ಕಳೆದಿರುತ್ತಾರೆ. ಸುಮಾರು ಹಣ್ಣು ಹಂಪಲುಗಳ ಗಿಡಗಳು ಸಹ ನೆಲಕ್ಕೆ ಉರುಳಿ ಬಿದ್ದಿದ್ದು ಕೆಲವು ಘಂಟೆ ಸಂಚಾರಕ್ಕೆ ತೊಂದರೆ ಉಂಟಾಯಿತು. ಗಾಳಿ ಮಳೆನಿಂತ ಮೇಲೆ ಜೆಸ್ಕಾಂ ಅಧಿಕಾರಿಗಳು ಸೇರಿದಂತೆ ಸಂಬಂಧ ಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಯಾವುದೇ ಅವಘಡ ಸಂಭವಿಸಿಲ್ಲ ಎಂದು ತಿಳಿದು ಬಂದಿದೆ.

**ರವಿವಾರ ಸಾಯಂಕಾಲ ಬಿರುಗಾಳಿ, ಮಳೆಯಿಂದ ಪಟ್ಟಣದಲ್ಲಿ ವಿದ್ಯುತ್ ಕಂಬಗಳು, ಗಿಡಗಳು ನೆಲಕ್ಕೆ ಉರುಳಿವೆ. ಇಡೀ ರಾತ್ರಿ ವಿದ್ಯುತ್ ಇಲ್ಲದೆ ನಾವು ರಾತ್ರಿ ಕಳೆಯಬೇಕೋ ಎನ್ನುವ ಅಂತಂಕದಲ್ಲಿ ನಾವುಗಳು ಇದ್ದಿದ್ದೇವೆ, ಆದರೂ ಸಹ ಇಂತಹ ಗಾಳಿ, ಮಳೆಯಲು ಸಹ ಜೆಸ್ಕಾಂ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಅವರ ಜೀವ ಪಣಕ್ಕಿಟ್ಟು ನಮ್ಮಗೆ ಇಡೀ ರಾತ್ರಿ ಆರಾಮಾಗಿ ಮಲಗಲು ವಿದ್ಯುತ್ ವ್ಯವಸ್ಥೆ ಕಲ್ಪಿಸಿದ್ದಾರೆ. ಅವರಿಗೆ ಧನ್ಯವಾದಗಳು ಸಲ್ಲಿಸುತ್ತೇವೆ.**

**–ಪಟ್ಟಣದ ನಿವಾಸಿಗಳು**

**ಬಿರುಗಾಳಿ ಇಂದ ತಾಲೂಕಿನಲ್ಲಿ ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿವೆ, ಕೂಡಲೇ ವಿದ್ಯುತ್ ಕಡಿತಗೊಳಿಸಿದ್ದೇವೆ, ಬೇಸಿಗೆ ಕಾಲಯಿರುವುದರಿಂದ ನಮ್ಮ ಸಿಬ್ಬಂದಿ ವರ್ಗದವರು ಮಧ್ಯ ರಾತ್ರಿ ವರೆಗೂ ಕಾರ್ಯಪ್ರವರ್ತರಾಗಿ ಜನರಿಗೆ ವಿದ್ಯುತ್ ವ್ಯವಸ್ಥೆ ಕಲ್ಪಿಸಲಾಗಿದೆ.**

**–ರಿಷಿಕೇಶ್, ಜೆಸ್ಕಾಂ ಎಇಇ ಮನ್ನಾಖೇಳ್ಳಿ**

# ಕೆಬಿಎನ್ ಆಸ್ಪತ್ರೆ: ಉಚಿತ ಥೈರಾಡ ಪರೀಕ್ಷೆ ಶಿಬಿರ



**ಕಲಬುರಗಿ:** ನಗರದ ಪ್ರಸಿದ್ಧ ಖಾಜಾ ಬದಾನವಾಜ ಆಸ್ಪತ್ರೆಯ ಜನರಲ್ ಮೆಡಿಸಿನ ವಿಭಾಗದಿಂದ ವಿಶ್ವ ಥೈರಾಡದಿನದ ಅಂಗವಾಗಿ ಸೋಮವಾರ ಉಚಿತ ಥೈರಾಡ ಪರೀಕ್ಷೆ ಶಿಬಿರವನ್ನು ಕೆಬಿಎನ್ ಆಸ್ಪತ್ರೆ ಒಪಿಡಿ ನಂಬರ 2 ರಲ್ಲಿ ಮುಂಜಾನೆ 9 ರಿಂದ ಮಧ್ಯಾಹ್ನ 1 ಘಂಟೆವರೆಗೆ ನಡೆಸಲಾಯಿತು. ಸುಮಾರು 200 ಜನ ಪರೀಕ್ಷೆ ಮಾಡಿಸಿಕೊಂಡರು.

ಥೈರಾಡ ಕಂಡು ಬಂದವರಲ್ಲಿ ವಿಭಾಗದ ವೈದ್ಯರಿಂದ ಚಿಕಿತ್ಸೆ ಕೂಡ ನೀಡಲಾಯಿತು. ವಿಭಾಗದ ಮುಖ್ಯಸ್ಥ ಡಾ ಅಬ್ದುಲ್ ವಹೀದ, ನಾಡೋಜ ಡಾ ಪಿಎಸ್ ಶಂಕರ,ಪ್ರೊ ಡಾ ಗಿರೀಶ್ ರೋನಾಡ,ಡಾ ಪ್ರಶಾಂತ್ ಎಡ್ ಪೊ, ಸೀನಿಯರ ವೈದ್ಯರಾದ ಡಾ ಶ್ರೀರಾಜ, ಡಾ ಶಾಕಿಬ್, ಜೂನಿಯರ ವೈದ್ಯರಾದ ಡಾ ಅನೀಶ್ ಜಿ, ಡಾ ಸೈಯದ್ ಎಂಡಿ ಹುಸೇನಿ, ಡಾ ಸುನೀಲ್ ರೆಡ್ಡಿ, ಡಾ ಅಕ್ಷಯ್ ಜಿ, ಡಾ ಪ್ರಮೋದ, ಡಾ ಆಕಾಶ್ ಮತ್ತು ಇತರರು ಹಾಜರಿದ್ದರು.

# ರಸ್ತೆ ಅಗಲೀಕರಣಕ್ಕೆ ಮನೆ ಕಳೆದುಕೊಂಡ ಕುಟುಂಬಗಳ ಆಕ್ರೋಶ



**ಬಳ್ಳಾರಿ:** ಹಳ್ಳದ ಜಮೀನು ಮತ್ತೊಬ್ಬರಿಗೆ ಮಾರಾಟ ಮಾಡಿದ ಆರೋಪದ ಪ್ರಕರಣ ಇನ್ನೂ ಮಾಸುವ ಮುನ್ನವೇ, ಬಳ್ಳಾರಿ ಮಹಾನಗರ ಪಾಲಿಕೆಯ ಏಳನೇ ವಾರ್ಡಿನ ಕಾರ್ಪೊರೇಟರ್ ಪತಿ ಶಿವರಾಜ್ ವಿರುದ್ಧ ಇದೀಗ ಮತ್ತೊಂದು ಆರೋಪ ಕೇಳಿಬಂದಿದೆ.

ವಾರ್ಡ್ ನಂ. 7 ಮತ್ತು 8ಕ್ಕೆ ಹೊಂದಿಕೊಂಡಿರುವ ರಸ್ತೆ ಅಗಲೀಕರಣ ಕಾಮಗಾರಿಯ ಹಿನ್ನೆಲೆ ಕಳೆದ ವರ್ಷ ರಸ್ತೆಯ ಒಂದು ಬದಿಯಲ್ಲಿದ್ದ ಇಪ್ಪತ್ತಕ್ಕೂ ಹೆಚ್ಚು ಕುಟುಂಬಗಳ ಮನೆಗಳನ್ನು ತೆರವುಗೊಳಿಸಲಾಗಿತ್ತು. ಆ ವೇಳೆ ಸಂತ್ರಸ್ತ ಕುಟುಂಬಗಳಿಗೆ ಬೇರೆಡೆ ನಿವೇಶನ ನೀಡುವುದಾಗಿ ಭರವಸೆ ನೀಡಲಾಗಿತ್ತು ಎನ್ನಲಾಗಿದೆ.

ಆದರೆ ವರ್ಷ ಕಳೆದರೂ ಯಾವುದೇ ವಸತಿ ವ್ಯವಸ್ಥೆ ಮಾಡಿಲ್ಲ ಎಂದು ಕುಟುಂಬಗಳು ಆರೋಪಿಸಿವೆ. ಇದೀಗ ರಸ್ತೆ ನಿರ್ಮಾಣ ಕಾಮಗಾರಿಗೆ ಮುಂದಾಗಿರುವ ಹಿನ್ನೆಲೆಯಲ್ಲಿ, ತಮಗೆ ಪರ್ಯಾಯ ನಿವೇಶನ ನೀಡುವವರೆಗೆ ರಸ್ತೆ ಕಾಮಗಾರಿ ನಡೆಸಲು ಅವಕಾಶ ನೀಡುವುದಿಲ್ಲ ಎಂದು ಸಂತ್ರಸ್ತರು ಪಟ್ಟು ಹಿಡಿದಿದ್ದಾರೆ.

ಇನ್ನೊಂದೆಡೆ, ಇದೇ ಸಂತ್ರಸ್ತರಿಗೆ ಹಳ್ಳದ ಜಮೀನಿನಲ್ಲೇ ನಿವೇಶನ ನೀಡುವುದಾಗಿ ಕಾಂಗ್ರೆಸ್ ಮುಖಂಡ ಶಿವರಾಜ್ ಹೇಳುತ್ತಿದ್ದಾರೆ ಎನ್ನುವ ಆರೋಪವೂ ಕೇಳಿಬಂದಿದೆ. ಆದರೆ ಆ ಜಾಗವನ್ನು ಈಗಾಗಲೇ ಜಿಲ್ಲಾಡಳಿತ ಒತ್ತುವರಿ ಪ್ರದೇಶವೆಂದು ಗುರುತಿಸಿ ತೆರವುಗೊಳಿಸಿರುವುದರಿಂದ, ಮತ್ತೆ ಅದೇ ಜಾಗದಲ್ಲಿ ನಿವೇಶನ ನೀಡಿದರೆ ಭವಿಷ್ಯದಲ್ಲಿ ಮತ್ತೊಮ್ಮೆ ತೆರವುಗೊಳ್ಳುವ ಭೀತಿ ಇದೆ ಎಂದು ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಹೀಗಾಗಿ ಸುರಕ್ಷಿತ ಹಾಗೂ ಕಾನೂನುಬದ್ಧ ನಿವೇಶನ ಒದಗಿಸಬೇಕು. ಇಲ್ಲವಾದರೆ ರಸ್ತೆ ಕಾಮಗಾರಿ ನಡೆಸಲು ಬಿಡುವುದಿಲ್ಲ ಎಂದು ಸಂತ್ರಸ್ತ ಕುಟುಂಬಗಳು ಎಚ್ಚರಿಕೆ ನೀಡಿವೆ.

# ಜನಪದ ಕಲೆ ಉಳಿಸಿ, ಸಂಸ್ಕೃತಿಯ ಜೀವಾಳ ಕಾಪಾಡೋಣ





• **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್**

ಜನಪದ ಕಲೆಗಳು ನಮ್ಮ ನಾಡಿನ ಸಂಸ್ಕೃತಿ, ಪರಂಪರೆ ಮತ್ತು ಜೀವನ ಶೈಲಿಯ ಪ್ರತಿಬಿಂಬವಾಗಿವೆ. ಗ್ರಾಮೀಣ ಬದುಕಿನ ಸೊಗಡು, ಜನರ ಭಾವನೆಗಳು, ಆಚರಣೆಗಳು ಹಾಗೂ ಇತಿಹಾಸವನ್ನು ಜನಪದ ಕಲೆಗಳು ಹೊತ್ತೊಯ್ಯುತ್ತವೆ. ಆದರೆ ಇಂದಿನ ಆಧುನಿಕ ಯುಗದಲ್ಲಿ ಜನಪದ ಕಲೆಗಳು ನಿಧಾನವಾಗಿ ಮಾಯವಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಎಂದು ಸಂಚಾರಿ ಠಾಣೆ–ಯ ಪಿಎಸ್ ಐ ಹುಲೇಪ್ಪಾ ಗೌಡಗೌವ ರವರು ತಿಳಿಸಿದರು.

ಶ್ರೀ ವೀರಭದ್ರೇಶ್ವರ ಚಿತ್ರಕಲಾ ಮಹಾ ವಿದ್ಯಾಲಯ ಮಾಣಿಕನಗರ ಶಿವಾ ಕಲಾವಿದರ ಸಂಘ ಚಿಂಚೊಳ್ಳಿ ಹಾಗೂ ಕನ್ನಡ ಮತ್ತು ಸಂಸ್ಕೃತ ಇಲಾಖೆ ಬೆಂಗಳೂರು, ವತಿಯಿಂದ ಭಾನುವಾರ ಆಯೋಜಿಸಿದ ಜಾನಪದ ನೃತ್ಯ ಸಾಂಸ್ಕೃತಿಕ ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತಿದ್ದರು.

ಡೊಳ್ಳು ಕುಣಿತ, ವೀರಗಾಸೆ, ಯಕ್ಷಗಾನ, ಲಾವಣಿ, ಜಾನಪದ ಹಾಡುಗಳು, ಕೀಲುಗೊಂಬೆ ಆಟ ಸೇರಿದಂತೆ ಅನೇಕ ಕಲಾರೂಪಗಳು ಗ್ರಾಮೀಣ ಭಾಗಗಳಲ್ಲಿ ಮಾತ್ರ ಸೀಮಿತವಾಗುತ್ತಿವೆ. ಯುವಜನತೆ ಪಾಶ್ಚಾತ್ಯ ಸಂಸ್ಕೃತಿಯತ್ತ ಹೆಚ್ಚು ಆಕರ್ಷಿತರಾಗುತ್ತಿರುವ ಕಾರಣ ಜನಪದ ಕಲೆಯ ಮಹತ್ವ ಕಡಿಮೆಯಾಗುತ್ತಿದೆ. ಎಂದರು. ದಶರಥ ರಾಥೋಡ ಮಾತನಾಡಿ, ಸರ್ಕಾರ ಮತ್ತು ಸಮಾಜ ಎರಡೂ ಜನಪದ ಕಲಾವಿದರ ನೆರವಿಗೆ ಬರಬೇಕಾಗಿದೆ.

ಶಾಲಾ–ಕಾಲೇಜುಗಳಲ್ಲಿ ಜನಪದ ಕಲೆಗೆ ಪ್ರೋತ್ಸಾಹ ನೀಡಬೇಕು. ಗ್ರಾಮೀಣ ಭಾಗಗಳಲ್ಲಿ ಜನಪದ ಉತ್ಸವಗಳನ್ನು ಆಯೋಜಿಸಿ ಕಲಾವಿದರಿಗೆ ವೇದಿಕೆ ಕಲ್ಪಿಸಬೇಕು. ಕಲಾವಿದರಿಗೆ ಆರ್ಥಿಕ ನೆರವು, ಮಾಸಾಶನ ಹಾಗೂ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದು ಅಗತ್ಯವಾಗಿದೆ ಎಂದರು.

ಜನಪದ ಕಲೆ ಉಳಿದರೆ ನಮ್ಮ ಸಂಸ್ಕೃತಿ ಉಳಿಯುತ್ತದೆ. ನಮ್ಮ ಮುಂದಿನ ಪೀಳಿಗೆಗೆ ನಾಡಿನ ಪರಂಪರೆಯನ್ನು ಪರಿಚಯಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಆದ್ದರಿಂದ ಎಲ್ಲರೂ ಸೇರಿ "ಜನಪದ ಕಲೆ ಉಳಿಸಿ, ಬೆಳೆಸಿ" ಎಂಬ ಸಂದೇಶವನ್ನು ಕಾರ್ಯರೂಪಕ್ಕೆ ತರಬೇಕಾಗಿದೆ ಎಂದರು. ಈ ಸಂದರ್ಬದಲ್ಲಿ, ಗುಂಡಪ್ಪ ದೊಡ್ಡಮನಿ, ವಿರೇಶರಡ್ಡಿ, ಭಾಗ್ಯಶ್ರೀ, ದೇವಿಕಾ ರಡ್ಡಿ, ರುಕ್ಮಣಿ ಬಾಯಿ, ಕಲಬುರುಗಿ ಡ್ಯಾನ್ಸ ಸಂಘ ಅಕ್ಷಯ ಎಂಕಪ್ಪಾ, ಶಿವರಾಥೋಡ, ಶಿವ ರಂಜನ, ದಿನೇಶ, ಸೇರಿದಂತೆ ಇತರರಿದ್ದರು.

# ಪೋಟೋ ರಾಮಣ್ಣರ 32 ವರ್ಷದ ದಾಂಪತ್ಯ ಜೀವನದ ಸ್ಫೂರ್ತಿದಾಯಕ ಪಯಣ

• **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಶ್ರೀ ಕೊಟ್ಟೂರೇಶ್ವರನ ನೆಲೆಬೀಡು ಕೊಟ್ಟೂರಿನಲ್ಲಿ, ಶ್ರೀ ಕೆ. ಸಿದ್ದಪ್ಪ ಹಾಗೂ ನಿಂಗಮ್ಮ ದಂಪತಿಗಳ ದ್ವಿತೀಯ ಪುತ್ರರಾಗಿ ರಾಮಣ್ಣ ಮತ್ತು ಲಕ್ಷ್ಮಣ ಎಂಬ ಅವಳಿ ಮಕ್ಕಳು ಜನಿಸಿದರು. ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದ ರಾಮಣ್ಣನವರ ಬದುಕು ಮುಂದೆ ಸಾವಿರಾರು ಜನರಿಗೆ ಪ್ರೇರಣೆ–ಯಾಗುತ್ತದೆ ಎಂದು ಆಗ ಯಾರೂ ಊಹಿಸಿರಲಿಲ್ಲ.

ಬಾಲ್ಯದಲ್ಲೇ ಜೀವನದ ಕಠಿಣ ಸತ್ಯಗಳನ್ನು ಎದುರಿಸಿದ ರಾಮಣ್ಣ, ನಾಲ್ಕನೇ ತರಗತಿಗೇ ವಿದ್ಯಾಭ್ಯಾಸಕ್ಕೆ ವಿರಾಮ ಹೇಳಿದರು. ಆದರೆ ಶಿಕ್ಷಣ ನಿಂತರೂ ಜೀವನದ ಹೋರಾಟ ನಿಲ್ಲಲಿಲ್ಲ. 1980ರ ಅಸುಪಾಸಿನಲ್ಲಿ ಕೊಟ್ಟೂರಿನ ಪ್ರಸಿದ್ಧ "ಚಾಯ ಸ್ಟೂಡಿಯೋ" ಮಾಲೀಕರಾದ ಶ್ರೀ ಶಂಕ್ರಪ್ಪ ಅವರ ಬಳಿಯಲ್ಲಿ ತಿಂಗಳಿಗೆ ಕೇವಲ 12 ರೂಪಾಯಿ ಸಂಬಳಕ್ಕೆ ಕೆಲಸಕ್ಕೆ ಸೇರಿದರು.

ಅದು ಕೇವಲ ಕೆಲಸವಲ್ಲ, ಬದುಕಿನ ಪಾಠವಾಗಿತ್ತು. ಚಿಕ್ಕವಯಸ್ಸಿನಲ್ಲೇ ಸಂಕಷ್ಟಗಳನ್ನು ಎದುರಿಸಿದರೂ ಧೈರ್ಯ ಕಳೆದುಕೊಳ್ಳದೆ "ಒಬ್ಬ ಉತ್ತಮ ಛಾಯಾಗ್ರಾಹಕನಾಗಬೇಕು" ಎಂಬ ಕನಸನ್ನು ಹೃದಯದಲ್ಲಿ ಇಟ್ಟುಕೊಂಡು ಶ್ರಮಿಸಿದರು. ಸುಮಾರು 12 ವರ್ಷಗಳ ಕಾಲ ಅನುಭವ ಮತ್ತು ಪರಿಣತಿಯನ್ನು ಸಂಪಾದಿಸಿಕೊಂಡ ರಾಮಣ್ಣನವರು ತಮ್ಮ ಜೀವನದ ಮೊದಲ ದೊಡ್ಡ ಹೆಜ್ಜೆಯಾಗಿ



ಹಗರಿಬೊಮ್ಮನಹಳ್ಳಿಯ ಬಸವೇಶ್ವರ ಬಜಾರ್‌ನಲ್ಲಿ "ಶ್ರೀ ಕೊಟ್ಟೂರೇಶ್ವರ ಫೋಟೋ ಸ್ಟೂಡಿಯೋ" ಎಂಬ ಹೆಸರಿನಲ್ಲಿ ತಮ್ಮದೇ ಅಂಗಡಿಯನ್ನು ಆರಂಭಿಸಿದರು.

ಆ ಕಾಲದಲ್ಲಿ ಕಪ್ಪು–ಬಿಳಿ ಫೋಟೋಗಳೇ ಪ್ರಸಿದ್ಧವಾಗಿದ್ದವು. ತಾಲೂಕಿನಲ್ಲಿ ಬೆರಳೆಣಿಕೆಯಷ್ಟು ಸ್ಟೂಡಿಯೋಗಳಿದ್ದ ಸಂದರ್ಭದಲ್ಲಿ ಉತ್ತಮ ಗುಣಮಟ್ಟದ ಛಾಯಾಚಿತ್ರಗಳಿಗಾಗಿ ರಾಮಣ್ಣನವರ ಸ್ಟೂಡಿಯೋ ಜನಪ್ರಿಯತೆಯನ್ನು ಗಳಿಸಿತು.

ಕಾಲ ಬದಲಾಗುತ್ತಿದ್ದಂತೆ ರಾಮಣ್ಣನವರ ಜೀವನ ಶೈಲಿಯೂ ಬದಲಾಗತೊಡಗಿತು. ಬೆಲ್ಬಾಟಮ್ ಪ್ಯಾಂಟ್, ದೊಡ್ಡ ಕಾಲರ್ ಇರುವ ಅಂಗಿ, ಕಣ್ಣಿಗೆ ದೊಡ್ಡ ಕೂಲಿಂಗ್ ಗ್ಲಾಸ್, ಸ್ಟೆಪ್ ಕಟಿಂಗ್ ಹೇರ್ ಸ್ಟೈಲ್, ವೈಟ್ ಅಂಡ್ ವೈಟ್ ಡ್ರೆಸ್ – ನೋಡಲು ಸಿನಿಮಾ ಹೀರೋನಂತಿದ್ದ ರಾಮಣ್ಣ ಜನಮನದಲ್ಲಿ "ಫೋಟೋ ರಾಮಣ್ಣ" ಎಂದು ಚಿರಪರಿಚಿತರಾದರು. ಆ ಹೆಸರು ಇಡೀ ತಾಲೂಕಿನಲ್ಲಿ ಗೌರವದ ಹೆಸರಾಯಿತು.

1994ರಲ್ಲಿ ಜೀವನದ ಎರಡನೇ ಅಧ್ಯಾಯ ಆರಂಭವಾಯಿತು. ತಮ್ಮ ಸಹೋದರಿಯ ಮಗಳು ಕುಮಾರಿ ಎ. ಸುಮ ಅವರೊಂದಿಗೆ ಹಗರಿಬೊಮ್ಮನಹಳ್ಳಿಯ ಶ್ರೀ ಗಂಗಾವತಿ ವೆಂಕಣ್ಣಯ್ಯನವರ ಛತ್ರದಲ್ಲಿ ಇವರ ವಿವಾಹ ನೆರವೇರಿತು. ಅಂದಿನಿಂದ ರಾಮಣ್ಣನವರ ಬದುಕಿನ ಚಿತ್ರವೇ ಬದಲಾಗಿತು.

ಧರ್ಮಪತ್ನಿ ಎ. ಸುಮ ಅವರು ಕೇವಲ ಗೃಹಿಣಿಯಾಗಿರದೆ, ಜೀವನದ ಏಳುಬೀಳುಗಳಲ್ಲಿ ಹೆಗಲುಕೊಟ್ಟು ನಿಂತ ನಿಜವಾದ ಸಂಗಾತಿಯಾಗಿ ಕುಟುಂಬವನ್ನು ಸಮತೋಲನದಿಂದ ಸಾಗಿಸುವಲ್ಲಿ ಯಶಸ್ವಿಯಾದರು. ಸಂಕಷ್ಟದ ದಿನಗಳಲ್ಲಿ ಧೈರ್ಯ ತುಂಬಿ, ಸಂತಸದ ದಿನಗಳಲ್ಲಿ ಬೆನ್ನೆಲುಬಾಗಿ ನಿಂತ ಸುಮಾ ಅವರ ಪಾತ್ರ ರಾಮಣ್ಣನವರ ಸಾಧನೆಯಲ್ಲಿ ಅತ್ಯಂತ ಮಹತ್ವದ್ದಾಗಿದೆ.

ಇವರ ದಾಂಪತ್ಯ ಜೀವನ ಇಂದು 32 ವರ್ಷಗಳನ್ನು ಪೂರೈಸುತ್ತಿರುವ ಈ ಸಂಭ್ರಮದ ಕ್ಷಣದಲ್ಲಿ, ಇವರ ಬದುಕು ಪ್ರೀತಿ, ತಾಳ್ಮೆ, ವಿಶ್ವಾಸ ಮತ್ತು ಪರಸ್ಪರ ಅರ್ಥೈಸಿಕೊಳ್ಳುವಿಕೆಯ ಪ್ರತಿರೂಪವಾಗಿದೆ.

ಸಾಮಾಜಿಕ ಹಾಗೂ ವೃತ್ತಿಪರ ಕ್ಷೇತ್ರದಲ್ಲಿಯೂ ರಾಮಣ್ಣನವರ ಸಾಧನೆ ಅಪಾರ. 2000ರಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಫೋಟೋಗ್ರಾಫರ್ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಸಂಘದ ಬೆಳವಣಿಗೆಗೆ ಶ್ರಮಿಸಿದರು. ಇಂದಿಗೂ ತಾಲೂಕಿನ ಫೋಟೋಗ್ರಾಫರ್ ಸಂಘದ ಗೌರವಾಧ್ಯಕ್ಷರಾಗಿ ಮಾರ್ಗದರ್ಶನ ನೀಡುತ್ತಿದ್ದಾರೆ.

2017ರಲ್ಲಿ ಮೈಸೂರು ಸಂಸ್ಥಾನದ ಈಗಿನ ರಾಜರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಂದ "ಉತ್ತಮ ಛಾಯಾಗ್ರಾಹಕ" ಪ್ರಶಸ್ತಿಯನ್ನು ಪಡೆದು ಗೌರವಿಸಲ್ಪಟ್ಟರು. ಜೊತೆಗೆ ಕರ್ನಾಟಕ ರಾಜ್ಯದ ಛಾಯಾಗ್ರಾಹಕರ ವೃತ್ತಿಪರ ಸಂಘಟನೆಗಳ ಒಕ್ಕೂಟದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕಷ್ಟಗಳಿಂದ ಆರಂಭವಾದ ಬದುಕು ಇಂದು ಸಾವಿರಾರು ನೆನಪುಗಳನ್ನು ಕಟ್ಟಿಕೊಡುವ ಛಾಯಾಗ್ರಾಹಕನ ಮಹತ್ವದ ಜೀವನ ಪಯಣವಾಗಿದೆ. "ಫೋಟೋ ರಾಮಣ್ಣ" ಎಂದರೆ ಕೇವಲ ಹೆಸರು ಅಲ್ಲ – ಅದು ಪರಿಶ್ರಮ, ಪ್ರಾಮಾಣಿಕತೆ ಮತ್ತು ಸಾಧನೆಯ ಪ್ರತೀಕ.

ಇವರ ದಾಂಪತ್ಯ ಜೀವನ ಹೀಗೆ ಇನ್ನೂ ಅನೇಕ ವರ್ಷಗಳು ಸುಖ, ಶಾಂತಿ ಮತ್ತು ಸಂತೋಷದಿಂದ ಕಂಗೊಳಿಸಲಿ ಎಂಬುದು ಎಲ್ಲರ ಹಾರೈಕೆ.

# ಡಿವಿಡೆಂಡ್ ಪಾಲನ್ನು ಮುಖ್ಯಮಂತ್ರಿಗೆ ಹಸ್ತಾಂತರಿಸಿದ ಬಿಐಎಎಲ್

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತವು (ಬಿಐಎಎಲ್) ತನ್ನಲ್ಲಿ ಶೇ.13ರಷ್ಟು ಬಂಡವಾಳ ಪಾಲು ಹೊಂದಿರುವ ರಾಜ್ಯ ಸರಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ 2025–26ನೇ ಸಾಲಿಗೆ ಅನ್ವಯವಾಗುವಂತೆ 16,49,93,400 ರೂ.ಗಳ ಲಾಭಾಂಶವನ್ನು (ಡಿವಿಡೆಂಡ್) ಸೋಮವಾರ ಹಸ್ತಾಂತರಿಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಿಐಎಎಲ್ ಅಧ್ಯಕ್ಷ ಹರಿ ಮರಾರ್ ಅವರಿಂದ ಚೆಕ್ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕೆಎಸ್‌ಐಐಡಿಸಿ ವ್ಯವಸ್ಥಾಪಕ



ನಿರ್ದೇಶಕಿ ಖುಷ್ಬೂ ಗೋಯೆಲ್ ಉಪಸ್ಥಿತರಿದ್ದರು.

ಬಿಐಎಎಲ್ 2025–26ನೇ ಸಾಲಿಗೆ ಅನ್ವಯವಾಗುವಂತೆ ಪ್ರತೀ ಷೇರಿಗೆ 3 ರೂ. ಲಾಭಾಂಶ ಘೋಷಿಸಿದೆ. ಇದರಂತೆ ಕೆಎಸ್‌ಐಐಡಿಸಿಗೆ 16.49 ಕೋಟಿ ರೂಪಾಯಿ ಒಟ್ಟು ಲಾಭಾಂಶ ಕೊಡಲಾಗಿದೆ. ಇದರಲ್ಲಿ ತೆರಿಗೆ ಕಡಿತದ ನಂತರ ಆ ಸಂಸ್ಥೆಗೆ 14.84 ಕೋಟಿ ರೂಪಾಯಿ ಡಿವಿಡೆಂಡ್ ಸಿಕ್ಕಿದೆ ಎಂದಿದ್ದಾರೆ.

ಈ ಲಾಭಾಂಶ ಘೋಷಣೆಯು ಬಿಐಎಎಲ್ ಸಂಸ್ಥೆಯ ಅತ್ಯುತ್ತಮ ಆರ್ಥಿಕ ನಿರ್ವಹಣೆಯ ಸಂಕೇತವಾಗಿದೆ. ಸಂಸ್ಥೆಯಲ್ಲಿ ಕೆಎಸ್‌ಐಐಡಿಸಿ ರಾಜ್ಯ ಸರಕಾರವನ್ನು ಪ್ರತಿನಿಧಿಸುತ್ತಿದೆ. ಬಿಐಎಎಲ್ ಸಂಸ್ಥೆಯು 2017–18ರ ಬಳಿಕ ಇದೇ ಮೊದಲ ಬಾರಿಗೆ ಡಿವಿಡೆಂಡ್ ಘೋಷಿಸಿದೆ. ಏತನ್ಮಧ್ಯೆ ನಾವು ಬಂದ ಲಾಭವನ್ನು ಮೂಲಸೌಕರ್ಯ ಮತ್ತು ಸಾಮರ್ಥ್ಯ ವಿಸ್ತರಣೆಯಂತಹ ಪ್ರಮುಖ ಯೋಜನೆಗಳನ್ನು ಪೂರ್ಣಗೊಳಿಸಿದ್ದು, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆಗಳನ್ನು ದೃಢಗೊಳಿಸಿದ್ದೇವೆ ಎಂದು ಅವರು ತಿಳಿಸಿದ್ದಾರೆ.

ಮಿಕ್ಕಂತೆ ಬಿಐಎಎಲ್ ನಲ್ಲಿ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಶೇ.13, ಎಫ್‌ಐಎಚ್ ಮಾರಿಷಸ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಶೇಕಡ 30.36 ಮತ್ತು ಆಂಕರೇಜ್ ಇನ್ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ಸ್ ಹೋಲ್ಡಿಂಗ್ಸ್ ಲಿಮಿಟೆಡ್ ಶೇಕಡ 43.64ರಷ್ಟು ಬಂಡವಾಳ ಪಾಲು ಹೊಂದಿವೆ ಎಂದು ಅವರು ನುಡಿದಿದ್ದಾರೆ.

# ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು



**ನುಡಿ–ನಡೆ**

**● ಎಂ.ಪಿ.ಎಂ.ಕೊಟ್ರಯ್ಯ**

**ಹೂವಿನಹಡಗಲಿ**

ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು..." ನಮ್ಮ ಸನಾತನ ಸಂಸ್ಕೃತಿಯಲ್ಲಿ ಮತ್ತು ಶರಣರ ಪರಂಪರೆಯಲ್ಲಿ 'ಮಾತು' ಮತ್ತು 'ಭಾವ'ಕ್ಕೆ ಅತ್ಯುನ್ನತ ಸ್ಥಾನವಿದೆ. ಶರಣರು "ಮಾತೆಂಬುದು ಜ್ಯೋತಿರ್ಲಿಂಗ" ಎಂದಿದ್ದಾರೆ. ಅಂದರೆ ನಾವು ಆಡುವ ಮಾತು ಕತ್ತಲೆಯನ್ನು ಓಡಿಸುವ ಹಣತೆಯಾಗಬೇಕು, ದಿವ್ಯತ್ವದ ಸಂಕೇತವಾಗಬೇಕು. ಆದರೆ ಇದೇ ಸಂದರ್ಭದಲ್ಲಿ, "ಮಾತು ಮನ ಕೆಡಿಸಿತು, ತೂತು ಒಲೆ ಕೆಡಿಸಿತು" ಎಂಬ ಗಾದೆಯೂ ನಮ್ಮಲ್ಲಿದೆ. ಇದು ಬದುಕಿನ ವಿಚಿತ್ರ ಸತ್ಯ. ಒಂದೇ ಮಾತು ಬದುಕನ್ನು ಹಸನಾಗಿಸಬಲ್ಲದು, ಅದೇ ಮಾತು ಸುಂದರ ಬದುಕನ್ನು ಕ್ಷಣಾರ್ಧದಲ್ಲಿ ಧೂಳೀಪಟ ಮಾಡಬಲ್ಲದು. ನಮ್ಮ ಒಳಿತು–ಕೆಡುಕು, ಧರ್ಮ–ಅಧರ್ಮ ಎಲ್ಲವೂ ನಾವು ಆಡುವ ಮಾತಿನ ಮೇಲೆಯೇ ನಿರ್ಧಾರವಾಗುತ್ತದೆ.

'ಸಿದ್ಧಾಂತ ಶಿಖಾಮಣಿ' ಎಂಬ ಮಹಾಗ್ರಂಥದಲ್ಲಿ ಒಂದು ಸುಂದರ ಶ್ಲೋಕವಿದೆ:

**ಅರ್ಥಹೀನಾ ಯಥಾ ವಾಣಿ ಪತಿಹೀನಾ ಯಥಾ ಸತೀ ।**

**ಶ್ರುತಿಹೀನಾ ಯಥಾ ಬುದ್ಧಿರ್ಭಾವಹೀನಾ ತಥಾ ಕ್ರಿಯಾ ॥**

ಮನುಷ್ಯನಾದವನು ಎಂದಿಗೂ ಅರ್ಥಹೀನವಾದ ಮಾತುಗಳನ್ನು ಆಡಬಾರದು. ನಾವು ಆಡುವ ಪ್ರತಿ ಶಬ್ದವೂ ಅರ್ಥಗರ್ಭಿತವಾಗಿರಬೇಕು. ಪತಿ ಇಲ್ಲದ ಸತಿಯ ಜೀವನದಲ್ಲಿ ಹೇಗೆ ಒಂದು ಶೂನ್ಯತೆ ಆವರಿಸುತ್ತದೆಯೋ, ವೇದಾಧ್ಯಯನ ಮತ್ತು ಸಂಸ್ಕಾರವಿಲ್ಲದ ಬುದ್ಧಿ ಹೇಗೆ ಹಾದಿ ತಪ್ಪುತ್ತದೆಯೋ, ಹಾಗೆಯೇ ಅರ್ಥವಿಲ್ಲದ ಮಾತಿಗೆ ಸಮಾಜದಲ್ಲಿ ಬೆಲೆಯಿರುವುದಿಲ್ಲ. ಹಿರಿಯರು ಎಳೆಯ ಮನಸ್ಸಿಗೆ ಬಾಲ್ಯದಲ್ಲೇ ಸಂಸ್ಕಾರ ನೀಡದಿದ್ದರೆ ಬುದ್ಧಿ ವಿಕಲಗೊಂಡು ಜೀವನ ವ್ಯರ್ಥವಾಗುತ್ತದೆ. ಅರ್ಥಹೀನವಾಗಿ ಮಾತನಾಡುವವನನ್ನು ಸಮಾಜ "ಹುಚ್ಚ" ಎಂದು ಕರೆಯುತ್ತದೆ. ಆದ್ದರಿಂದಲೇ ನಮ್ಮ ನುಡಿ ಸದಾ ತೂಕಬದ್ಧವಾಗಿರಬೇಕು.

**ದಾನಕ್ಕೂ ಬೇಕು ಮಧುರ ಭಾಷೆಯ ಹಂಗು:**

ನಮ್ಮಲ್ಲಿ "ದಾನಂ ಪ್ರಿಯವಾಕ್ಸಹಿತಂ" ಎಂಬ ಅದ್ಭುತ ನಿಯಮವಿದೆ. ಕೇವಲ ಹಣ, ವಸ್ತುಗಳನ್ನು ದಾನ ಮಾಡಿದರೆ ಸಾಲದು; ಕೊಡುವಾಗ ಆಡುವ ಮಾತು ಪ್ರೀತಿ ಮತ್ತು ಕರುಣೆಯಿಂದ ಕೂಡಿರಬೇಕು. ದಾನ ಕೊಟ್ಟು, ಆಮೇಲೆ ಅಪಶಬ್ದಗಳನ್ನಾಡಿದರೆ ಅಥವಾ ಅಹಂಕಾರದಿಂದ ವರ್ತಿಸಿದರೆ ಆ ಪುಣ್ಯವೆಲ್ಲವೂ ವ್ಯರ್ಥವಾಗುತ್ತದೆ. ಕೊಡುವ ಕೈಗಿಂತ, ಕೊಡುವಾಗ ಮಿಡಿಯುವ ಹೃದಯ ಮತ್ತು ಆಡುವ ಮಧುರ ನುಡಿ ಮುಖ್ಯ. ಇಂದಿನ ಆಧುನಿಕ ಸಮಾಜದಲ್ಲಿ ಜನ ಏನೆಲ್ಲಾ ಜಪ, ತಪ, ಹೋಮ, ಹವನ, ಯಾಗಗಳನ್ನು ಮಾಡುತ್ತಾರೆ. ಆದರೆ ಮನಸ್ಸಿನಲ್ಲಿ ಕಪಟವನ್ನಿಟ್ಟುಕೊಂಡು, ಆಸೆಗಳು ಈಡೇರದಿದ್ದಾಗ ದೇವ ನಿಂದನೆಗೆ ಇಳಿಯುತ್ತಾರೆ. ಇಂತಹ ಡಾಂಭಿಕತೆಯನ್ನು ಕಂಡು ಬೇಸತ್ತೇ ಬಸವಣ್ಣನವರು ಹೀಗೆ ಹೇಳಿದ್ದು:

"ಮಾಡಿ ಮಾಡಿ ಕೆಟ್ಟರು ಮನವಿಲ್ಲದೆಯೆ, ನೀಡಿ ನೀಡಿ ಕೆಟ್ಟರು ನಿಜಗುಣವಿಲ್ಲದೆಯೆ..."

ಮನಸ್ಸಿನಲ್ಲಿ ಪರಿಶುದ್ಧ ಭಾವವಿಲ್ಲದ ಪೂಜೆಯನ್ನು ದಾಸರು "ಉದರವೈರಾಗ್ಯದ ಪೂಜೆ" ಎಂದು ಕರೆದಿದ್ದಾರೆ.

**ಭಾವಶುದ್ಧೇನ ಮನಸಾ ಪೂಜಯೇತ್ ಪರಮೇಷ್ಠಿನಮ್**

**ಭಾವಹೀನಾಂ ನ ಗೃಹ್ಣಾತಿ ಪೂಜಾಂ ಸ ಮಹತ್ಯಪಿ ॥"**

ನಾವು ಎಷ್ಟೇ ಕೋಟಿ ಖರ್ಚು ಮಾಡಿ ಪೂಜೆ ಮಾಡಿದರೂ, ಅದರಲ್ಲಿ 'ಭಾವಶುದ್ಧಿ' ಇಲ್ಲದಿದ್ದರೆ ಆ ಭಗವಂತ ಅದನ್ನು ಸ್ವೀಕರಿಸುವುದಿಲ್ಲ. ಕಣ್ಣಿಲ್ಲದವನು ಜಗತ್ತಿನ ಸೌಂದರ್ಯವನ್ನು ಆಸ್ವಾದಿಸಲಾರ; ಹಾಗೆಯೇ ಭಾವಹೀನನಾದವನು ಎಂದಿಗೂ ಶಿವನ ಸಾಕ್ಷಾತ್ಕಾರ ಪಡೆಯಲಾರ. "ಭಾವನಾ ವಿಹಿತಂ ಕರ್ಮ ಪಾಪಾನಾಮಪಿ ಪಾವನಮ್" ಅಂದರೆ, ಸದ್ಭಾವನೆಯಿಂದ ಮಾಡುವ ಸಣ್ಣ ಕಾರ್ಯವೂ ಮಹಾ ಪಾವನವಾದುದು.

**ಕೀಟದಿಂದ ಭ್ರಮರ: ಯೋಚನೆಯೇ ರೂಪಾಂತರ:**

ಪ್ರಕೃತಿಯಲ್ಲೊಂದು ಅದ್ಭುತ ನಿಯಮವಿದೆ. ಒಂದು ಸಣ್ಣ ಕೀಟವು ಭ್ರಮರವನ್ನು (ದುಂಬಿ) ಸದಾ ಧ್ಯಾನಿಸುತ್ತಾ, ಅದರದೇ ಚಿಂತನೆಯಲ್ಲಿ ತೇ–ಊಡಗಿದ್ದಾಗ, ಕೊನೆಗೆ ತಾನೂ ಭ್ರಮರವಾಗಿಯೇ ರೂಪಾಂತರಗೊಳ್ಳುತ್ತದೆ! ಕೀಟದ ತೀವ್ರವಾದ 'ಭಾವ'ವೇ ಅದರ ದೇಹದ ರಚನೆಯನ್ನು ಬದಲಾಯಿಸುತ್ತದೆ ಎಂದಮೇಲೆ, ಭಗವಂತನ ಸೃಷ್ಟಿಯ ಶ್ರೇಷ್ಠಜೀವಿಯಾದ ಮನುಷ್ಯನು ಶುದ್ಧ ಭಾವದಿಂದ ಸಚ್ಚಿಂತನೆ ಮಾಡಿದರೆ ಏನಾಗಬೇಡ? ಮಾನವನು ತನ್ನ ಭಾವಶುದ್ಧಿಯಿಂದ ನರಹರನಾಗಬಲ್ಲ, ಮನುಜನು ಮಹಾದೇವನಾಗಬಲ್ಲ! ಹಣ, ಅಧಿಕಾರ, ಅಂತಸ್ತು, ವೈಭವ ಇವಾವುವೂ ಶಾಶ್ವತವಲ್ಲ ಎಂಬ ಸತ್ಯವನ್ನು ನಾವು ಅರಿಯಬೇಕಿದೆ. ಕೇವಲ ಭೌತಿಕ ಸುಖಗಳ ಬೆನ್ನತ್ತಿ ಹೋಗುವ ಇಂದಿನ ಸ್ವಾರ್ಥ ಸಮಾಜಕ್ಕೆ ಶರಣರ ಮತ್ತು ಗ್ರಂಥಗಳ ಈ ಸದ್ವಿಚಾರಗಳೇ ದಾರಿದೀಪ. ನಮ್ಮ ಆಡುವ ಮಾತು, ನೋಡುವ ನೋಟ, ಮಾಡುವ ಕ್ರಿಯೆ ಎಲ್ಲವೂ ಭಾವಪೂರ್ಣವಾಗಿರಲಿ, ಪರಿಶುದ್ಧ ಮನಸ್ಸಿನಿಂದ ಕೂಡಿರಲಿ. ಬನ್ನಿ, ಇಂದಿನಿಂದಲೇ ಅಹಂಕಾರ ಮತ್ತು ಡಾಂಭಿಕತೆಯನ್ನು ಬಿಟ್ಟು, ಸಚ್ಚಿಂತನೆ, ಸದ್ಭಾವ ಹಾಗೂ ಸಚ್ಚಾರಿತ್ರ್ಯದ ದಾರಿಯಲ್ಲಿ ನಡೆ–ಯೋಣ. ಸಮಾಜವನ್ನು ಸುಂದರಗೊಳಿಸೋಣ, ನಮ್ಮ ಬದುಕನ್ನು ಸಾರ್ಥಕಪಡಿಸೋಣ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)